ಬೆಂಗಳೂರು
ತನಿವಾರ, 28 ಮಾರ್ಚ್ 2026
ಸಂಪುಟ 33, ಸಂಚಿಕೆ 146, ಪುಟಗಳು 16+4
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಮತಾಂತರ ತಡೆಗಾಗಿ ಕಠಿಣ ಕಾಯ್ದೆ | ೧೨ ಪುರಾತನ ಮೂರು ಶಿಲ್ಪ ಮರಳಿ ಭಾರತಕ್ಕೆ | ೧೨ ಮನರನ್‌ಜನಾ ಹಬ್ಬ ಇಂದಿನಿಂದ ಶುರು | ೧೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪುಷ್ಯ

ದಿನದ ಮಾತು

ವಿದ್ವತ್ತು ಮತ್ತು ಸಾರ್ವಭೌಮತ್ವವನ್ನು ಒಂದಾಗಿ ಪರಿಗಣಿಸಲಾಗದು. ರಾಜನು ಆವನ ರಾಜ್ಯದಲ್ಲಿ ಮಾತ್ರ ಗೌರವಿಸಲ್ಪಡುತ್ತಾನೆ. ಆದರೆ ಒಬ್ಬ ವಿದ್ವಾಂಸ ಎಲ್ಲೆಡೆ ಗೌರವಾನ್ವಿತ.

▲ ಪಂಚತಂತ್ರ

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಇಂದು, ನಾಳೆ ತೆರೆದಿರಲಿದೆ ಉಪ ನೋಂದಣಿ ಕಚೇರಿ

• **ಬೆಂಗಳೂರು:** ರಾಜ್ಯದ ಎಲ್ಲಾ ಉಪ ನೋಂದಣಿ ಕಚೇರಿಗಳು ಶನಿವಾರ (ಮಾ.28) ಮತ್ತು ಭಾನುವಾರ (ಮಾ.29)ರ ರಜಾ ದಿನಗಳಂದು ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಕರ್ನಾಟಕ ನೋಂದಣಿ ನಿಯಮಗಳು, 1965ರ ಚಾಪ್ಟರ್-2ರ ನಿಯಮ5ಕ್ಕೆ 2024ರಲ್ಲಿ ತಂದಿರುವ ತಿದ್ದುಪಡಿಯನ್ವಯ, ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಎರಡೂ ರಜಾ ದಿನಗಳಾದ ಶನಿವಾರ ಮತ್ತು ಭಾನುವಾರ ಕರ್ತವ್ಯದ ನಿರ್ವಹಿಸುವ ದಿನಗಳೆಂದು ಘೋಷಿಸಿ ಕಂದಾಯ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಯವರು ಶುಕ್ರವಾರ ಆದೇಶಿಸಿದ್ದಾರೆ.

ಮೋದಿ, ನಾನು ಸೇರಿದರೆ ಎಲ್ಲವೂ ಸಾಧ್ಯ: ಟ್ರಂಪ್

• **ಹೊಸದಿಲ್ಲಿ:** ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ನಮ್ಮ ಚಿಂತನೆಗಳನ್ನು ನೇರ ಕೃತಿರೂಪಕ್ಕಿಳಿಸುವವರು. ಈ ತಾಕತ್ತು ಬಹುತೇಕರಿಗೆ ಇರುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಶ್ಚಿಮ ಏಷ್ಯಾ ಸಮರ ಮಧ್ಯೆ ಪ್ರಧಾನಿ ಮೋದಿ ಅವರನ್ನು ಮಗದೊಮ್ಮೆ ಹೊಗಳಿದ್ದಾರೆ. ಭಾರತದಲ್ಲಿನ ಅಮೆರಿಕ ದೂತಾವಾಸದಲ್ಲಿ ಶುಕ್ರವಾರ ಅಂಟಿಸಿರುವ ಪೋಸ್ಟ್ ಒಂದರಲ್ಲಿ ಈ ರೀತಿ ಉಲ್ಲೇಖವಿದೆ.

• ಪುಟ ೧೨

ನೋಯ್ಡಾ ಏರ್‌ಪೋರ್ಟ್ ಹಂತ 1ಕ್ಕೆ ಇಂದು ಚಾಲನೆ

• ಪುಟ ೧೨

ಇನ್ನು ಅಮೆರಿಕದ ಕರೆನ್ಸಿ ನೋಟಲ್ಲಿ ಟ್ರಂಪ್ ಸಹಿ

• ಪುಟ ೧೨

ಶ್ರೀನಗರದಲ್ಲಿ ಹಿಮಪಾತ: ಏಳು ಜನ ಸಾವು

• ಪುಟ ೧೨

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

• ಪುಟ ೨

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

• ಪುಟ ೨



ರಾಮನವಮಿ ಅಂಗವಾಗಿ ಶುಕ್ರವಾರ ಅಯೋಧ್ಯೆಯ ಶ್ರೀರಾಮನಿಗೆ ಸೂರ್ಯತಿಲಕ ಸ್ಪರ್ಶಿಸಿದ ಕ್ಷಣವನ್ನು ಪ್ರಧಾನಿ ಮೋದಿ ನೇರ ಪ್ರಸಾರ ವೀಕ್ಷಿಸಿ ನಮಿಸುತ್ತಿರುವುದು.

ಇನ್ನು ತೃತೀಯ ಭಾಷೆಗಿಲ್ಲ ಅಂಕ | ಈ ವರ್ಷದಿಂದಲೇ ಜಾರಿ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

• **ಬೆಂಗಳೂರು:** ರಾಜ್ಯದಲ್ಲಿ ಈವರೆಗೆ 625 ಅಂಕಗಳಿಗೆ ನಡೆಯುತ್ತಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು 525 ಅಂಕಗಳಿಗೆ ಇಳಿಸಲು ಸರ್ಕಾರ ತೀರ್ಮಾನಿಸಿದೆ. ಇನ್ನು ಮುಂದೆ ತೃತೀಯ ಭಾಷೆಯಲ್ಲಿ ಪಾಸ್ ಅಥವಾ ಫೇಲ್ ಎಂಬ ಪದ್ಧತಿ ಇರುವುದಿಲ್ಲ, ಅದರ ಅಂಕಗಳನ್ನು ಮುಖ್ಯ ಫಲಿತಾಂಶಕ್ಕೆ ಪರಿಗಣಿಸದೆ ಕೇವಲ ಗ್ರೇಡ್ ನೀಡುವ ವ್ಯವಸ್ಥೆಯನ್ನು ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ನಿರ್ಧರಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ತೃತೀಯ ಭಾಷೆ ಹಿಂದಿ ಪರೀಕ್ಷೆ ನಡೆಸುವುದಕ್ಕೆ ಕನ್ನಡಪರ ಸಂಘಟನೆಗಳು ಸೇರಿದಂತೆ ರಾಜ್ಯಾದ್ಯಂತ ಭಾರೀ ವಿರೋಧ ವ್ಯಕ್ತವಾಗಿತ್ತು. ಸಾರ್ವಜನಿಕರಿಂದ, ವಿವಿಧ ಸಂಘಟನೆಗಳಿಂದ ತೀವ್ರ ಒತ್ತಡ ಹಾಗೂ ಮನವಿಗಳು ಬಂದಿದ್ದವು.

ಈ ಮಧ್ಯೆ ಮಾ.31ರಂದು ನಡೆಯಬೇಕಾಗಿದ್ದ ಪರೀಕ್ಷೆಯನ್ನು ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಒಂದು ದಿನ ಮೊದಲೇ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಇದೀಗ ಈ ಪರೀಕ್ಷೆಯ ಅಂಕವನ್ನು ಪರಿಗಣಿಸುವುದಿಲ್ಲ. ಈ ಮೂಲಕ ಇದೇ ವರ್ಷದಿಂದಲೇ ತೃತೀಯ ಭಾಷೆಯನ್ನು ಕಡ್ಡಾಯ ವಿಷಯದಿಂದ ಹೊರಗಿಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

➡ಪುಟ ೭

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

2026-27ರ ಶೈಕ್ಷಣಿಕ ಸಾಲಿನಲ್ಲಿ 1ನೇ ತರಗತಿಯ ಪ್ರವೇಶ ವಯೋಮಿತಿಯಲ್ಲಿ ನೀಡಲಾಗಿರುವ 60 ದಿನಗಳ ವಿನಾಯಿತಿಯು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪಠ್ಯಕ್ರಮ (ಸಿಬಿಎಸ್‌ಇ, ಐಸಿಎಸ್‌ಇ ಒಳಗೊಂಡಂತೆ) ಶಾಲೆಗಳಿಗೂ ಅನ್ವಯಿಸುತ್ತದೆ. ಈ ಕುರಿತು ಸಿಬಿಎಸ್‌ಇ ಮತ್ತು ಇತರೆ ರಾಜ್ಯಗಳ ಪಾಲಿಸಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು. ಈ ಬಗ್ಗೆ ಈಗಾಗಲೇ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಗಿದೆ. ಇತರ ರಾಜ್ಯಗಳಲ್ಲಿನ ಶಿಕ್ಷಣ ಪದ್ಧತಿಯ ಮಾಹಿತಿ ಕೋರಲಾಗಿದೆ.

➡ಪುಟ ೭

> **ನಮ್ಮ ಸರ್ಕಾರದ ಪ್ರಮುಖ ಉದ್ದೇಶ ಸರ್ಕಾರಿ ಶಾಲೆಗಳ ಸಬಲೀಕರಣ, ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಗೊಳಿಸುವುದಾಗಿದೆ. ಈ ನಿಟ್ಟಿನಲ್ಲಿ ವಾರ್ಷಿಕ 3 ಪರೀಕ್ಷೆಗಳನ್ನು ಪಡೆಯುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಅಂಕ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.**
>
> ■ **ಮಧು ಬಂಗಾರಪ್ಪ**, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಮಧ್ಯಪ್ರಾಚ್ಯ ಬಿಕ್ಕಟ್ಟು | ಸಿಎಂಗಳ ಜತೆ ಮೋದಿ ಚರ್ಚೆ

ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಲಾಕ್‌ಡೌನ್ ಪ್ರಸ್ತಾಪವಿಲ್ಲ, ಆತಂಕ ಬೇಡ: ನಿರ್ಮಲಾ

• ಪುಟ ೧೨

ರಾಜ್ಯಕ್ಕೆ 20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

• ಪುಟ ೭

ಮಧ್ಯ ಪ್ರಾಚ್ಯ ಸಮರಾಂಗಣ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷದಿಂದ ಉಂಟಾದ ಜಾಗತಿಕ ಪರಿಸ್ಥಿತಿ ಇನ್ನೂ ಮಾರಕವಾಗಿ ಬದಲಾಗುತ್ತಿದ್ದು, ಆರ್ಥಿಕ ಮತ್ತು ವಾಣಿಜ್ಯ ಸ್ಥಿರತೆ ಕಾಯ್ದುಕೊಳ್ಳುವುದು, ಇಂಧನ ಭದ್ರತೆ ಖಚಿತಪಡಿಸಿಕೊಳ್ಳುವುದು, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಬಲಪಡಿಸುವುದು ಹಾಗೂ ನಾಗರಿಕರ ಹಿತಾಸಕ್ತಿಯನ್ನು ರಕ್ಷಿಸುವುದು ಸರ್ಕಾರದ ಪ್ರಮುಖ ಆದ್ಯತೆಗಳಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಮುಖ್ಯಮಂತ್ರಿಗಳ ಜತೆಗೆ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಪರಿಸ್ಥಿತಿಯು ನಿರಂತರ ಮೇಲ್ವಿಚಾರಣೆ ಮತ್ತು ತ್ವರಿತವಾಗಿ ಹೊಂದಿಕೊಳ್ಳುವ ಕಾರ್ಯತಂತ್ರಗಳನ್ನು ಅಗತ್ಯವನ್ನು ವಿವರಿಸುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯಗಳ ನಡುವೆ ನಿರಂತರ ಸಂವಹನ ಮತ್ತು ಸಮನ್ವಯ ಅಗತ್ಯವಿದ್ದು, ಸಮಯೋಚಿತ ಮಾಹಿತಿಯ ಹಂಚಿಕೆ ಹಾಗೂ ಜಂಟಿ ನಿರ್ಧಾರಗಳಿಂದ ಪ್ರತಿಕ್ರಿಯೆಗಳು ವೇಗವಾಗಿ ಮತ್ತು ಸಮನ್ವಯವಾಗಿ ನಡೆಯುತ್ತವೆ ಎಂದರು.

➡ಪುಟ ೭

ರಾಜ್ಯಗಳಿಗೆ ಪ್ರಧಾನಿ ಸಲಹೆ

- ಟೀಂ ಇಂಡಿಯಾ ಆಗಿ ಕೆಲಸ ಮಾಡಬೇಕು
- ಸಮಸ್ಯೆ ಪರಿಹರಿಸಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಿರಬೇಕು
- ಒಟ್ಟಾಗಿ ಕೆಲಸ ಮಾಡಿದರೆ ಸಮಸ್ಯೆ ಪರಿಹಾರ ಸುಲಭ
- ಆರ್ಥಿಕ, ವ್ಯಾಪಾರ ಸ್ಥಿತಿ ಕಾಪಾಡಿಕೊಳ್ಳಬೇಕು
- ನಾಗರಿಕರ ಹಿತಾಸಕ್ತಿ ಕಾಪಾಡಲು ಆದ್ಯತೆ ನೀಡಿ
- ತಪ್ಪು ಮಾಹಿತಿ, ವದಂತಿ ಹರಡದಂತೆ ಕ್ರಮ ವಹಿಸಿ

ಅಬಕಾರಿ ಸುಂಕ ಕಡಿತ

ಡೀಸೆಲ್‌ಗಿಲ್ಲ ತೆರಿಗೆ, ಪ್ರತಿ ಲೀಟರ್ ಪೆಟ್ರೋಲ್‌ಗೆ 10 ರೂ. ಇಳಿಕೆ , ಬೆಲೆ ಏರಿಕೆ ತಡೆಗೆ ಕೇಂದ್ರ ಕ್ರಮ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿ ನಡುವೆ ಜಾಗತಿಕ ಕಚ್ಚಾ ತೈಲ ಬೆಲೆಗಳು ಏರಿಕೆಯಾಗುವ ಆತಂಕ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿದೆ.

➡ಪುಟ ೭

ಕೆಎಸ್‌ಸಿಎಗೆ ಡಿಕೆಶಿ ಸೂಚನೆ | ಡಿಸಿಎಂ ನೇತೃತ್ವದ ಸಭೆ ನಿರ್ಧಾರ

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

• **ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯಗಳಿಗೆ ನಾಲ್ಕು ಟಿಕೆಟ್‌ಗಳಿಗೆ ಬೇಡಿಕೆಯಿಟ್ಟಿದ್ದ ಶಾಸಕರಿಗೆ ಎರಡು ಟಿಕೆಟ್ ಕೊಡಿಸುವಲ್ಲಿ ಡಿಸಿಎಂ ಯಶಸ್ವಿಯಾಗಿದ್ದಾರೆ. ಮೊದಲ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಎರಡು ಟಿಕೆಟ್ ನೀಡುವಂತೆ ಕೆಎಸ್‌ಸಿಎಗೆ ಸೂಚಿಸಿದ್ದಾರೆ.

ಸಂಸದರು ಹಾಗೂ ಶಾಸಕರಿಗೆ ಐಪಿಎಲ್ ಸೇರಿದಂತೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಟಿಕೆಟ್ ವಿತರಣೆ ಸಂಬಂಧ ವಿಧಾನಸಭೆ ಕಲಾಪದಲ್ಲಿ ವಿಷಯ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಹಾಗೂ ಸ್ಪೀಕರ್ ಯು. ಟಿ. ಖಾದರ್ ಅವರು ನೀಡಿದ ಸೂಚನೆ ಮೇರೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್ ಮತ್ತಿತರರ ಜತೆ ವಿಧಾನಸೌಧದಲ್ಲಿ ಶುಕ್ರವಾರ ಸಮಾಲೋಚನೆ ನಡೆಸಿದರು.

➡ಪುಟ ೭

ಸುರಕ್ಷತೆ ಕುರಿತು ಸಿಎಸ್ ಸಭೆ

ಶನಿವಾರದಿಂದ (ಮಾ.28) ಐಪಿಎಲ್ ಪಂದ್ಯಾವಳಿಗಳು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕೆಎಸ್‌ಸಿಎ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸುರಕ್ಷತೆ ಕುರಿತಾಗಿ ಸುದೀರ್ಘ ಸಭೆ ನಡೆಸಿ ಸಲಹೆ, ಸೂಚನೆಗಳನ್ನು ನೀಡಿದರು.

➡ಪುಟ ೭

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಸಾದಿಕ್ ಪೈಲ್ವಾನ್ ಚುನಾವಣಾ ಕಣದಿಂದ ಹಿಂದೆ ಸರಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಶಸ್ವಿಯಾಗಿದ್ದಾರೆ.

ನಾಮಪತ್ರ ಸಲ್ಲಿಸಿದ್ದ ಸಾದಿಕ್ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಖುದ್ದಾಗಿ ಭೇಟಿ ಮಾಡಿದ ಸಿಎಂ ಹಾಗೂ ಡಿಸಿಎಂ ಅವರು ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕಡೆ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

➡ಪುಟ ೭

> **ರಾಜ್ಯದಲ್ಲಿ ಕೆಲವು ಬೆಳವಣಿಗೆಗಳಾಗಿತ್ತು. ಈಗ ಕಾಂಗ್ರೆಸ್‌ನಲ್ಲಿ ಸಂಭ್ರಮದ ದಿನ. ಕಾಂಗ್ರೆಸ್‌ನ ಮನೆಯವರೇ ವಾಪಸ್ ಮನೆಯನ್ನು ಸೇರಿದ್ದಾರೆ. ಎಲ್ಲವೂ ಬಗೆಹರಿದಿದೆ.**
>
> ■ **ರಣದೀಪ್‌ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ರಾಮನವಮಿ ದಿನ ಲಕ್ಷಾಂತರ ಭಕ್ತರಿಂದ ರಾಮಲಲಾ ದರ್ಶನ

• **ಅಯೋಧ್ಯೆ:** ಚೈತ್ರ ನವರಾತ್ರಿಯ ಒಂಭತ್ತನೇ ದಿನ ಅವತರಿಸಿದ ಭಗವಾನ್ ಶ್ರೀರಾಮಚಂದ್ರನ ಅಯೋಧ್ಯಾ ಮಂದಿರದಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಸೇರಿದ್ದರು. ರಾಮನವಮಿ ಹಿನ್ನೆಲೆಯಲ್ಲಿ ದ್ವಿತೀಯ ಬಾರಿ ವಿಶಿಷ್ಟವಾಗಿ ಸೂರ್ಯತಿಲಕದಿಂದ ಪ್ರಕಾಶಿತ, ಪುಷ್ಪ -ಆಭರಣಗಳಿಂದ ಶೋಭಿತ ರಾಮಲಲಾನ ಕಾಣಲು, ಬಾಲರಾಮನ ದರ್ಶನ ಮಾತ್ರದಿಂದಲೆ ಪುನೀತರಾಗಲು ಭಕ್ತರು ಮುಂಜಾನೆಯಿಂದಲೇ ಪ್ರವಾಹೋಪಾದಿಯಲ್ಲಿ ಶ್ರೀರಾಮಮಂದಿರದತ್ತ ಹೆಜ್ಜೆ ಹಾಕಿದ್ದರು. ಮಧ್ಯಾಹ್ನ 12 ಗಂಟೆಗೆ ಪವಿತ್ರ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಸೂರ್ಯ ತಿಲಕ ವಿಧಿಯನ್ನು ವಿಧಿಬದ್ಧವಾಗಿ ನೆರವೇರಿಸಲಾಯಿತು. ವಿಧಿಪ್ರಕಾರ ಆದಿತ್ಯನ ತೇಜೋಮಯ ಪ್ರಖರ ರಶ್ಮಿಗಳು ಭಗವಂತನ ಹಣೆ ಭಾಗವನ್ನು ನೇರವಾಗಿ ಸ್ಪರ್ಶಿಸಿದ್ದವು.

• ವಿವರ ಪುಟ ೧೨

ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಸಾವು

ಹಾವು ಕಡಿತದಿಂದ ಸಾವು ಹೆಚ್ಚಳ

ನಂದಿನಿ ಎನ್.

• **ಬೆಂಗಳೂರು:** ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 273ಕ್ಕೂ ಹೆಚ್ಚು ಮಂದಿ ಹಾವು ಕಚ್ಚಿದ್ದರಿಂದ ಮೃತಪಟ್ಟಿದ್ದು, ಗ್ರಾಮೀಣ ಭಾಗಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿವೆ.

ಅದರಲ್ಲೂ, ರಾಜ್ಯದಲ್ಲಿ ಹಾವು ಕಡಿತದಿಂದ ಅಸುನೀಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ಸಾವಿನ ಸಂಖ್ಯೆ ಹೆಚ್ಚಲು ಹಲವು ಕಾರಣಗಳಿವೆ. ಹಾವಿನ ವಿಷವು ನರಮಂಡಲ, ರಕ್ತ ಅಥವಾ ಸ್ನಾಯುಗಳ ಮೇಲೆ ಪರಿಣಾಮ ಬೀರಿ, ಚಿಕಿತ್ಸೆ ವಿಳಂಬವಾದರೆ ಶ್ವಾಸಕೋಶದ ವೈಫಲ್ಯ ಅಥವಾ ಹೃದಯಸ್ತಂಭನದಿಂದ ಸಾವು ಸಂಭವಿಸುತ್ತದೆ. ಹಾವು ಕಡಿತ ಪ್ರಕರಣಗಳು ಹಾಗೂ ಮೃತಪಡುವವರ ಸಂಖ್ಯೆಯ ವರದಿ ಪ್ರಮಾಣವು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಪ್ರತಿ ವರ್ಷ ಭಾರತದಲ್ಲಿ 50 ಸಾವಿರ ಮರಣಗಳು ಸಂಭವಿಸುತ್ತಿವೆ. ಅದರಂತೆ ರಾಜ್ಯದಲ್ಲಿ, ಹಾವು ಕಡಿತದಿಂದ 2023ರಲ್ಲಿ 19 ಜನ ಮೃತಪಟ್ಟರೆ, 2024ರಲ್ಲಿ 100 ಜನ, 2025ರಲ್ಲಿ 154 ಜನರು ಮೃತಪಟ್ಟಿದ್ದಾರೆ.

➡ಪುಟ ೭

ವರ್ಷದಿಂದ ವರ್ಷಕ್ಕೆ ಏರಿಕೆ

ಮೃತಪಟ್ಟ ಕುಟುಂಬಕ್ಕೆ ಪರಿಹಾರ

ಹಾವು ಕಡಿತದಿಂದ ಮೃತಪಟ್ಟವರ ಕುಟುಂಬಕ್ಕೆ, ಜಿಲ್ಲಾಡಳಿತದ ಮೂಲಕ ಅರ್ಜಿ ಸಲ್ಲಿಸಿದರೆ ಪರಿಹಾರ ಮೊತ್ತ ಲಭ್ಯವಾಗಲಿದೆ. ಅಲ್ಲದೆ, ರಾಜ್ಯದ ಸರ್ಕಾರಿ, ಸಂಯೋಜಿತ ಖಾಸಗಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಉಚಿತ ಚಿಕಿತ್ಸೆ ಒದಗಿಸಲು ಆದೇಶಿಸಲಾಗಿದೆ. ಆದರೆ, ಪರಿಹಾರ ಪಡೆಯಲು ಮರಣೋತ್ತರ ಪರೀಕ್ಷಾ ವರದಿ, ಪೊಲೀಸ್ ದೂರು, ಮತ್ತು ಮರಣ ಪ್ರಮಾಣಪತ್ರ ಕಡ್ಡಾಯಗೊಳಿಸಲಾಗಿದೆ.

ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

• **ಕಠ್ಮಂಡು:** ನೇಪಾಳ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಬಾಲೇಂದ್ರ ಶಾ ಅವರು ಶುಕ್ರವಾರ ನೇಪಾಳದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ನಾಯಕರಿಗೆ ರಾಷ್ಟ್ರಪತಿಗಳ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮಚಂದ್ರ ಪೌಡೆಲ್ ಅವರು ಪ್ರಮಾಣವಚನ ಬೋಧಿಸಿದರು. ಈ ತಿಂಗಳ ಸಂಸತ್ ಚುನಾವಣೆಯಲ್ಲಿ ಆರ್‌ಎಸ್‌ಪಿ ಅಭೂತಪೂರ್ವ ಗೆಲುವು ದಾಖಲಿಸಿತ್ತು. ಕಠ್ಮಂಡುವಿನ ಮಾಜಿ ಮೇಯರ್ ಆಗಿರುವ ಷಾ, ನೇಪಾಳದ ಉನ್ನತ ಹುದ್ದೆಗೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಅತ್ಯಂತ ಕಿರಿಯ ನಾಯಕರಾಗಿದ್ದಾರೆ.

➡ಪುಟ ೭

SHAKTHI PU COLLEGE
Shakthinagar , Mangalore
ADMISSIONS OPEN FOR PU COLLEGE
AY 2026-27
Enroll now and provide them with the tools they need to succeed in a supportive learning environment.
✓ NEET • JEE • KCET Integrated Coaching
✓ Well-equipped library for excellent learning
✓ Regular Tests, Revision & Doubt-Clearing Sessions
✓ Industrial Visits & Practical Exposure
ENROLL NOW
CONTACT US ☎ 9686000046, 9108043552 shakthi.edu.in

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,40,000**(2,50,100) ಅಪರಂಜಿ ಚಿನ್ನ: **1,44,710**(1,46,890) ಆಭರಣ ಚಿನ್ನ: **1,32,650**(1,34,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **73,583**(1,690▼) ಎನ್‌ಎಸ್‌ಇ **22,819**(486▼) $1=₹93.97

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅಭಿಮತ

ನಾವು ಮೌಲ್ಯಾಧಾರಿತ ಸಮಾಜದೆಡೆಗೆ ಸಾಗುವಂತಾಗಲಿ

• **ಮೈಸೂರು:** ನಿಯಮಾಧಾರಿತವಾಗಿರುವ ಸಮಾಜದಿಂದ ಮೌಲ್ಯಾಧಾರಿತ ಸಮಾಜದೆಡೆಗೆ ಸಾಗಬೇಕಾದ ಅನಿವಾರ್ಯತೆ ಇದೆ ಎಂದು ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ಮೂರನೇ ದಿನವಾದ ಶುಕ್ರವಾರ ನಡೆದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಚಾರ ಸಂಕಿರಣದಲ್ಲಿ Philosophy to Policy Contemporary Political, Economic and Civilizational Challenges: Bharatiya Perspective ವಿಷಯ ಕುರಿತು ನಡೆದ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ತನ್ನ ಮೌಲ್ಯಗಳಿಂದ ದೇವರಾಗುವುದು ಎನ್ನುವುದನ್ನು ತೋರಿಸಿಕೊಟ್ಟು, ಸಕಲ ಕಾಲಕ್ಕೂ ಮಾದರಿಯಾದವನು ಪ್ರಭು ಶ್ರೀರಾಮ ಎಂದರು.

ಭಾರತೀಯ ದೃಷ್ಟಿಕೋನದ ಅನುಷ್ಠಾನಕ್ಕೆ ವ್ಯಕ್ತಿ, ಸಮಾಜ, ಶಿಕ್ಷಣ ಕ್ಷೇತ್ರ, ನೀತಿ ನಿರೂಪಕರು ಮತ್ತು ಅಧಿಕಾರಿ ವರ್ಗ, ಜನಪ್ರತಿನಿಧಿಗಳ ಹಂತಗಳಲ್ಲಿ ಸವಾಲುಗಳು ಎದುರಾಗುತ್ತವೆ. ಇವೆಲ್ಲವಕ್ಕಿಂತಲೂ ಒಂದು ದೊಡ್ಡ ಸವಾಲಾಗಿ ಪಾಶ್ಚಾತ್ಯ ಯೋಚನೆ, ಜೀವನ ಶೈಲಿಯಿಂದ ಪ್ರಭಾವಕ್ಕೆ ಒಳಗಾಗಿರುವ ಜನಮಾನಸ ನಮ್ಮ ಮುಂದಿದೆ. ಸಮಾಜವನ್ನು ನಿರ್ವಸಾಹತೀಕರಣ ಮಾಡಬೇಕು. ಆದರೆ ಅದಕ್ಕಾಗಿ ಪ್ರಯತ್ನಿಸುವವರೇ ವಸಾಹತುಶಾಹಿ ಮಾನಸಿಕತೆಗೆ ಒಳಗಾಗಿರುವಾಗ ಈ ಪ್ರಯತ್ನ ಸಫಲಗೊಳ್ಳುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ವಿಮರ್ಶೆ ಮುಖ್ಯವಾಗಲಿ

ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ವಸ್ತು ಹೇಗಿದೆ ಮತ್ತು ಹೇಗಿರಬೇಕು ಎನ್ನುವುದರ ವಿಮರ್ಶೆ ಮುಖ್ಯ. ನಾವು ಪ್ರಸ್ತುತ ಅಳವಡಿಸಿಕೊಂಡಿರುವ ಅಧ್ಯಯನ ಮತ್ತು ಅಧ್ಯಾಪನದ ಮಾದರಿ ಸರಿಯಿದೆಯೇ ಎಂದು ಅಳೆಯುವುದಕ್ಕೆ ಸರಿಯಾದ ಮಾನದಂಡಗಳನ್ನು ಗುರುತಿಸಬೇಕು. ಈಗಾಗಲೇ ಏಕಾತ್ಮಮಾನ ದರ್ಶನದ ಹಾದಿಯಲ್ಲಿ ಮುನ್ನಡೆಯುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ, ರಾಷ್ಟ್ರೋತ್ಥಾನ ಪರಿಷತ್, ಅನೇಕ ಗುರುಕುಲಗಳು, ರಾಮಕೃಷ್ಣ ಮಿಷನ್ ಆದಿಯಾಗಿ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ಅಳವಡಿಸಿಕೊಂಡಿರುವ ಮಾದರಿಗಳನ್ನು ನಮ್ಮ ಅನೇಕ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ಬಿ.ಎಲ್. ಸಂತೋಷ್ ಹೇಳಿದರು.

ಸಿದ್ಧಾಂತಹೀನ ಮತದಾರ, ಸಿದ್ಧಾಂತ ಹೀನ ರಾಜ್ಯ ವ್ಯವಸ್ಥೆಯನ್ನು ನಿರ್ಮಿಸುತ್ತಾನೆ. ಇದರಿಂದಾಗಿ ಭವಿಷ್ಯದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅನ್ಯ ರಾಜ್ಯಗಳಲ್ಲಿ ರಾಜ ಮತ್ತು ಋಷಿಯ ವ್ಯವಸ್ಥೆ ಇದೆ. ಭಾರತದಲ್ಲಿ ಮಾತ್ರ ಅವುಗಳ ಸಮನ್ವಯಗೊಂಡ ರಾಜರ್ಷಿ ಎಂಬ ಕಲ್ಪನೆಯೂ ಇದೆ. ಎಲ್ಲಾ ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮ ಜನಪ್ರತಿನಿಧಿಗಳಿದ್ದಾರೆ. ಆದರೆ, ಪೀಳಿಗೆಗೊಬ್ಬ ಉತ್ತಮ ಜನಪ್ರತಿನಿಧಿಯ ನಿರ್ಮಾಣವಾಗುತ್ತಿದೆ. ಅಂತಹವರ ಸಂಖ್ಯೆ ಹೆಚ್ಚಾಗಬೇಕು. ರಾಜ್ಯದ ನಿಯಂತ್ರಣ ಕಡಿಮೆಯಾಗಿ ಸಮಾಜ ಕೇಂದ್ರಿತ ನಿರ್ವಹಣೆ ಜಾಸ್ತಿಯಾಗಬೇಕು. ಹೆಚ್ಚು ಮೌಲ್ಯಗಳು ಮುನ್ನೆಲೆಗೆ ಬರಬೇಕು. ಅದಕ್ಕಾಗಿ ಮತದಾರ ಜಾಗೃತನಾಗಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಪ್ರೊ.ಕೆ.ವಿ.ರಾಜು, ವಿವಿಧ ಕ್ಷೇತ್ರದಲ್ಲಿ ಏಕಾತ್ಮಮಾನವ ದರ್ಶನವನ್ನು ಯಾವ ಹಂತದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಸ್ಪಷ್ಟತೆ ನಮಗೆ ಇರಬೇಕು ಎಂದರು.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಾಂತಿಶ್ರೀ ಧುಲಿಪುಡಿ ಪಂಡಿತ ಮಾತನಾಡಿ, ಭಾರತೀಯ ಕಥನವನ್ನು ಸಮರ್ಥವಾಗಿ ಜಗತ್ತಿನ ಎದುರು ಇಡುವುದಕ್ಕೆ ಸಹಕಾರಿಯಾಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಸಿದ್ಧಪಡಿಸಬೇಕು. ಧ್ರುವೀಕರಣಗೊಂಡಿರುವ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಭಾರತೀಯ ನಾಗರಿಕತೆಯ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಪಸರಿಸುವ ಅವಶ್ಯಕತೆ ಹೆಚ್ಚಿದೆ ಎಂದರು.

ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶುಕ್ರವಾರ ಶ್ರೀರಾಮ ನವಮಿ ಆಚರಣೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾಗವಹಿಸಿದ್ದರು. ಬೆಂಗಳೂರು ವಿಭಾಗ ಪ್ರಭಾರಿ ರಾಜಣ್ಣ, ಸಹ ಪ್ರಭಾರಿ ಕಿರಣ್ ಇದ್ದರು.

ಕಿರುಸುದ್ದಿ

ಇಂದು ವೈರಮುಡಿ ಕಿರೀಟ ಧಾರಣೆ

• **ಮಂಡ್ಯ:** ಮಾ. 28 ರಂದು ಶ್ರೀ ವೈರಮುಡಿ ಕಿರೀಟಧಾರಣೆ ಉತ್ಸವ ನೆರವೇರಲಿದೆ. ವೈರಮುಡಿ ಬ್ರಹ್ಮೋತ್ಸವ ಸಂಬಂಧ ದೇವಾಲಯ ಮತ್ತು ಇತರೆ ಇಲಾಖೆಗಳಿಂದ ಕ್ಷೇತ್ರದಲ್ಲಿ ಕೈಗೊಳ್ಳಬೇಕಾಗಿರುವ ಪೂರ್ವಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮಗಳ ಸಿದ್ಧತಾ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ವೈರಮುಡಿ ಕಿರೀಟಧಾರಣೆ ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸಾರಿಗೆ ಸಂಸ್ಥೆ ವತಿಯಿಂದ ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ಎಲ್ಲಾ ಪ್ರಮುಖ ಪಟ್ಟಣ, ನಗರ ಭಾಗಗಳಿಂದ ಸುಮಾರು 140 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮುಂಗಡ ಸೀಟು ಕಾಯ್ದಿರಿಸುವ ವ್ಯವಸ್ಥೆ ಹಾಗೂ ಮಂಡ್ಯ ನಗರದಿಂದ ನಿರಂತರ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ದಾಸೋಹ ವ್ಯವಸ್ಥೆ: ದೇವಾಲಯದ ದಾಸೋಹ ಭವನದಲ್ಲಿ ವೈರಮುಡಿ ಬ್ರಹ್ಮೋತ್ಸವ ನಡೆಯುವ ದಿನ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಮಾ 28 ರಂದು ಬೆಳಗ್ಗೆ 08. 00 ಗಂಟೆಯಿಂದ ಮಾ. 29 ರಂದು ಬೆಳಗ್ಗೆ 08-00 ಗಂಟೆಯವರೆಗೆ ನಿರಂತರವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

24ಗಂಟೆಗಳ ಆರೋಗ್ಯ ಸೇವೆ: ವೈರಮುಡಿ ಬ್ರಹ್ಮೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮತ್ತು ಸಾರ್ವಜನಿಕರು ಭಾಗವಹಿಸುವುದರಿಂದ ತುರ್ತು ವೈದ್ಯಕೀಯ ಸೇವೆ ಹಾಗೂ ಇತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಮೂರು ಮಕ್ಕಳ ಸಹಿತ ತಾಯಿ ಆತ್ಮಹತ್ಯೆ

• **ಇಂಡಿ:** ಜೀವನದಲ್ಲಿ ಜಿಗುಪ್ಸೆಗೊಂಡು ಮಹಿಳೆಯೊಬ್ಬಳು ತನ್ನ ಮೂರು ಮಕ್ಕಳೊಂದಿಗೆ ಬಾವಿಯಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಮಿರಗಿ ಗ್ರಾಮದ ಜಮೀನೊಂದರಲ್ಲಿ ಸಂಭವಿಸಿದೆ. ಮೃತ ಮಹಿಳೆ ಮಿರಗಿ ಗ್ರಾಮದ ರಾಜಶ್ರೀ ಶಂಕ್ರೆಪ್ಪ ಹಳ್ಳೂರ(29) ಎಂದು ಗುರುತಿಸಲಾಗಿದ್ದು, ತನ್ನ ತವರು ಮನೆ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಧರಿಕೊಣ್ಣೂರು ಗ್ರಾಮಕ್ಕೆ ಹೋಗಿ ಬರುತ್ತೇನೆ ಎಂದು ತನ್ನ ಗಂಡನನ್ನು ಕೇಳಿದಾಗ ಇಂದು ಬೇಡ ನಾಳೆ ಹೋಗು ಎಂದು ಮುಂದೂಡುತ್ತಾ ಬಂದ ಪರಿಣಾಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಮಹಿಳೆ ತನ್ನ ಮಕ್ಕಳಾದ ಅನುಶ್ರೀ(6), ತನುಶ್ರೀ (3), ಸಂತೋಷ(1) ಮುಗ್ಧ ಮಕ್ಕಳನ್ನು ಬಾವಿಗೆ ತಳ್ಳಿ ತಾನು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಕುರಿತು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಜಲು ಹೋದ ನಾಲ್ವರ ಸಾವು

• **ರಾಯಚೂರು:** ಆಂಧ್ರ ಪ್ರದೇಶದ ಕರ್ನೂಲ ಜಿಲ್ಲಾ ಆದೋನಿ ತಾಲೂಕಿನ ಕಂದುಕೂರು ಬಳಿ ತುಂಗಭದ್ರಾ ನದಿಯಲ್ಲಿ ಈಜಲು ಹೋದ ಜಿಲ್ಲೆಯ ನಾಲ್ವರು ಮೃತಪಟ್ಟ ಘಟನೆ ನಡೆದಿದೆ. ಮೃತರನ್ನು ಜಿಲ್ಲೆಯ ಮಾನ್ವಿ ತಾಲೂಕಿನ ಕುರಿಡಿ ಗ್ರಾಮದ ದಾಸರ ಉಮಾಪತಿ (28), ದಾಸರ ರತ್ನಮ್ಮ (26), ದಾಸರ ಶಿವಾನಂದ (20) ಮತ್ತು ದಾಸರ ಮಹೇಶ್ (20) ಎಂದು ಗುರುತಿಸಲಾಗಿದೆ. ಮೃತರು ಆಂಧ್ರ ಪ್ರದೇಶದ ಕಂದುಕೂರು ಗ್ರಾಮದಲ್ಲಿ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ಮರಳಿ ಸ್ವಗ್ರಾಮಕ್ಕೆ ಮರಳುವ ಸಂದರ್ಭದಲ್ಲಿ ಬಿಸಿಲಿನ ತಾಪವನ್ನು ತಾಳಲಾರದೇ ನದಿಯಲ್ಲಿ ಈಜಲು ಹೋಗಿದ್ದಾರೆ. ಆದರೆ, ಇವರು ನದಿಯಲ್ಲಿ ಈಜಲು ಹೋದ ಜಾಗ ಬಹಳ ಆಳವಿದ್ದ ಕಾರಣ ಇವರು ಕಾಲು ಜಾರಿ ಗುಂಡಿಗೆ ಬಿದ್ದ ಕಾರಣ ಇವರೆಲ್ಲ ಮೃತಪಟ್ಟಿದ್ದಾರೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸರ್ಕಾರ ನಿರ್ದೇಶನ

ಬಾಕಿ ಹಣ ನೀಡದ ಸಕ್ಕರೆ ಕಾರ್ಖಾನೆಗಳಿಗೆ ನೋಟಿಸ್

• **ಬೆಂಗಳೂರು:** ರಾಜ್ಯದಲ್ಲಿ ಪ್ರಸಕ್ತ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, ನಾಲ್ಕು ಸಹಕಾರಿ ಸೇರಿದಂತೆ ಒಟ್ಟು 16 ಸಕ್ಕರೆ ಕಾರ್ಖಾನೆಗಳು ನಿಯಮಾನುಸಾರ ಕಬ್ಬಿನ ಬಿಲ್ ಪಾವತಿ ಮಾಡದ ಕಾರಣ ರಿಕವರಿ ಸರ್ಟಿಫಿಕೇಟ್ (ವಸೂಲಾತಿ ದೃಢೀಕರಣ ಪತ್ರ) ಜಾರಿ ಮಾಡಲಾಗಿದೆ.

ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ ಬಾಕಿಯನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ಪ್ರತಿಶತ 15 ರಷ್ಟು ಬಡ್ಡಿಯೊಂದಿಗೆ ರೈತರಿಗೆ ಕೊಡಿಸಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕ ಗೋವಿಂದರೆಡ್ಡಿ ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕೆಲವು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿದ್ದು, ಅಂತಹ ಕಾರ್ಖಾನೆಗಳಿಗೆ ಬಾಕಿಯನ್ನು ತಕ್ಷಣ ಪಾವತಿ ಮಾಡಬೇಕು ಎಂದು ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ನೀಡಿದ ನಂತರವೂ ಕೆಲವು ಕಾರ್ಖಾನೆಗಳು ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ರಿಕವರಿ ಸರ್ಟಿಫಿಕೇಟ್ ಜಾರಿ ಮಾಡಲಾಗಿದೆ ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ತಿಳಿಸಿದ್ದಾರೆ.

ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಕಾರ್ಖಾನೆಗಳು ಘೋಷಿಸಿದ ದರದಂತೆ ಪ್ರತಿ ಟನ್ ಕಬ್ಬಿಗೆ 250 ರಿಂದ 300 ರೂ. ಹೆಚ್ಚಳವಾಗಿದೆ. ಕಬ್ಬಿನ ಬಿಲ್ ಪಾವತಿಯನ್ನು ಹೋಲಿಕೆ ಮಾಡಿದರೆ ಕಳೆದ ಹಂಗಾಮಿಗಿಂತ 4,709 ಕೋಟಿ ರೂ. ಹೆಚ್ಚಳವಾಗಲಿದೆ. ಕಬ್ಬಿನ ಬಿಲ್ ಪಾವತಿಯಲ್ಲಿ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ.

2022-23ರ ಹಂಗಾಮಿನಲ್ಲಿ ಪ್ರತಿಶತ 102ರಷ್ಟು, 2023-24ರ ಹಂಗಾಮಿನಲ್ಲಿ ಪ್ರತಿಶತ 104ರಷ್ಟು ಹಾಗೂ 2024-25ನೇ ಹಂಗಾಮಿನಲ್ಲಿ ಪ್ರತಿಶತ 107.39ರಷ್ಟು ಹಣವನ್ನು ಪಾವತಿ ಮಾಡಲಾಗಿದ್ದು, ಇದು ಎಫ್.ಆರ್.ಪಿ ದರಕ್ಕಿಂತ ಹೆಚ್ಚಿದೆ. ಕಳೆದ ಹಂಗಾಮಿಗೆ ಹೋಲಿಕೆ ಮಾಡಿದರೆ ಈ ಹಂಗಾಮಿನಲ್ಲಿ, ಕಬ್ಬು ನುರಿಸುವಿಕೆ ಮತ್ತು ಸಕ್ಕರೆ ಉತ್ಪಾದನೆ ಪ್ರಮಾಣದಲ್ಲಿ ಪ್ರತಿಶತ 9 ರಷ್ಟು ಏರಿಕೆಯಾಗಿದೆ.ಈ ಮೂಲಕ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮ ಸಕ್ಕರೆ ಇಳುವರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

2025-26ನೇ ಹಂಗಾಮಿನ ಅಂತ್ಯಕ್ಕೆ ಸುಮಾರು 574 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ ಸುಮಾರು 23,250 ಕೋಟಿ ರೂ.ಗಳಷ್ಟು ಹಣವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ಪಾವತಿಸುವ ಅಂದಾಜು ಇದೆ ಎಂದು ವಿವರಿಸಿದ್ದಾರೆ.

300 ಕೋಟಿ ರೂ. ನೆರವು ಬಿಡುಗಡೆ

ರಾಜ್ಯ ಸರ್ಕಾರ ಘೋಷಣೆ ಮಾಡಿದಂತೆ ಎಫ್‌ಆರ್‌ಪಿ ಮೇಲೆ ಪ್ರತಿ ಟನ್ ಕಬ್ಬಿಗೆ 50 ರೂ.ಗಳ ಆರ್ಥಿಕ ನೆರವನ್ನು ಕಬ್ಬು ಪೂರೈಕೆ ಮಾಡಿದ ರೈತರಿಗೆ ನೀಡಲು ರಾಜ್ಯ ಸರ್ಕಾರ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಕಬ್ಬು ಬೆಳೆಗಾರರ ಅಭಿಪ್ರಾಯದಂತೆ ಈ ಹಣವನ್ನು ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲಾಗಿದೆ. ಸಕ್ಕರೆ ಕಾರ್ಖಾನೆಗಳ ಪಾಲಿನ 50 ರೂ. ಆರ್ಥಿಕ ನೆರವು ಸೇರಿ ಒಟ್ಟು ನೂರು ರೂ.ಗಳನ್ನು ಕಬ್ಬು ಬೆಳೆಗಾರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತರು ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿದ್ದಾರೆ.

ದರ ಏರಿಕೆ ಮಾಡಿದರೆ ಹೋರಾಟ: ಅಶೋಕ

• **ಬೆಂಗಳೂರು:** ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರ ಇಳಿಸಲು ಕ್ರಮ ವಹಿಸಿದೆ. ಆದರೆ, ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿ ಲಾಭ ಮಾಡಿಕೊಳ್ಳಲು ಮುಂದಾದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಶ್ರೀರಾಮನವಮಿಯ ಸಮಯದಲ್ಲಿ ಪೆಟ್ರೋಲ್-ಡೀಸೆಲ್ ದರ ಇಳಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಹಿಂದೆ ತುಪ್ಪದ ಮೇಲಿನ ಜಿಎಸ್‌ಟಿ ಇಳಿಸಿದಾಗ ಕಾಂಗ್ರೆಸ್ ಸರ್ಕಾರ ದರ ಏರಿಕೆ ಮಾಡಿತ್ತು. ಈಗ ತೈಲ ದರ ಏರಿಸಲು ಮುಂದಾದರೆ ತೀವ್ರ ಹೋರಾಟ ಮಾಡುತ್ತೇವೆ. ದರ ಇಳಿಕೆಯನ್ನು ಚುನಾವಣೆಗೆ ಲಿಂಕ್ ಮಾಡಬಾರದು. ದೇಶದಲ್ಲಿ ವರ್ಷವಿಡೀ ಚುನಾವಣೆ ನಡೆಯುತ್ತಿರುತ್ತದೆ. ಯಾವುದೇ ಉತ್ತಮ ಕ್ರಮ ಕೈಗೊಂಡರೂ ಕಾಂಗ್ರೆಸ್ ಪಕ್ಷದವರು ಟೀಕೆ ಮಾಡುತ್ತಾರೆ. ಈಗಲೂ ಹಾಗೆಯೇ ಟೀಕೆ ಮಾಡುತ್ತಿದ್ದಾರೆ ಎಂದರು.

ಮೆಟ್ರೊ ಯೋಜನೆ ಸಂಬಂಧ ಸಂಸದ ಪಿ.ಸಿ.ಮೋಹನ್ ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಯಲ್ಲಿ ಉತ್ತರ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 50:50 ಅನುಪಾತದಲ್ಲಿ ಅನುದಾನ ಹಂಚಿಕೆಯಾಗುತ್ತಿದೆ. ಆದರೆ, ಕೇಂದ್ರ ಕೇವಲ ಶೇ.12 ಪಾಲು ನೀಡಿದೆ ಎಂದು ರಾಜ್ಯ ಸರ್ಕಾರ ಉತ್ತರ ನೀಡಿದೆ. ಜಲಜೀವನ್ ಮಿಷನ್‌ನಲ್ಲಿ ಬಳಕೆಯಾದ ಅನುದಾನದ ಬಗ್ಗೆ ಪ್ರಮಾಣಪತ್ರ ನೀಡಿದೆ ಬಾಕಿ ಹಣ ಬಿಡುಗಡೆಯಾಗಿಲ್ಲ ಎಂದು ಆರ್.ಅಶೋಕ ಹೇಳಿದರು.

ಐಪಿಎಲ್ ಟಿಕೆಟ್ ಕಾರ್ಯಕರ್ತರಿಗೆ ನೀಡುತ್ತೇವೆ

ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯದ ವೇಳೆ ಸರ್ಕಾರ ಸರಿಯಾದ ಭದ್ರತೆ ಕಲ್ಪಿಸಬೇಕಿದೆ. ಈ ಹಿಂದೆ ಪೊಲೀಸ್ ಭದ್ರತೆ ನೀಡದೆಯೇ ಸಚಿವರ ಕುಟುಂಬದವರು ಫೋಟೋ ಶೂಟ್ ಮಾಡಿಕೊಂಡು 11 ಅಮಾಯಕರ ಸಾವಾಗಿತ್ತು. ಅಂತಹ ಘಟನೆ ಮರುಕಳಿಸದಂತೆ ಕ್ರಮ ವಹಿಸಬೇಕು. ಅನಾಹುತವಾದರೆ ಸರ್ಕಾರವೇ ಹೊಣೆಯಾಗುತ್ತದೆ. ಶಾಸಕರಿಗೆ ಟಿಕೆಟ್ ನೀಡಿದರೆ ಅದನ್ನು ಕಾರ್ಯಕರ್ತರಿಗೆ ನೀಡುತ್ತೇವೆ. ನಾನೇನೂ ಐಪಿಎಲ್ ಪಂದ್ಯ ನೋಡಲು ಹೋಗುವುದಿಲ್ಲ. ಬೇರೆಯವರಿಗೆ ಅವಕಾಶ ನೀಡಲು ವಿಐಪಿ ಟಿಕೆಟ್ ಕೊಡಬಾರದು. ಇದಕ್ಕಾಗಿ ನೀತಿ ನಿಯಮ ರೂಪಿಸಬೇಕೆಂದು ಚರ್ಚೆಯಾಗಿದೆ. ಆನ್‌ಲೈನ್‌ನಲ್ಲೇ ಕೊಡಿ ಎಂದು ನಾವು ಕೇಳಿದ್ದೇವೆ ಎಂದು ಅಶೋಕ ಹೇಳಿದರು.

ಅಲುಗಾಡುತ್ತಿರುವ ಸಿಎಂ ಕುರ್ಚಿ: ಶ್ರೀರಾಮುಲು

• **ಬಾಗಲಕೋಟೆ:** ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರವರು ವಿಧಾನಸಭೆಯ ದ್ವಾರ ಬಾಗಿಲು, ಮೆಟ್ಟಿಲುಗಳನ್ನು ಹೊಸದು ಮಾಡಲು ಲಕ್ಷಾಂತರ ರೂ. ಖರ್ಚು ಮಾಡುತ್ತಾರೆ. ಅದರ ಜತೆಗೆ ಮುಖ್ಯಮಂತ್ರಿ ಯವರ ಕುರ್ಚಿಯ ನಟ್ಟು, ಬೋಲ್ಟ್ ಕೂಡ ರಿಪೇರಿ ಮಾಡಿಸಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಸಭೆಯ ಮುಂಭಾಗ ಶಾಸಕರ ಫೋಟೋ ಶೂಟ್ ಆಗಿದ್ದನ್ನು ನೋಡಿದರೆ ಸಭಾಧ್ಯಕ್ಷರಿಗೆ ಸಿಎಂ ಇಳಿಯುವ ಮುನ್ಸೂಚನೆ ದೊರೆತಿರುವ ಕಾರಣದಿಂದಲೇ ಶಾಸಕರೊಂದಿಗೆ ಫೋಟೋ ತೆಗೆಸಿಕೊಳ್ಳಲಾಗಿದೆ. ಸಿಎಂ ಕುರ್ಚಿಯನ್ನು ಕೂಡ ಗಟ್ಟಿಯಾಗಿ ದುರಸ್ತಿ ಮಾಡಿಸಬೇಕಾಗಿದೆ ಎಂದು ಸ್ಪೀಕರ್ ಅವರಿಗೆ ಹೇಳಿದರು.

ಬಿಜೆಪಿ ಸರ್ಕಾರವಿದ್ದಾಗ ಪರಿಶಿಷ್ಟ ಪಂಗಡದವರಿಗೆ ಶೇ.3ರಿಂದ 7ಕ್ಕೆ ಏರಿಸಲಾಯಿತು. ಪರಿಶಿಷ್ಟ ಜಾತಿಯವರಿಗೆ ಶೇ.17ಕ್ಕೆ ಏರಿಸಲಾಯಿತು. ಆವಾಗಲೂ ಸಚಿವ ಸತೀಶ ಜಾರಕಿಹೊಳಿ ಮಾತನಾಡಲಿಲ್ಲ, ಈಗಿನ ಕಾಂಗ್ರೆಸ್ ಸರ್ಕಾರ ಒಳಮೀಸಲಾತಿಯಲ್ಲಿ ಸಮುದಾಯದ ಜನರಿಗೆ ಕಡಿಮೆಯಾದಾಗ ಬಗ್ಗೆ, ವಾಲ್ಮೀಕಿ ನಿಗಮದ ಹಣದಲ್ಲಿ ನಡೆದ ಹಗರಣ ಕುರಿತು ಧ್ವನಿ ಎತ್ತಲಿಲ್ಲ, ವಾಲ್ಮೀಕಿ ಸಮುದಾಯಕ್ಕೆ ಅನ್ಯಾಯವಾದರೂ ಸಚಿವರು ಮಾತನಾಡುತ್ತಿಲ್ಲ ಎಂದರು.

ಸತೀಶ ಜಾರಕಿಹೊಳಿ ಒಬ್ಬ ಸೀಜನ್ ಪಾಲಿಟಿಕ್, ಗಿಮಿಕ್‌ನಿಂದ ಚುನಾವಣೆಯನ್ನು ಗೆಲ್ಲಲು ಹೊರಟಿದ್ದಾರೆ. ಆದರೆ, ಸಮುದಾಯದವರಿಗೆ ಒಳಮೀಸಲಾತಿಯಲ್ಲಿ ಕಡಿಮೆಯಾದರೂ ತುಟಿಬಿಚ್ಚಲಿಲ್ಲ, ತಮ್ಮ ಸ್ವಾರ್ಥಕ್ಕೆ ಪ್ರಚಾರ ನಡೆಸುತ್ತಿದ್ದಾರೆ. ಸಮುದಾಯಕ್ಕೆ ಮಾತ್ರ ನ್ಯಾಯ ಕೊಡಿಸುವ ಕೆಲಸ ಮಾಡಲಿಲ್ಲ ಎಂದರು.

ಎಸ್ಸಿ ಪಟ್ಟಿಯಲ್ಲಿ ಇರಲಿ

ಲಂಬಾಣಿ,ಕೊರಮ, ಕೊರಚ, ಭೋವಿ ಸೇರಿದಂತೆ ಇನ್ನಿತರ ಸಣ್ಣ ಸಮುದಾಯವನ್ನು ಎಸ್ಸಿ ಪಟ್ಟಿಯಿಂದ ತೆಗೆಯಬಾರದು ಎಂದು 101 ಜಾತಿಗಳು ಕೂಡ ಎಸ್ಸಿ ಪಟ್ಟಿಯಲ್ಲಿ ಇರಬೇಕು ಎಂದು ಕೇಂದ್ರಕ್ಕೆ ಶಿಫಾರಸು ಮಾಡಿ ಕಳುಹಿಸಿದ್ದು ಬಿಜೆಪಿ ಸರ್ಕಾರದಲ್ಲಿದ್ದಾಗ, ಸುಪ್ರೀಂಕೋರ್ಟ್ ಕೂಡ ನಾವು ಕಳುಹಿಸಿದ್ದ ಶಿಫಾರಸು ಎತ್ತಿ ಹಿಡಿದಿದೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.

ಕೇಂದ್ರ ವಿರುದ್ಧ ಟೀಕೆ ಸಲ್ಲದು: ಬಿವೈವಿ

• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದರಲ್ಲೇ 3 ವರ್ಷಗಳ ಕಾಲಹರಣ ಮಾಡಿದೆ. ಆದರೆ, ಮೋದಿ ಅವರ ಜನಪರ ಕಾಳಜಿ ಏನೆಂಬುದನ್ನು ರಾಜ್ಯದ ಮುಖ್ಯಮಂತ್ರಿ, ಅವರ ಸಚಿವಸಂಪುಟದ ಸದಸ್ಯರು ಅರ್ಥ ಮಾಡಿಕೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿ, ಪ್ರಧಾನಿಯವರು ತಮ್ಮ ನಿರ್ಧಾರದಿಂದ ದೇಶದಲ್ಲಿ ಪೆಟ್ರೋಲ್-ಡೀಸೆಲ್ ಮೇಲೆ ಅಬಕಾರಿ ಸುಂಕ 10 ರೂ. ಕಡಿಮೆ ಮಾಡಿದ್ದಾರೆ. ಜನರ ಮೇಲೆ ಬೀಳುವ ಹೊರೆಯನ್ನು ಕೇಂದ್ರ ಸರ್ಕಾರವೇ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ದೇಶದ ಸಾಮಾನ್ಯ ಜನರ ಪರವಾಗಿ ದೃಢನಿರ್ಧಾರ ತೆಗೆದುಕೊಂಡಿದ್ದಾರೆ. ಯುದ್ಧದ ಈ ಸಂದರ್ಭದಲ್ಲಿ, ರಾಜ್ಯ- ದೇಶದ ಜನತೆ ಪರವಾಗಿ ಹೆಮ್ಮೆಯ ಪ್ರಧಾನಮಂತ್ರಿ ಮೋದಿ ಅವರಿಗೆ ಹಾಗೂ ಪೆಟ್ರೋಲಿಯಂ ಸಚಿವರಿಗೆ ಅಭಿನಂದನೆಗಳನ್ನು ತಿಳಿಸಲು ಬಯಸುವುದಾಗಿ ಹೇಳಿದರು.

ಅಮೆರಿಕ, ಆಸ್ಟ್ರೇಲಿಯ ಮೊದಲಾದ ಕಡೆ ಜನರ ಮೇಲೆ ಶೇ. 25, ಶೇ. 30ರಷ್ಟು ಹೊರೆ ಬೀಳುವಂತಾಗಿದೆ. ಆದರೆ, ಅಬಕಾರಿ ಸುಂಕ ಕಡಿಮೆ ಮಾಡುವ ಕೇಂದ್ರ ಸರ್ಕಾರದ ದೃಢನಿರ್ಧಾರದಿಂದ ಜನರಿಗೆ ಅನುಕೂಲ ಆಗುತ್ತಿದೆ. ಇದು ಸ್ವಾಗತಾರ್ಹ ಎಂದು ತಿಳಿಸಿದರು.

ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕುವ ಸಲುವಾಗಿ ಬೇರೆಯವರ ಮೇಲೆ ಗೂಬೆ ಕೂರಿಸುವ ಚಾಳಿ, ಚಟ ಕಾಂಗ್ರೆಸ್ಸಿನವರಿಗೆ ಮುಂಚಿನಿಂದಲೂ ಬಂದಿದೆ. ಕೇಂದ್ರವನ್ನು ದೂರುತ್ತಲೇ ಮುಖ್ಯಮಂತ್ರಿಗಳು 3 ವರ್ಷಗಳ ಅವಧಿ ಪೂರೈಸಿದ್ದಾರೆ. ಅದು ಬಿಟ್ಟು ಬೇರೆ ಏನು ಸಾಧನೆ ಮಾಡಿದ್ದಾರೆ? ಕಳೆದ 3 ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಏನು? ಜನರೂ ಇದನ್ನು ಪ್ರಶ್ನಿಸುತ್ತಿದ್ದಾರೆ ಎಂದರು.

ಐಪಿಎಲ್ ಟಿಕೆಟ್ ಹೇಳಿಕೆಗಿಲ್ಲ ಸಮ್ಮತಿ

ಶಾಸಕರಿಗೆ ಐಪಿಎಲ್ ಟಿಕೆಟ್ ವಿಚಾರದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಗುರುವಾರ ಆಡಳಿತ ಪಕ್ಷ, ಪ್ರತಿಪಕ್ಷಗಳ ಶಾಸಕರ ಹೇಳಿಕೆ ಗಮನಿಸಿದ್ದೇನೆ. ವೈಯಕ್ತಿಕವಾಗಿ ಅವರ ಹೇಳಿಕೆಗಳನ್ನು ಒಪ್ಪುವುದಿಲ್ಲ, ರಾಜಕಾರಣಿಗಳೆಂದರೆ, ಜನಸಾಮಾನ್ಯರು ನಮ್ಮನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಪತ್ರಿಕೆಗಳು, ಟಿ.ವಿ.ಗಳಲ್ಲಿ ನೋಡುತ್ತಿದ್ದೇವೆ. ಕಳೆದ ಬಾರಿ ಇದೇ ಐಪಿಎಲ್ ಮ್ಯಾಚ್ ಸಂದರ್ಭದಲ್ಲಿ ಆಡಳಿತ ಪಕ್ಷದ ಮೂರ್ಖತನದಿಂದ 11 ಜನ ಮುಗ್ಧರು ಪ್ರಾಣ ಕಳೆದುಕೊಂಡರು. ಅದನ್ನು ರಾಜ್ಯದ, ದೇಶದ ಜನರು ಮರೆತಿಲ್ಲ. ಇಂಥ ಸಂದರ್ಭದಲ್ಲಿ ಇಂಥ ಹೇಳಿಕೆಗಳ ಅವಶ್ಯಕತೆ ಇತ್ತೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ, ನಾನಿದರ ಪರವಾಗಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಒಬ್ಬ ಶಾಸಕ, ಜನಪ್ರತಿನಿಧಿ ಆಗಿರುವವರು ಜನಸಾಮಾನ್ಯರಿಗಿಂತ ವಿಭಿನ್ನ, ವಿಐಪಿ ಎಂಬುದು ಖಂಡಿತವಾಗಿ ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಪ್ರತಿಕ್ರಿಯೆ ನೀಡಿದರು. ಇದಕ್ಕೆ ನನ್ನ ಬೆಂಬಲ ಇಲ್ಲ ಎಂದು ಹೇಳಿದರು.

ಕಡ್ಡಾಯವಾಗಿ ವೇತನಸಹಿತ ರಜೆ

• **ಬೆಂಗಳೂರು:** ರಾಜ್ಯದ 2 ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಹಿನ್ನೆಲೆಯಲ್ಲಿ, ಮತದಾನದ ದಿನದಂದು ಅರ್ಹ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ವೇತನ ಸಹಿತ ರಜೆ ಘೋಷಿಸಿ ಕಾರ್ಮಿಕ ಇಲಾಖೆ ಆದೇಶ ಹೊರಡಿಸಿದೆ.

ಚುನಾವಣಾ ಕ್ಷೇತ್ರಗಳಾದ 24-ಬಾಗಲಕೋಟೆ ಹಾಗೂ 107-ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ಎಲ್ಲಾ ಅರ್ಹ ಕಾರ್ಮಿಕರಿಗೆ ಈ ರಜೆ ಅನ್ವಯವಾಗಲಿದೆ. 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾದಿನಗಳು) ಕಾಯ್ದೆಯ ಕಲಂ 3-ಎ ಪ್ರಕಾರ ಈ ರಜೆಯನ್ನು ನೀಡಲಾಗುತ್ತಿದೆ.

ಇದಕ್ಕೆ ಸಂಬಂಧಪಟ್ಟ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಉದ್ದಿಮೆಗಳು ತಮ್ಮಲ್ಲಿ ಕೆಲಸ ಮಾಡುವ ಅರ್ಹ ಕಾರ್ಮಿಕರಿಗೆ ಅಂದು ಕಡ್ಡಾಯವಾಗಿ ವೇತನ ಸಹಿತ ರಜೆ ನೀಡಬೇಕು. ಕಾರ್ಮಿಕರು ತಮ್ಮ ಸಾಂವಿಧಾನಿಕ ಹಕ್ಕಾದ ಮತದಾನವನ್ನು ಚಲಾಯಿಸಲು ಮಾಲೀಕರು ಪೂರಕ ವಾತಾವರಣ ಕಲ್ಪಿಸಿಕೊಡಬೇಕು ಎಂದು ಕಾರ್ಮಿಕ ಆಯುಕ್ತರು ತಿಳಿಸಿದ್ದಾರೆ.

ಧಾರವಾಡದಂತೆ ಅಕ್ಕಾ ಸಂಘಟನೆಯಿಂದ ಕಲಬುರಗಿಯಲ್ಲಿ ಬೃಹತ್ ಪ್ರತಿಭಟನೆ

ಸರ್ಕಾರ ಕೂಡಲೇ ನೇಮಕಾತಿ ಪ್ರಕ್ರಿಯೆ ಮಾಡಲಿ

• **ಕಲಬುರಗಿ:** ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್ ನೇತೃತ್ವದಲ್ಲಿ, ಧಾರವಾಡ ಮಾದರಿಯಂತೆ ಕಲಬುರಗಿ ನಗರದಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಮಾಡಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಜಗತ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದ ಪ್ರತಿಭಟನಾಕಾರರು, ವಿವಿಧ ಬೇಡಿಕೆಗಳ ಬ್ಯಾನರ್ ಹಿಡಿದು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತ ಪಡಿಸಿ, ರಾಜ್ಯದಲ್ಲಿನ ವಿವಿಧ ಇಲಾಖೆಗಳಲ್ಲಿನ 56,432 ಖಾಲಿ ಹುದ್ದೆಗಳ ನೇಮಕಾತಿಗೆ ತಕ್ಷಣ ಅಧಿಸೂಚನೆ ಹೊರಡಿಸಬೇಕು ಹಾಗೂ 8 ತಿಂಗಳೊಳಗಾಗಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್, ಕಳೆದ 3 ವರ್ಷಗಳಿಂದ ಯಾವುದೇ ರೀತಿಯ ಹುದ್ದೆಗಳ ನೇಮಕಾತಿ ರಾಜ್ಯ ಸರ್ಕಾರ ಮಾಡಿಕೊಂಡಿಲ್ಲ, ಇದರಿಂದ ಉದ್ಯೋಗಾವಕಾಶಗಳ ಕೊರತೆಯಿಂದ ಯುವಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಲ್ಲದೆ, ಕೆಪಿಎಸ್ಸಿಯಲ್ಲಿ ನಡೆದಿರುವ ಕೆಎಎಸ್, ಸಿಇಟಿ, ಪಿಡಿಒ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆ ಈ ಎಲ್ಲಾ ಪ್ರಕರಣಗಳನ್ನು ಕೇಂದ್ರ ತನಿಖಾ ಸಂಸ್ಥೆಯಾದ ಸಿಬಿಐಗೆ ಒಪ್ಪಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

> ಬಿಟ್ಟಿ ಭಾಗ್ಯ ಬೇಡ, ನಮಗೆ ಉದ್ಯೋಗ ಬೇಕು. ಸರ್ಕಾರ ತಕ್ಷಣ ಎಚ್ಚೆತ್ತು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿ ಯುವಕರ ಶಕ್ತಿ ಏನೆಂಬುದು ಸರ್ಕಾರಕ್ಕೆ ತೋರಿಸಬೇಕಾಗುತ್ತದೆ.
>
> ■ **ಕಾಂತಕುಮಾರ್,** ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ

ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಶಿವಸೇನಾ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ಕನ್ನಡ ಪರ ಸಂಘಟನೆಯ ರವಿ ದೇಗಾಂವ್, ಸಚಿನ ಕಡಗಂಚಿ, ಶಿವ ಅಷ್ಟಗಿ, ಹಿಂದೂ ಮುಖಂಡರಾದ ಸಿದ್ರಾಮಯ್ಯ ಹಿರೇಮಠ, ಗುರುಕಾಂತ ಚೆಂಗಟಿ ಸೇರಿದಂತೆ ಹಲವು ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಲಿಖಿತ ಸೂಚನೆ

ಅರಣ್ಯಭೂಮಿ ಮರು ವಶಕ್ಕೆ ಕ್ರಮ

• **ಬೆಂಗಳೂರು:** ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಶ್ರೀಗಂಧದ ಕಾವಲ್‌ನಲ್ಲಿ ವಾಯುಪಡೆಯ ವಶದಲ್ಲಿರುವ 444 ಎಕರೆ ಅರಣ್ಯಭೂಮಿಯ ಮರು ವಶಕ್ಕೆ ಕೂಡಲೇ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64 ಎ ಅಡಿ ಪ್ರಕ್ರಿಯೆ ಆರಂಭಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಲಿಖಿತ ಸೂಚನೆ ನೀಡಿದ್ದಾರೆ.

ಈ ಸಂಬಂಧ ಅರಣ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ 2 ಪ್ರತ್ಯೇಕ ಸೂಚನೆ ನೀಡಿರುವ ಅವರು, ಜಾರಕ ಬಂಡೆ ಕಾವಲ್ ಅರಣ್ಯ ಪ್ರದೇಶದಲ್ಲಿ ವಾಯುಪಡೆಗೆ ನೀಡಲಾಗಿದ್ದ 452 ಎಕರೆ 4 ಗುಂಟೆ ಭೂ ಮಂಜೂರಾತಿ ಯನ್ನು ರಾಜ್ಯ ಸರ್ಕಾರ 2017ರ ಅಕ್ಟೋಬರ್ 9ರಂದು ರದ್ದುಗೊಳಿಸಿದೆ. ಇದನ್ನು ಅತ್ಯಗತ್ಯವಾದ ಶ್ವಾಸತಾಣವಾಗಿ ಉಳಿಸಲು ತೀರ್ಮಾನಿಸಲಾಗಿದ್ದು, ಕೂಡಲೇ ತೆರವಿಗೆ ಕ್ರಮ ವಹಿಸುವಂತೆ ಸೂಚಿಸಿದ್ದಾರೆ.

ರಾಷ್ಟ್ರೀಯ ಹಿತದ ದೃಷ್ಟಿಯಿಂದ ಭೂಮಂಜೂರಾತಿ ರದ್ದುಪಡಿಸಿದ ಬಳಿಕವೂ ಭಾರತೀಯ ವಾಯುಪಡೆ ಈ ಭೂಮಿಯನ್ನು ಬಳಸಲು, ಅರಣ್ಯ (ಸಂರಕ್ಷಣಾ)ಕಾಯ್ದೆ-1980 ರಡಿಯಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಿ ಪರ್ಯಾಯ ಭೂಮಿ ನೀಡುವಂತೆ ತಿಳಿಸಿದ್ದರೂ ವಾಯುಪಡೆ ನಿಯಮ ಉಲ್ಲಂಘಿಸಿದೆ.

ಉರುಳು ಹಾಕಿದವರ ವಿರುದ್ಧ ಕಾನೂನು ಕ್ರಮ

• **ಬೆಂಗಳೂರು:** ನಾಗರಹೊಳೆ ಕಾಡಿನ ಮೇಟಿಕುಪ್ಪೆ ವಲಯದ ಅರಣ್ಯದ ಗಡಿಯಿಂದ 300 ಮೀಟರ್ ದೂರದ ಜಮೀನಿನಲ್ಲಿ ಅಕ್ರಮವಾಗಿ ಅಳವಡಿಸಿದ್ದ ಉರುಳಿಗೆ 3 ವರ್ಷದ ಹುಲಿ ಬಲಿಯಾಗಿರುವ ಬಗ್ಗೆ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ದುಃಖ ವ್ಯಕ್ತಪಡಿಸಿದ್ದಾರೆ. ಈ ದುರ್ಘಟನೆಯ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಂಡದಿಂದ ತನಿಖೆ ಮಾಡಿಸಿ, ಸಿಬ್ಬಂದಿ ಗಸ್ತು ಕಾರ್ಯದಲ್ಲಿ ಲೋಪ ಎಸಗಿದ್ದಲ್ಲಿ ಕ್ರಮ ಕೈಗೊಳ್ಳಲು ಮತ್ತು ಉರುಳು ಹಾಕಿದವರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲು ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ಕಾಡಿನಂಚಿನ ಜಮೀನುಗಳಲ್ಲಿ ಉರುಳು ತೆರವಿಗೆ ಕ್ರಮ ವಹಿಸಲು ಸೂಚಿಸಿದ್ದಾರೆ.

ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ ಟ್ರಸ್ಟ್

ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ

ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ

ತಿರುವನಂತಪುರ-21, ದೂರವಾಣಿ (ಕ್ಷೇತ್ರ) 0471 2500989, ಕಚೇರಿ : 2507671, 7306090147
www.karikkakomsrichamunditemple.in email : karikkakomdevitemple@gmail.com

ದಾಡೀಮೀ ಕುಸುಮ ಮಂಜರಿ ನಿಕರ ವರ್ಣಶೋಭಿತ ಶರೀರಕೇ
ಯಾಮಿನಿ ರಮಣ ಖಂಡಮಂಡಿತ ಕಿರೀಟಿಕೇ ತರಳಕುಂಡಲೇ
ಪಾಶಮಂಕುಶ ಮುದಂಚಿತ ದಧತಿ। ಕೋಮಲೇ ಕಮಲಲೋಚನೇ
ತಾವಕೇ ವಪುಷಿ ಸಂತತಂ ಜನನಿ। ಮಾಮಕಂ ಭವತು ಮಾನಸ

ದೇವಿಯ ಉತ್ಸವ ಸಂದರ್ಭಗಳಲ್ಲಿ ಪ್ರದಕ್ಷಿಣೆ ಬರುವ ರಥವನು ಚಿನ್ನದಿಂದ ಮುಚ್ಚಲಾಗುವುದು

ಕ್ಷೇತ್ರಗಳಲ್ಲಿ ದೇವಿಯ ಉತ್ಸವ ಸಂದರ್ಭಗಳಲ್ಲಿ ಪ್ರದಕ್ಷಿಣೆ ಬರುವ ರಥವನ್ನು ಹೊಸದಾಗಿ ತಯಾರಿಸಿ ಚಿನ್ನದಲ್ಲಿ ಹೊದಿಸುವುದಕ್ಕೆ ಟ್ರಸ್ಟ್ ನಿರ್ಧರಿಸಿದೆ. ಅದಕ್ಕಿರುವ ಚಿನ್ನವನು ಕೊಡುಗೆಯಾಗಿ ನೀಡಲು ಇಚ್ಛಿಸುವ ಭಕ್ತಾದಿಗಳು ಕ್ಷೇತ್ರದಲ್ಲಿ ದೇವಿಯ ನಡೆಯಲ್ಲಿ ಇಚ್ಛಿಸುವ ಚಿನ್ನ ಸಮರ್ಪಣೆಯನ್ನು ಭಂಡಾರದಲ್ಲಿಯೋ, ಕೊಡುಗೆಗಳನ್ನು ಸಮರ್ಪಿಸಲು ಕ್ಷೇತ್ರದ ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್ ಮೂಲಕವೂ ಕ್ಷೇತ್ರ ಕೌಂಟರ್ ಮೂಲಕವೂ ಪಾವತಿಸಬಹುದಾಗಿದೆ.

ಉತ್ಸವ ಮಹಾಮಹಂ

2026 ಮಾರ್ಚ್ 24ರಿಂದ 30 ರ ತನಕ

ಪೊಂಗಾಲ

2026 ಮಾರ್ಚ್ 30 ಸೋಮವಾರ ಬೆಳಿಗ್ಗೆ 10.15ಕ್ಕೆ

2026 ಮಾರ್ಚ್ 28, 29 ದಿನಾಂಕಗಳಲ್ಲಿ ಬೆಳಿಗ್ಗೆ 8.40ಕ್ಕೆ
ದೇವಿ ರಥದಲ್ಲಿ ಪ್ರದಕ್ಷಿಣೆ ಬರುವುದು

24.03.2026ರಿಂದ 29.03.2026ರ ತನಕ ಪ್ರತೀದಿನವೂ ಬೆಳಿಗ್ಗೆ 11ರಿಂದ ಅಪರಾಹ್ನ 2ರ ತನಕ ಅನ್ನದಾನ ಇರುವುದು.

ಈ ಬಾರಿ 16ನೇ ಕರಿಕ್ಕಕಮ್ -2026 ಪ್ರಶಸ್ತಿ ಪುರಸ್ಕೃತರು
ಶ್ರೀ ಶ್ರೀ ಕುಮಾರನ್ ತಂಪಿ

ಪ್ರಿಯ ಭಕ್ತಾದಿಗಳೇ,

ಪುಣ್ಯ ಪುರಾತನವಾದ ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರದ ಈ ವರ್ಷದ ಉತ್ಸವ ಮಹಾಮಹಂ 2026 ಮಾರ್ಚ್ 24ನೇ ತಾರೀಕು (1201 ಮೀನಂ 10) ಸಂಜೆ 5 ಗಂಟೆಯ ಗುರುಪೂಜೆಯೊಂದಿಗೆ ಆರಂಭಗೊಂಡಿದೆ. ಮಾರ್ಚ್ 28, 29ನೇ ದಿನಾಂಕಗಳಲ್ಲಿ (1201 ಮೀನಂ 14, 15) ಬೆಳಿಗ್ಗೆ 8.40ಕ್ಕೆ ಚಿನ್ನದ ರಥದಲ್ಲಿ ದೇವಿಯ ಪ್ರದಕ್ಷಿಣೆ ಹಾಗೂ ಮಾರ್ಚ್ 30 (1201 ಮೀನಂ 16) ಸೋಮವಾರ ಬೆಳಿಗ್ಗೆ 10.15ಕ್ಕೆ ಲಕ್ಷಾಂತರ ಮಹಿಳಾ ಭಕ್ತಾದಿಗಳು ಪಾಲ್ಗೊಳ್ಳುವ ಪೊಂಗಾಲ ಭಕ್ತಿ ಸಾಗರದ ವಾತಾವರಣದಲ್ಲಿ ನಡೆಯುವುದು. ದೇವಿಯ ಇಡವಾಳನ್ನು ಪೊಂಗಾಲ ರಥದಲ್ಲಿ ಪ್ರದಕ್ಷಿಣೆ ತಂದು ಅಪರಾಹ್ನ 2.15ಕ್ಕೆ ಪೊಂಗಾಲ ಸಮರ್ಪಣೆ, ರಾತ್ರಿ ಅತ್ತಾಳ ಪೂಜೆಯ ಬಳಿಕ ಗುರುಸಿ ರಥದಲ್ಲಿ ದೇವಿಯ ಇಡವಾಳ ಪ್ರದಕ್ಷಿಣೆ ಮಾಡಿ ವೈದಿಕ ವಿಧಿ ವಿಧಾನಗಳೊಂದಿಗಿರುವ ಗುರುಸಿಯೊಂದಿಗೆ ಸಮಾಪ್ತಿಗೊಳ್ಳುವುದು.
ಉತ್ಸವ ದಿನಗಳಲ್ಲಿ ನಡೆಯುವ ಪೂಜೆ, ಅನ್ನದಾನ, ಪ್ರದಕ್ಷಿಣೆ ಹಾಗೂ ಪೊಂಗಾಲ ಮಹೋತ್ಸವದಲ್ಲಿ ಪಾಲ್ಗೊಂಡು ಎಲ್ಲಾ ಭಕ್ತಾದಿಗಳು ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
ಉತ್ಸವ ಮಹಾಮಹಂ ಯಶಸ್ವಿಯಾಗಿ ನಡೆಯಲು ಎಲ್ಲಾ ಭಕ್ತಾದಿಗಳ ಸಹಾಯ ಸಹಕಾರಗಳನ್ನು ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ.

- ಕಾರ್ಯದರ್ಶಿ

ಕರಿಕ್ಕಕಂ ಕ್ಷೇತ್ರದಲ್ಲಿ ರಕ್ತ ಚಾಮುಂಡಿ, ಬಾಲಚಾಮುಂಡಿ ನಡೆ ತೆರೆಯುವುದು ಪ್ರತೀ ವರ್ಷ ಒಂದು ಲಕ್ಷದಷ್ಟು ಬಾರಿ. ಎಲ್ಲಾ ಸಂಕಷ್ಟಗಳನ್ನು ನಿಮಿಷದೊಳಗೆ ಪರಿಹರಿಸಲ್ಪಡುವ ದೇವಿ ಸನ್ನಿಧಿಯಾಗಿದೆ- ಕರಿಕ್ಕಕಂ ಶ್ರೀ ಚಾಮುಂಡಿ ಕ್ಷೇತ್ರ. ಒಂದು ದೇವಿ ಸಂಕಲ್ಪವನ್ನು ಮೂರು ಭಾವಗಳಲ್ಲಿ ಅಂದರೆ ಚಾಮುಂಡಿ ದೇವಿ ಸಂಕಲ್ಪವನ್ನು ಚಾಮುಂಡಿ, ರಕ್ತ ಚಾಮುಂಡಿ, ಬಾಲ ಚಾಮುಂಡಿ ಎಂಬೀ ಮೂರು ಗರ್ಭಗುಡಿಗಳಲ್ಲಾಗಿ ಒಂದೇ ಪ್ರಾಧಾನ್ಯತೆಯೊಂದಿಗೆ ಆರಾಧಿಸುವ ಕ್ಷೇತ್ರವಾಗಿದೆ. ಶತ್ರುದೋಷಗಳ ಸಹಿತ ಯಾವುದೇ ಸಂಕಷ್ಟಗಳು, ತೊಂದರೆಗಳು ನಿಮಿಷದೊಳಗೆ ಭಷ್ಮಗೊಳ್ಳುತ್ತವೆ. ಉಗ್ರಸ್ವರೂಪಿಣೀಯಾದ ಇಲ್ಲಿನ ರಕ್ತ ಚಾಮುಂಡಿಯ ನಡೆಯು ಮಕ್ಕಳ ಸಂತಾನ ವರದಾಯಿನಿಯೂ ಆದ ಶಾಂತರೂಪಿಣಿಯಾಗಿದೆ. ಇಲ್ಲಿನ ಬಾಲಚಾಮುಂಡಿಯ ನಡೆಯು ಪ್ರತಿನಿತ್ಯ ಸರಾಸರಿ 280 ಬಾರಿ ಭಕ್ತಾದಿಗಳ ಹರಕೆಯಾಗಿ ನಡೆ ತೆರೆಯಲ್ಪಡುತ್ತದೆ. ಕ್ಷೇತ್ರದ ಕೌಂಟರ್‌ನಲ್ಲಿ 151 ರೂ. ಶುಲ್ಕ ಪಾವತಿಸಿ ರಶೀದಿ ಪಡೆಯುವ ಪ್ರತೀಯೋರ್ವರಿಗೂ ಪ್ರತೀ ಬಾರಿಯೂ ಈ ಸನ್ನಿಧಿಯು ತೆರೆದು ಮುಚ್ಚಲಾಗುತ್ತಿದೆ. ಈ ನಡೆಗಳು ತೆರೆಯಲ್ಪಡುವಾಗ ನಡೆಗೆ ನೇರವಾಗಿ ಎರಡು ಕೈಗಳೊಂದಿಗೆ ಭಕ್ತರು ರಕ್ತ ಚಾಮುಂಡಿ ಮತ್ತು ಬಾಲ ಚಾಮುಂಡಿಯ ಮುಂದೆ ಸಂಕಷ್ಟಗಳನ್ನು ಹೇಳುತ್ತಾರೆ. ಈ ವೇಳೆ ಮುಗ್ಧ ಮನಸ್ಸಿನಿಂದ ತಾಯಿಗೆ ಹರಕೆ ಸಮರ್ಪಿಸಿ ಧನ್ಯರಾಗುತ್ತಾರೆ. ನಡೆ ತೆರೆಯುವಾಗ ಈ ನಡೆಗಳಿಂದ ಮನಸಾರೆ ಪ್ರಾರ್ಥಿಸಿದರೆ ಆ ಕ್ಷಣದಲ್ಲಿಯೇ ತಾಯಿ ಅನುಗ್ರಹಿಸುತ್ತಾರೆ ಎಂಬುದು ಇಲ್ಲಿನ ಬಲವಾದ ನಂಬಿಕೆ. ಮಂಗಳವಾರ, ಶುಕ್ರವಾರ, ಆದಿತ್ಯವಾರದ ದಿನಗಳಲ್ಲಿ ಅತೀ ಹೆಚ್ಚು ಬಾರಿ ಈ ನಡೆಗಳು ತೆರೆಯಲ್ಪಡುತ್ತವೆ. ಭಕ್ತರಿಗೆ ಹರಕೆಗೆ ಅಲ್ಲದೆ ನಿತ್ಯ ಪೂಜೆಗೆ ಬೇಕಾಗಿ ಮಾತ್ರವೇ ಈ ನಡೆ ತೆರೆಯುವುದು. ಅದರಲ್ಲಿ ಸಂಜೆ ದೀಪಾರಾಧನೆಗೆ 6.30ಕ್ಕೆ ನಡೆ ತೆರೆಯುವಾಗ ಮಾತ್ರವೇ ಭಕ್ತರಿಗೆ ಒಟ್ಟಿಗಿರುವ ದರುಷನ ಸಾಧ್ಯವಾಗುವುದು. ಎಲ್ಲಾ ಸಮಯವೂ ಸಂಪತ್ತು, ಸಮೃದ್ಧಿಯನ್ನು ನೀಡುವ ಕರಿಕ್ಕಕಂ ಕ್ಷೇತ್ರದ ಈ ನಡೆಗಳು ರಾಜರ ಆಡಳಿತದ ಕಾಲದಿಂದ ತೊಡಗಿ ಪ್ರಸಿದ್ಧವಾಗಿದೆ. ಚಾಮುಂಡಿ ದೇವಿಯಾಗಿದೆ ಈ ಕ್ಷೇತ್ರದ ಪ್ರಧಾನ ಪ್ರತಿಷ್ಠೆ, ಕ್ಷಿಪ್ರಪ್ರಸಾದ ನೀಡುವವರಾಗಿದ್ದಾರೆ- ಕರಿಕ್ಕಕತ್ತಮ್ಮ. ಪ್ರಧಾನ ಗರ್ಭಗುಡಿಯ ಬಲಭಾಗದಲ್ಲಿ ಶ್ರೀ ರಕ್ತಚಾಮುಂಡಿ, ಬಾಲ ಚಾಮುಂಡಿ ದೇವಿಗಳು ನೆಲೆಗೊಂಡಿದ್ದಾರೆ. ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ ಎಂದು ಈ ದೇವಾಲಯವನ್ನು ಅರಿಯಲು ಪ್ರಧಾನ ಕಾರಣ ಶ್ರೀ ರತ್ತಚಾಮುಂಡಿ ದೇವಿಯ ಸಾನಿಧ್ಯವಾಗಿದೆ. ರಕ್ತ ಚಾಮುಂಡಿ, ಬಾಲ ಚಾಮುಂಡಿ ನಡೆಗಳಲ್ಲಿ ಪ್ರತಿಷ್ಠೆಯು ರೌದ್ರ ಭಾವದಲ್ಲಿಯೂ ಶಾಂತಭಾವದಲ್ಲಿಯೂ ಇರುವ ದೇವಿಯ ಗೋಡೆ ಚಿತ್ರವನ್ನು ಕ್ಷೇತ್ರದ ಒಳಭಾಗದಲ್ಲಿ ಚಿತ್ರೀಕರಿಸಲಾಗಿದೆ. ಹಿಂದೆ ರಾಜರ ಆಡಳಿತದ ಕಾಲದಲ್ಲಿ ಶ್ರೀ ರಕ್ತ ಚಾಮುಂಡಿ ನಡೆಯಲ್ಲಿ ನಿತ್ಯ ನಿರ್ವಹಣೆಯ ಸಲುವಾಗಿ ಪ್ರಜೆಗಳಿಂದ ಸತ್ಯವನ್ನು ಹೇಳಿಸಲ್ಪಡುತ್ತಿದ್ದದ್ದು ಇಲ್ಲಿಯಾಗಿದೆ. ಅಂದು ನ್ಯಾಯಾಲಯ ಮತ್ತು ಪೊಲೀಸರಿಗೆ ಸತ್ಯವನ್ನು ದೃಢೀಕರಿಸಲು ಸಾಧ್ಯವಾಗದ ಸಮಸ್ಯೆಗಳನ್ನು ಈ ನಡೆಯಲ್ಲಿ ಬಂದು ಸತ್ಯವನ್ನು ಹೇಳಿ ದೃಢೀಕರಿಸಲ್ಪಡುವುದು ನಿತ್ಯ ಘಟನೆಯಾಗಿತ್ತು. ಹಾಗೆ ಹಳೆಯ ಕಾಲದಲ್ಲಿ ಅರಮನೆಗಳಿಂದ ಘೋಷಣೆ ಮಾಡಿದ ಹೆಸರು ಸತ್ಯಕ್ಕೆ ಸಾಕ್ಷಿಯಾದ ಕ್ಷೇತ್ರ ಎಂಬ ಹೆಸರಾಗಿದೆ. ಈಗ ಹರಕೆಯಾಗಿ ಈ ನಡೆಗಳು ಒಂದು ವರ್ಷ ಸರಾಸರಿ ಒಂದು ಲಕ್ಷದಷ್ಟು ಮಂದಿ ಶತ್ರುದೋಷ, ಉದ್ಯೋಗಸಂಬಂಧವಾದ ಅಡ್ಡಿಗಳು ಹಣ ವ್ಯವಹಾರದಲ್ಲಿ ಸಂಭವಿಸಿದ ನಷ್ಟಗಳು, ಆಸ್ತಿ ವ್ಯವಹಾರಗಳ ತರ್ಕಗಳು, ರೋಗ ಸಂಕಷ್ಟಗಳು, ವಿವಾಹ ಅಡ್ಡಿಗಳು ಎಂಬಿತ್ಯಾದಿಗಳಿಗೆ ಪರಿಹಾರವನ್ನು, ಮಾಡಲಾದ ತಪ್ಪುಗಳಿಗೆ ಪ್ರಾಯಶ್ಚಿತ್ತಕ್ಕೆ 151 ರೂ. ಪಾವತಿಸಿ ರಕ್ತ ಚಾಮುಂಡಿ, ಬಾಲ ಚಾಮುಂಡಿ ನಡೆದ ತೆರೆದು ಪ್ರಾರ್ಥಿಸಿ ಸತ್ಯವನ್ನೇ ಹೇಳಲಾಗುತ್ತಿತ್ತು.

ಶ್ರೀ ಕ್ಷೇತ್ರಕ್ಕೆ ತಲುಪುವ ದಾರಿ

ರಾಷ್ಟ್ರೀಯ ಹೆದ್ದಾರಿ ಮೂಲಕ ಬರುವವರು ವರ್ಲ್ಡ್ ಮಾರ್ಕೆಟ್ ಜಂಕ್ಷನ್‌ನಿಂದ ಕಳಕೂಟಂ ಮೂಲಕ ಬಲಕ್ಕೆ ತಿರುಗಿ ವಾಳವಿಳ ಮೂಲಕ ದೇವಾಲಯವನ್ನು ತಲುಪಬೇಕು. ಎಂಸಿ ರಸ್ತೆ ಮೂಲಕ ಬರುವವರು ಕೇಶವದಾಸಪುರಕ್ಕೆ ಬಂದು ಅಲ್ಲಿಂದ ಪಾಳಯಂ, ಪೆಟ್ಟಾ ಮತ್ತು ಚಾಕ್ಕಾ ಬೈಪಾಸ್ ಮೂಲಕ ಹೋಗಬೇಕು. ನೆಯ್ಯಟ್ಟಿಂಗರದಿಂದ ಬರುವವರು ಕೀಳಕ್ಕೈಕೊಟ್ಟ ಮತ್ತು ಈಂಜಯಕ್ಕಲ್ ಜಂಕ್ಷನ್‌ಗೆ ಬಂದು ಬೈಪಾಸ್ ರಸ್ತೆ ಮೂಲಕವೂ, ಚಾಕ್ಕ ಅಟ್ಟುವರಾಂಬ ರಸ್ತೆಯ ಮೂಲಕವೂ ಶ್ರೀ ಕ್ಷೇತ್ರವನ್ನು ತಲುಪಬಹುದು. ಪ್ರತಿದಿನ ಬೆಳಿಗ್ಗೆ 5 ರಿಂದ ರಾತ್ರಿ 11.45 ರವರೆಗೆ ಮತ್ತು ಸಂಜೆ 4.30 ರಿಂದ ರಾತ್ರಿ 8.00 ರವರೆಗೆ ತೆರೆದಿರುತ್ತದೆ ಎಂದು ಭಕ್ತರಿಗೆ ತಿಳಯಪಡಿಸುತ್ತಿದ್ದೇವೆ.

ಆನ್‌ಲೈನ್‌ನಲ್ಲಿ ಬಲಿವಾಡು ಬುಕ್ಕಿಂಗ್

ಭಕ್ತರು ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್ www.karikkakomsrichamunditemple.in ಮೂಲಕ ಜಗತ್ತಿನ ಎಲ್ಲಿಂದಲಾದರೂ ಪೂಜೆಗಳು, ಅರ್ಚನೆಗಳು ಮತ್ತು ಪೊಂಗಲ್ ಕಾಣಿಕೆಗಳನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಬಹುದು. ನವೀಕರಣ, ಹಬ್ಬದ ಆಹಾರ ದೇಣಿಗೆಗಳು ಮತ್ತು ಇತರ ದೇಣಿಗೆಗಳು ಸೇರಿದಂತೆ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ದೇವಾಲಯದ ದ್ವಾರಗಳಲ್ಲಿ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, UPI ಮೂಲಕ ಮಾಡಬಹುದು. ಪೂಜೆಗಳು ಮತ್ತು ಕಾಣಿಕೆಗಳ ಆನ್‌ಲೈನ್ ಬುಕಿಂಗ್ ಕುರಿತು ಪ್ರಶ್ನೆಗಳಿಗೆ, ದಯವಿಟ್ಟು 7306090147 ಅನ್ನು ಸಂಪರ್ಕಿಸಿ.

ಪ್ರತೀ ವರ್ಷದಂತೆ ಈ ವರ್ಷವೂ ಪೊಂಗಾಲ ದಿನವಾದ 2026 ಮಾರ್ಚ್ 30ನೇ ತಾರೀಕು ಪೊಂಗಾಲ ಪ್ರಾರಂಭಗೊಳ್ಳುವುದು ಮತ್ತು ನೈವೇದ್ಯ ಮಾಡುವ ದೃಶ್ಯಗಳನ್ನು 24 ನ್ಯೂಸ್ ಚಾನೆಲ್, ಜನಂ ಟಿ.ವಿ., ಅಮೃತ ಚಾನೆಲ್ ಎಂಬೀ ದೃಶ್ಯ ಮಾಧ್ಯಮಗಳು ನೇರ ಪ್ರಸಾರ ಮಾಡುವುದು. ಕ್ಷೇತ್ರ ಉತ್ಸವ ಮಾಹಮಹಂನ 7 ದಿನಗಳ ಸಮಾರಂಭಗಳು, ದೇವಿಯ ಪ್ರದಕ್ಷಿಣೆ, ಪೊಂಗಾಲ ಸಮಾರಂಭಗಳು, ಸಂಜೆ ನಡೆಯುವ ಕಲಾ ಕಾರ್ಯಕ್ರಮಗಳು ಕ್ಷೇತ್ರದ ಫೇಸ್‌ಬುಕ್ ಪೇಜ್, ಟಿ.ಸಿ. ಎನ್‌ಕೇಬಲ್‌ಗಳು, **M7 News, Vigneth TV** ಮುಂತಾದ ಆನ್‌ಲೈನ್ ಚಾನೆಲ್‌ಗಳ ಮೂಲಕ ವಿಶ್ವದ ಎಲ್ಲಿಂದಲೂ ಭಕ್ತಾದಿಗಳಿಗೆ ನೇರವಾಗಿ ವೀಕ್ಷಿಸಬಹುದಾಗಿದೆ.

6ನೇ ಶ್ರೀಮದ್ ದೇವಿ ಭಾಗವತ ನವಾಹಯಜ್ಞ

2026 ಮೇ 01 ರಿಂದ ಮೇ 10 ರವರೆಗೆ

ಯಜ್ಞಾಚಾರ್ಯ: ಶ್ರೀ ಹರೀಶ್ ಚಂದ್ರಶೇಖರನ್

ರುದ್ರೇಶ್ ವಿರುದ್ಧ ಹಕ್ಕುಚ್ಯುತಿ ಮಂಡನೆ

• ಕೆಂಗೇರಿ: ನೈಸ್ ವಿಚಾರದಲ್ಲಿ ಅಶೋಕ್ ಖೇಣಿ ಪರವಾಗಿ ಮಾತನಾಡಿದ್ದ ಬಿಜೆಪಿ ಮುಖಂಡ ಹಾಗೂ ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್ ವಿರುದ್ಧ ಶಾಸಕ ಎಸ್.ಟಿ.ಸೋಮಶೇಖರ್ ಹಕ್ಕು ಚ್ಯುತಿ ಮಂಡನೆಗೆ ಮುಂದಾಗಿದ್ದಾರೆ.

ವಿಧಾನಸಭೆ ಕಾರ್ಯಕಲಾಪದ ವೇಳೆ ಚುಕ್ಕೆ ಗುರುತಿನ ಸಂಖ್ಯೆ 1836ರ ಅಡಿಯಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ನೈಸ್ ರಸ್ತೆಯ ಮುಖಾಂತರವಾಗಿ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಗಳು ಕಿರಿದಾಗಿವೆ. ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಈ ಮೇಲ್ಸೇತುವೆಗಳನ್ನು ಅಗಲೀಕರಣಗೊಳಿಸುವಂತೆ ಕೋರಿದ್ದರು. ನೈಸ್ ರಸ್ತೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಹಣ ಹಾಗೂ ನಿವೇಶನ ನೀಡಬೇಕೆಂದು ಒತ್ತಾಯಿಸಿದ್ದರು. ನೈಸ್ ಟೋಲ್ ರಸ್ತೆಯ ಮೂಲಕ ಪ್ರತಿ ದಿನ ಖೇಣಿ ಅವರಿಗೆ ಸುಮಾರು 10 ಕೋಟಿ ರೂ. ವರಮಾನ ದೊರಕುತ್ತಿದೆ. ಅವಧಿ ಮುಗಿದ ಹಿನ್ನೆಲೆಯಲ್ಲಿ ನೈಸ್ ರಸ್ತೆಯನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದರು.

ಈ ಆರೋಪಕ್ಕೆ ಮಾ.18ರಂದು ತಮ್ಮ ಸ್ವಗೃಹದ ಸೋಂಪುರದ ಬಳಿ ಪತ್ರಿಕಾಗೋಷ್ಠಿ ನಡೆಸಿ ಪ್ರತಿಕ್ರಿಯೆ ನೀಡಿದ್ದ ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್, ಶಾಸಕರ ವಿರುದ್ಧ ಅವಾಚ್ಯ ಶಬ್ದ ಬಳಸಿ ನಿಂದಿಸಿದ್ದರು. ಹಿಂಬಾಲಕರಿಗಾಗಿ ಶಾಸಕ ಎಸ್.ಟಿ.ಸೋಮಶೇಖರ್ ನೈಸ್ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ ಎಂದು ದೂರಿದ್ದರು. ಈ ಹಿನ್ನೆಲೆಯಲ್ಲಿ ನೈಸ್ ವಿಷಯಕ್ಕೆ ಯಾವುದೇ ಸಂಬಂಧ ಇಲ್ಲದ ಖಾಸಗಿ ವ್ಯಕ್ತಿಯೊಬ್ಬರು ನನ್ನ ಮಾನ ಹಾನಿ ಮಾಡಿದ್ದಾರೆ. ಶಾಸಕತ್ವದ ಹಕ್ಕಿಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ರಾಜ್ಯ ವಿಧಾನಸಭೆಯ ಘನತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಎಂ. ರುದ್ರೇಶ್ ವಿರುದ್ಧ ಹಕ್ಕು ಚ್ಯುತಿ ಮಂಡನೆ ಮಾಡುವಂತೆ ಕೋರಿ ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದಾರೆ

ಪ್ರತಿಭಟನೆಗೆ ಮುಂದಾದ ಎಸ್‌ಟಿಎಸ್ ಬೆಂಬಲಿಗರು: ಎಂ. ರುದ್ರೇಶ್ ಅವರ ಹೇಳಿಕೆಗಳಿಂದ ಬೇಸರಗೊಂಡಿರುವ ಎಸ್‌ಟಿಎಸ್ ಬೆಂಬಲಿಗರು ಹಾಗೂ ಅಭಿಮಾನಿಗಳು ಗುರುವಾರ ಸಭೆ ನಡೆಸಿ ರುದ್ರೇಶ್ ವಿರುದ್ಧ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ. ರುದ್ರೇಶ್ ತಮ್ಮ ಬಾಲಿಶ, ಆಧಾರ ರಹಿತ ಆರೋಪಗಳನ್ನು ಕ್ಷಮೆಯೊಂದಿಗೆ ಶೀಘ್ರ ಹಿಂಪಡೆಯಬೇಕು. ತಪ್ಪಿದಲ್ಲಿ ಪಾದಯಾತ್ರೆ ನಡೆಸಿ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದು ಎಚ್ಚರಿಸಿದರು.

ದಾದಿಯರ ಕಾರ್ಯ ಶ್ಲಾಘನೀಯ: ಭಗವಾನ್

• ಬೆಂಗಳೂರು: ಆರೋಗ್ಯ ವ್ಯವಸ್ಥೆಯಲ್ಲಿ ದಾದಿಯರು ನಿರ್ವಹಿಸುವ ಪಾತ್ರ ನಿರ್ಣಾಯಕವಾದುದು ಮತ್ತು ಮಹತ್ವ ಉಳ್ಳದ್ದಾಗಿದೆ ಎಂದು ರಾಜೀವ್‌ಗಾಂಧಿ ಆರೋಗ್ಯ ವಿವಿ ಉಪಕುಲಪತಿ ಡಾ.ಭಗವಾನ್ ಬಿ.ಸಿ. ಅಭಿಪ್ರಾಯಪಟ್ಟರು. ರಾಜ್ಯ ಒಕ್ಕಲಿಗರ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಂಪೇಗೌಡ ಇನ್ಸ್‌ಟ್ಯೂಟ್ ಆಫ್ ನರ್ಸಿಂಗ್ ವತಿಯಿಂದ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಗಳು ಪ್ರತಿಜ್ಞಾ ವಿಧಿ ಸ್ವೀಕರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನರ್ಸಿಂಗ್ ವಿದ್ಯಾರ್ಥಿಗಳು ವೃತ್ತಿ ಮೌಲ್ಯದ ಘನತೆಯನ್ನು ಎತ್ತಿಹಿಡಿಯಬೇಕು ಮತ್ತು ರೋಗಿಗಳ ಆರೈಕೆಯಲ್ಲಿ ನಿರಂತರವಾಗಿ ಶ್ರಮಿಸಬೇಕು. ಗುಣಮಟ್ಟದ ಸೇವೆ ನೀಡಬೇಕು. ಉದಾತ್ತ ವೃತ್ತಿಗೆ ನರ್ಸಿಂಗ್ ಹೆಸರಾಗಿದ್ದು, ಸೇವೆ, ಸಹಾನುಭೂತಿ, ಸಮರ್ಪಿತವಾದ ಕರ್ತವ್ಯದ ಮೂಲಕ ಸಂಸ್ಥೆಗೆ ಹೆಸರು ತರಬೇಕು ಎಂದರು. ವಿದ್ಯಾರ್ಥಿಗಳು ನೈಟಿಂಗೇಲ್ ಪ್ರತಿಜ್ಞೆಯನ್ನು ಹಾಗೂ ನರ್ಸಿಂಗ್ ವೃತ್ತಿಯ ಘನತೆ, ನೈತಿಕತೆ ಮತ್ತು ಜವಾಬ್ದಾರಿಗಳನ್ನು ಎತ್ತಿಹಿಡಿಯುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸುವ ಪ್ರಮಾಣವಚನ ಸ್ವೀಕರಿಸಿದರು.

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆಯವರ ಪತ್ನಿ ಶಕುಂತಲಾ ಹೆಗಡೆಯವರನ್ನು ಸದಾಶಿವನಗರದಲ್ಲಿರುವ ಕೃತಿಕಾ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ರಾಮಕೃಷ್ಣ ಹೆಗಡೆಯವರ ಪುತ್ರಿ ಮಮತಾ ನಿಚ್ಚಾನಿ ಇದ್ದರು.

ಕಿರುಸುದ್ದಿ

ಏ.4ರಂದು ಕೃತಿ ಬಿಡುಗಡೆ

• ಬೆಂಗಳೂರು: ಬಹುರೂಪಿ ಫೌಂಡೇಶನ್ ಹಾಗೂ ಅನಿಕೇತನ ವತಿಯಿಂದ ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಅವರ ಬದುಕು ಜಟಕಾ ಬಂಡಿ, ನಾನದರ ಸಾಹೇಬ ಕೃತಿಯ ಬಿಡುಗಡೆ ಕಾರ್ಯಕ್ರಮವನ್ನು ಏ.4 ರಂದು ಸಂಜೆ 5 ಗಂಟೆಗೆ ನಗರದ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಐಎಎಸ್ ಅಧಿಕಾರಿಗಳ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕೃತಿ ಬಿಡುಗಡೆ ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಚಿರಂಜೀವಿ ಸಿಂಗ್ ಅವರು ವಹಿಸಲಿದ್ದು, ಚಲನಚಿತ್ರ ಹಾಗೂ ಕಿರುತೆರೆ ನಿರ್ದೇಶಕ ಟಿ. ಎನ್. ಸೀತಾರಾಂ ಅವರು ಕೃತಿ ಕುರಿತು ನುಡಿಗಳನ್ನಾಡಲಿದ್ದಾರೆ. ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಕೃತಿಯ ಲೇಖಕ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಉಪಸ್ಥಿತರಿರಲಿದ್ದಾರೆ.

ಪ್ರಶಸ್ತಿ ಕುರಿತ ಆಮಂತ್ರಣ ಪತ್ರ ನಕಲಿ

• ಬೆಂಗಳೂರು: ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರ ಹೆಸರಿನಲ್ಲಿ ಕರ್ನಾಟಕ ಪ್ರಶಸ್ತಿಗಳು -2026 ಎಂಬ ಕಾರ್ಯಕ್ರಮಕ್ಕಾಗಿ ಕೆಲವು ಆಮಂತ್ರಣ ಪತ್ರಗಳು ಹರಿದಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ಲೋಕ ಭವನದಿಂದ ಸ್ಪಷ್ಟೀಕರಣವನ್ನು ನೀಡಿದೆ. ಈ ಆಮಂತ್ರಣಗಳು ನಕಲಿ ಮತ್ತು ಅನಧಿಕೃತವಾಗಿದ್ದು, ರಾಜ್ಯಪಾಲರ, ಲೋಕ ಭವನದ ಅರಿವಿಲ್ಲದೆ ಅಥವಾ ಒಪ್ಪಿಗೆಯಿಲ್ಲದೆ ಇವುಗಳನ್ನು ಚಲಾವಣೆ ಮಾಡಲಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ. ಕರ್ನಾಟಕ ಪ್ರಶಸ್ತಿಗಳು-2026 ಎಂಬ ಹೆಸರಿನ ಯಾವುದೇ ಕಾರ್ಯಕ್ರಮವನ್ನು ಲೋಕ ಭವನವು ಅನುಮೋದಿಸಿಲ್ಲ, ಕೆಲವು ವ್ಯಕ್ತಿಗಳು ಸಾರ್ವಜನಿಕರನ್ನು ಸಂಪರ್ಕಿಸಿ, ಪ್ರಶಸ್ತಿಗಳನ್ನು ನೀಡುವುದಾಗಿ ನಂಬಿಸಿ ಹಣವನ್ನು ಪಡೆಯುತ್ತಿದ್ದಾರೆ ಎಂಬ ಆರೋಪವೂ ಸಹ ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ, ಬೆಂಗಳೂರಿನ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು, ಎಫ್‌ಐಆರ್ ನೋಂದಣಿ ಸೇರಿದಂತೆ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲು ವಿನಂತಿಸಲಾಗಿದೆ. ಸಾರ್ವಜನಿಕರು ಇಂತಹ ವಂಚನೆಯ ಸಂವಹನಗಳಿಗೆ ಪ್ರತಿಕ್ರಿಯಿಸದೆ ಜಾಗರೂಕರಾಗಿರಲು ಸೂಚಿಸಲಾಗಿದೆ. ಅಲ್ಲದೇ, ಇಂತಹ ಯಾವುದೇ ನಿದರ್ಶನಗಳು ಕಂಡುಬಂದಲ್ಲಿ ಅವುಗಳನ್ನು ಪೊಲೀಸ್ ಅಧಿಕಾರಿಗಳಿಗೆ ವರದಿ ಮಾಡಬಹುದಾಗಿದೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.10ಕ್ಕೆ ಖಾಲಿ ಹುದ್ದೆಗಳ ನೇಮಕಾತಿ ಪರೀಕ್ಷೆ

• ಬೆಂಗಳೂರು: ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ಏ.9 ರಂದು ಉಪ ಚುನಾವಣೆ ಘೋಷಣೆಯಾಗಿರುವ ಕಾರಣ ಅಂದು ನಡೆಸಬೇಕಾಗಿದ್ದ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿನ ವಿವಿಧ ಖಾಲಿ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಏ.10 ರಂದು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತೀರ್ಮಾನಿಸಿದೆ. ಒಟ್ಟು 33 ಹುದ್ದೆಗಳಿಗೆ ಬೆಂಗಳೂರು ಮತ್ತು ಧಾರವಾಡ ಕೇಂದ್ರಗಳಲ್ಲಿ ಅಂದು ಲಿಖಿತ ಪರೀಕ್ಷೆ ನಡೆಯಲಿದೆ. ಸದ್ಯದಲ್ಲೇ ಪ್ರವೇಶ ಪತ್ರಗಳನ್ನು ಬಿಡುಗಡೆ ಮಾಡುತ್ತಿದ್ದು, ಅಭ್ಯರ್ಥಿಗಳು ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಪರೀಕ್ಷೆಗೆ ಹಾಜರಾಗಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಒಟ್ಟು 2,500 ಮಂದಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದಾರೆ ಎಂದು ವಿವರಿಸಿದ್ದಾರೆ.

ರಾಮನಾಮ ಜಪ, ಭಜನೆಗಳ ಜತೆ ಭಕ್ತರ ಸಂಭ್ರಮ | ಪಾನಕ, ಮಜ್ಜಿಗೆ, ಕೋಸಂಬರಿ ವಿತರಣೆ

ನಗರಾದ್ಯಂತ ಶ್ರೀರಾಮನ ಸ್ಮರಣೆ

• ಬೆಂಗಳೂರು: ಭಕ್ತಿ, ಶಾಂತಿ ಮತ್ತು ಧರ್ಮದ ಮೌಲ್ಯಗಳನ್ನು ಬೆಳೆಸುವ ಪವಿತ್ರ ದಿನವಾಗಿರುವ ರಾಮ ನವಮಿ ಹಬ್ಬದ ಪ್ರಯುಕ್ತ ಶುಕ್ರವಾರ ನಗರದಾದ್ಯಂತ ರಾಮ ನಾಮ ಜಪ ಹಾಗೂ ಭಜನೆಗಳ ಜತೆಗೆ ಭಕ್ತರು ಸಡಗರದೊಂದಿಗೆ ಸಂಭ್ರಮಿಸಿದರು. ಹಲವು ರಸ್ತೆಗಳು ಮತ್ತು ದೇವಾಲಯಗಳಲ್ಲಿ ಪಾನಕ, ಮಜ್ಜಿಗೆ, ಕೋಸಂಬರಿಯನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಯಿತು.

ಶ್ರೀರಾಮ, ಕೃಷ್ಣ ಮತ್ತು ಹನುಮಂತನ ದೇವಾಲಯಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಮತ್ತು ಅರ್ಚನೆಗಳನ್ನು ನೆರವೇರಿದವು. ಬಹುತೇಕ ದೇವಸ್ಥಾನಗಳಲ್ಲಿ ಭಕ್ತರು ಮುಂಜಾನೆಯಿಂದಲೇ ಸರತಿ ಸಾಲಿನಲ್ಲಿ ನಿಂತು ರಾಮನ ದರ್ಶನ ಪಡೆದರು. ಕೆಲವೆಡೆ ವಿಶೇಷ ಹೋಮಗಳನ್ನು ನಡೆಸಲಾಯಿತು. ಮಕ್ಕಳೊಂದಿಗೆ ದೇವಸ್ಥಾನಗಳಿಗೆ ಬಂದ ಕೆಲವರು ಮಜ್ಜಿಗೆ, ಪಾನಕಕ್ಕೆಂದೇ ಕಾದು ಸ್ವೀಕರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ರಾಮ, ಆಂಜನೇಯನ ವೇಷಧಾರಿಗಳು ನಗರದ ಕೆಲವೆಡೆ ವಿಶೇಷ ಪ್ರದರ್ಶನ ನೀಡಿದರು.

ಮೈಸೂರು ರಸ್ತೆಯ ಶ್ರೀ ಗಾಳಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀ ರಾಮರಥೋತ್ಸವ ವೈಭವದಿಂದ ಕೂಡಿದ್ದು, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯ ದೇವಾಲಯ, 'ಇಸ್ಕಾನ್', ವಿಜಯನಗರದ ಕೋದಂಡರಾಮ ದೇವಾಲಯ, ಯಶವಂತಪುರದ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ಅಲಂಕಾರ, ಪೂಜೆ, ಹೋಮಗಳನ್ನು ನೆರವೇರಿಸಲಾಯಿತು.

ಶ್ರೀ ಕೋದಂಡರಾಮಸ್ವಾಮಿ ಪೂಜಾ ಕೈಂಕರ್ಯ

• ಕೆ.ಆರ್.ಪುರ: ರಾಮಮೂರ್ತಿನಗರದ ಯರಯ್ಯನಪಾಳ್ಯ ಗ್ರಾಮದ ಶ್ರೀಕೋದಂಡರಾಮ ಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ದೇವಾಲಯದಲ್ಲಿ ದೇವರಿಗೆ ಅಭಿಷೇಕ, ಹೋಮಹವನ, ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ ಹಾಗೂ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು. ರಾಮಮೂರ್ತಿನಗರ, ವಿಜಿನಾಪುರ, ಬಾಣಸವಾಡಿ, ಕೆ.ಆರ್.ಪುರ, ಕಲ್ಕೆರೆ, ಭೋವಿ ಕಾಲೋನಿ ಸೇರಿದಂತೆ ವಿವಿಧ ಭಾಗಗಳಿಂದ 15 ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸಿ, ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಈ ಭಾಗದ ಪ್ರಸಿದ್ಧ ದೇವಸ್ಥಾನವಾದ ಶ್ರೀಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ವಿಶೇಷವಾಗಿ ರಾಮನವಮಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷವೂ ಸಾವಿರಾರು ಭಕ್ತರಿಗೆ ಅನ್ನದಾಸೋಹ ಹಮ್ಮಿಕೊಳ್ಳಲಾಗಿತ್ತು ಎಂದು ದೇವಸ್ಥಾನದ ಮುಖ್ಯಸ್ಥ ಭಾಸ್ಕರ್ ನಾಗರಾಜ್ ತಿಳಿಸಿದರು.

ಎಲ್ಲೆಲ್ಲಿ ಉತ್ಸವ

ವಿಶೇಷವಾಗಿ ರಾಜಾಜಿನಗರದಲ್ಲಿ ಶ್ರೀ ರಾಮ ಸೇವಾ ಸಮಿತಿ ವತಿಯಿಂದ 70ನೇ ಶ್ರೀ ರಾಮೋತ್ಸವದಲ್ಲಿ ಬ್ರಹ್ಮರಥೋತ್ಸವಕ್ಕೆ ಕಾಂಗ್ರೆಸ್ ಪಕ್ಷದ ಮುಖಂಡ ರಘುವೀರ್ ಎಸ್. ಗೌಡ ಅವರು ವಿಶೇಷ ಪೂಜೆ ಸಲ್ಲಿಸಿ ಭವ್ಯ ಚಾಲನೆ ನೀಡಿದರು. ಶಂಕರಮಠ ರಸ್ತೆಯಲ್ಲಿರುವ ಶ್ರೀ ರಾಮ ಸೇವಾ ಮಂಡಳಿ ವತಿಯಿಂದ 58ನೇ ವರ್ಷದ ಶ್ರೀ ರಾಮೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಜಯನಗರ, ಜೆ.ಪಿ.ನಗರ, ಮೆಜೆಸ್ಟಿಕ್, ಹೆಬ್ಬಾಳ, ಕೆ.ಆರ್. ಮಾರುಕಟ್ಟೆ, ಟೌನ್‌ಹಾಲ್ ಬಳಿ ಸೇರಿದಂತೆ ಹಲವು ಭಾಗಗಳಲ್ಲಿ ರಸ್ತೆಗಳಲ್ಲಿ ಶಾಮಿಯಾನ ಹಾಕಿ ರಾಮನ ಹೆಸರಿನಲ್ಲಿ ಭಕ್ತಾದಿಗಳಿಗೆ ಪಾನಕ, ಕೋಸಂಬರಿ, ಮಜ್ಜಿಗೆ ವಿತರಿಸುವ ಮೂಲಕ ಬೆಂಗಳೂರಿನಲ್ಲಿ ಬಿಸಿಲಿನ ತಾಪಮಾನದಿಂದ ದಣಿವಾರಿಸಲು ಜನರು ಪ್ರಸಾದಗಳನ್ನು ಸ್ವೀಕರಿಸಿ, ತೆರಳುತ್ತಿದ್ದರು.

ಎಲ್ಲರಿಗೂ ಸಮಾನ ಆರೋಗ್ಯಕ್ಕೆ ಆದ್ಯತೆ

• ಬೆಂಗಳೂರು: ಆರೋಗ್ಯವಂತ ಸಮಾಜ ಇದ್ದರೆ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಎಲ್ಲರಿಗೂ ಸಮಾನ ಆರೋಗ್ಯ ಒದಗಿಸುವುದು ನಮ್ಮ ಆದ್ಯತೆ. ಆರೋಗ್ಯವಂತ ನಾಗರಿಕರು ದೇಶದ ಅಭಿವೃದ್ಧಿಗೆ ಬುನಾದಿ ಎಂದು ಬಿಜೆಪಿ ಯುವ ಮುಖಂಡ ಡಾ. ನಿರಂತರ ಗಣೇಶ್ ಹೇಳಿದರು.

ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ಯಾನ್ಸ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಕೋವಿಡ್ ನಂತರದಲ್ಲಿ ವಿಧಾನಸಭಾ ಕ್ಷೇತ್ರವಾರು ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ವಾರ್ಡ್ ಮಟ್ಟದಲ್ಲಿ ತಿಂಗಳಿಗೊಮ್ಮೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳುವ ಮೂಲಕ ಆರ್ಥಿಕವಾಗಿ ದುರ್ಬಲರಾದವರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಮಧುಮೇಹ, ರಕ್ತದೊತ್ತಡ, ಹೃದಯ ತಪಾಸಣೆ, ಎಲುಬು ಮತ್ತು ಕೀಲು ಪರೀಕ್ಷೆ, ಕಣ್ಣಿನ ತಪಾಸಣೆ ನಡೆಸಲಾಗುತ್ತಿದೆ. ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರಿಗಾಗಿ ವಿಶೇಷ ತಪಾಸಣೆ ನಡೆಸಿ ಉಚಿತವಾಗಿ ಚಿಕಿತ್ಸೆ ಸಹ ನೀಡಲಾಗುತ್ತಿದೆ. ಗಂಭೀರ ಕಾಯಿಲೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡುವುದಕ್ಕೆ ಈ ಶಿಬಿರ ನೆರವಾಗಿದೆ. ಸಾರ್ವಜನಿಕರಲ್ಲಿ ಆರೋಗ್ಯದ ಜಾಗೃತಿ ಮೂಡಿಸುವುದರ ಜತೆಗೆ ಉಚಿತ ಆರೋಗ್ಯ ಸೇವೆ ನೀಡುವ ಸಲುವಾಗಿ ನಗರದ ಹಲವೆಡೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಆಯುಷ್ಮಾನ್ ಭಾರತ್ ವಿಶ್ವದ ದೊಡ್ಡ ಆರೋಗ್ಯ ವಿಮಾ ಯೋಜನೆ

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ. ಭಾರತ ಸರ್ಕಾರ ಕೂಡ ಆರೋಗ್ಯ ಕ್ಷೇತ್ರಕ್ಕೆ ವಿಶೇಷ ಒತ್ತು ಕೊಟ್ಟಿದೆ. ಈ ಸಾಲಿನ ಬಜೆಟ್‌ನಲ್ಲಿ 1 ಲಕ್ಷ ಕೋಟಿ ರೂ. ಅಧಿಕ ಹಣವನ್ನು ಆರೋಗ್ಯ ಕ್ಷೇತ್ರಕ್ಕೆ ಮೀಸಲಿರಿಸಲಾಗಿದೆ. ಆರೋಗ್ಯ ರಕ್ಷಣೆಗಾಗಿ ಸರ್ಕಾರದ ವೆಚ್ಚವು ವರ್ಷದಿಂದ ವರ್ಷಕ್ಕೆ ಶೇ.6.27ರಷ್ಟು ಹೆಚ್ಚಾಗಿದೆ. ಆರ್ಥಿಕವಾಗಿ ದುರ್ಬಲ ಕುಟುಂಬಗಳಿಗೆ ವಾರ್ಷಿಕ ರೂ.5 ಲಕ್ಷದವರೆಗೆ ನಗದು ರಹಿತ ಚಿಕಿತ್ಸೆ ಒದಗಿಸುವ ಆಯುಷ್ಮಾನ್ ಭಾರತ್ ಯೋಜನೆ ವಿಶ್ವದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಯಾಗಿದೆ ಎಂದು ಹೇಳಿದರು.

ಶ್ರೀರಾಮ ಮನುಕುಲಕ್ಕೆ ಆದರ್ಶಪ್ರಾಯ

• ದಾಸರಹಳ್ಳಿ: ಮರ್ಯಾದ ಪುರುಷೋತ್ತಮ ಶ್ರೀರಾಮಚಂದ್ರ ಮನುಕುಲಕ್ಕೆ ಆದರ್ಶಪ್ರಾಯರಾಗಿದ್ದಾರೆ ಎಂದು ಶ್ರೀ ಸಾಯಿ ಫೌಂಡೇಶನ್ ಅಧ್ಯಕ್ಷ ಶೆಟ್ಟಿಹಳ್ಳಿ ಬಿ.ಸುರೇಶ್ ತಿಳಿಸಿದರು.

ಶೆಟ್ಟಿಹಳ್ಳಿಯಲ್ಲಿ ಶ್ರೀರಾಮನವಮಿ ಪ್ರಯುಕ್ತ ಭಾವಚಿತ್ರಕ್ಕೆ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿ ಮಾತನಾಡಿದ ಅವರು, ತಂದೆಯ ಮಾತನ್ನು ಸಾಕಾರಗೊಳಿಸಲು ಅಧಿಕಾರ, ಐಶ್ವರ್ಯ, ರಾಜ ವೈಭೋಗವನ್ನು ಬದಿಗೊತ್ತಿ ಹದಿನಾಲ್ಕು ವರ್ಷ ವನವಾಸ ಪೂರೈಸಿದ ಪ್ರಾತಃಸ್ಮರಣೀಯ, ಪ್ರಜಾ ಪರಿಪಾಲಕ, ಶ್ರೀರಾಮಚಂದ್ರ ಭಾರತೀಯರ ಪಾಲಿಗೆ ಆರಾಧ್ಯ ದೈವವಾಗಿದ್ದಾರೆ ಎಂದರು.

ಬೃಹತ್ ಹೂಡಿಕೆ ಯೋಜನೆ ಘೋಷಣೆ

• ಬೆಂಗಳೂರು: ಪ್ರಸಿದ್ಧ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ತಯಾರಿಕಾ ಸಂಸ್ಥೆ ಅಲ್ಟ್ರಾವೈಲೆಟ್ ಆಟೋಮೋಟಿವ್ ಕರ್ನಾಟಕದಲ್ಲಿ ತನ್ನ ಉತ್ಪಾದನಾ ನೆಲೆಯನ್ನು ವಿಸ್ತರಿಸಲು ಮುಂದಾಗಿದ್ದು, ಅದರ ಭಾಗವಾಗಿ ಐದು ವರ್ಷಗಳ ಬೃಹತ್ ಹೂಡಿಕೆ ಯೋಜನೆಯನ್ನು ಘೋಷಿಸಿದೆ.

ಈ ನಿಟ್ಟಿನಲ್ಲಿ, ನಗರದಲ್ಲಿ ನಡೆದ 'ಇನ್ವೆಸ್ಟ್ ಕರ್ನಾಟಕ' ಜಾಗತಿಕ ಹೂಡಿಕೆದಾರರ ಸಮಾವೇಶದ ಸಂದರ್ಭದಲ್ಲಿ, ಅಲ್ಟ್ರಾವೈಲೆಟ್ ಆಟೋಮೋಟಿವ್ ಸಂಸ್ಥೆಯು ಕರ್ನಾಟಕ ಸರ್ಕಾರದ ಜತೆಗೆ ಮಹತ್ವದ ತಿಳುವಳಿಕಾ ಪತ್ರಕ್ಕೆ ಸಹಿ ಹಾಕಿದ್ದು, ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರ ಸಮ್ಮುಖದಲ್ಲಿ ಈ ಒಪ್ಪಂದ ಮಾಡಿಕೊಳ್ಳಲಾಯಿತು.

ಈ ಒಪ್ಪಂದದ ಕುರಿತು ಅಲ್ಟ್ರಾವೈಲೆಟ್ ಆಟೋಮೊಟಿವ್ ಸಂಸ್ಥೆಯ ಸಿಇಒ ನಾರಾಯಣ್ ಸುಬ್ರಮಣ್ಯಂ ಮಾತನಾಡಿ, ನಮ್ಮ ಉತ್ಪಾದನಾ ಸಾಮರ್ಥ್ಯದ ವಿಸ್ತರಣೆಯ ಈ ಪ್ರಸ್ತಾವನೆಯು ರಾಜ್ಯದ ಇವಿ ಪರಿಸರ ವ್ಯವಸ್ಥೆ, ಪ್ರತಿಭಾ ಸಂಪನ್ಮೂಲ ಮತ್ತು ಸರ್ಕಾರದ ಬೆಂಬಲದ ಮೇಲೆ ನಮಗಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಮೂಲಸೌಕರ್ಯಗಳ ಲಭ್ಯತೆ, ಸಕ್ರಿಯ ಆಡಳಿತ ಮತ್ತು ದೀರ್ಘಕಾಲದ ಪ್ರೋತ್ಸಾಹಕ ಕ್ರಮಗಳು ಅಲ್ಟ್ರಾವೈಲೆಟ್ ಸಂಸ್ಥೆಯ ಮುಂದಿನ ಹಂತದ ಬೆಳವಣಿಗೆಗೆ ಬಲವಾದ ಅಡಿಪಾಯವನ್ನು ಹಾಕಿಕೊಟ್ಟಿವೆ ಎಂದರು.

ಚಾಲಕರ ವಿರುದ್ಧ 73 ಪ್ರಕರಣ ದಾಖಲು

• ಬೆಂಗಳೂರು: ಮಕ್ಕಳ ಭವಿಷ್ಯ ಮತ್ತು ಸಾರ್ವಜನಿಕರ ಸುರಕ್ಷತೆಯನ್ನೇ ಬಲಿಕೊಟ್ಟು ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ ಚಾಲಕರಿಗೆ ನಗರ ಸಂಚಾರ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ. ಶುಕ್ರವಾರ ಬೆಳ್ಳಂಬೆಳಗ್ಗೆ ಶಾಲಾ ವಾಹನಗಳು ಮತ್ತು ನೀರಿನ ಟ್ಯಾಂಕರ್‌ಗಳ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು ಒಟ್ಟು 73 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ನಗರದಾದ್ಯಂತ ಮಾ.27ರಂದು ಬೆಳಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ ಸಂಚಾರ ಪೊಲೀಸರು ಈ ವಿಶೇಷ ತಪಾಸಣೆಯನ್ನು ಕೈಗೊಂಡಿದ್ದರು. ಮುಗ್ಧ ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ಶಾಲಾ ವಾಹನಗಳ ಚಾಲಕರು ಹಾಗೂ ಅತಿ ವೇಗವಾಗಿ ಸಂಚರಿಸುವ ನೀರಿನ ಟ್ಯಾಂಕರ್‌ಗಳ ಚಾಲಕರ ಮೇಲೆ ಪೊಲೀಸರು ನಿಗಾ ಇರಿಸಿದ್ದರು. ತಪಾಸಣೆಯ ವೇಳೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ 59 ಶಾಲಾ ವಾಹನ ಚಾಲಕರು ಹಾಗೂ 14 ನೀರಿನ ಟ್ಯಾಂಕರ್ ಚಾಲಕರನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಲಾಗಿದೆ. ಈ ಅಜಾಗರೂಕ ಚಾಲನೆಯಿಂದ ಮಕ್ಕಳು ಮತ್ತು ಸಾರ್ವಜನಿಕರ ಜೀವಕ್ಕೆ ಸಂಚಕಾರ ತರುವ ಸಾಧ್ಯತೆಯಿರುವುದರಿಂದ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ವಿಶೇಷ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದ ಎಲ್ಲಾ ಚಾಲಕರ ಚಾಲನಾ ಪರವಾನಗಿಯನ್ನು (ಡಿಎಲ್) ಅಮಾನತು ಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ (ಆರ್‌ಟಿಒ) ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಲ್ಯಾಂಬೋರ್ಗಿನಿ ಕಾರು ವಶಪಡಿಸಿಕೊಂಡ ಪೊಲೀಸರು
ಮಾಲೀಕನ ವಿರುದ್ಧ ವಂಚನೆ ಪ್ರಕರಣ

• ಬೆಂಗಳೂರು: ಇತ್ತೀಚೆಗೆ ನಗರದ ರಸ್ತೆಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿ ಸ್ಟಂಟ್ ಮಾಡುತ್ತಿದ್ದ ಐಷಾರಾಮಿ ಲ್ಯಾಂಬೋರ್ಗಿನಿ ಕಾರೊಂದನ್ನು ಕಬ್ಬನ್ ಪಾರ್ಕ್ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದು, ಇದೀಗ ಮಾಲೀಕನ ವಿರುದ್ಧ ವಂಚನೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾ.21ರಂದು ಮಧ್ಯರಾತ್ರಿ 2.40ರ ಸುಮಾರಿಗೆ ನಗರದ ಅನಿಲ್ ಕುಂಬ್ಳೆ ಜಂಕ್ಷನ್ ಬಳಿ ಲ್ಯಾಂಬೋರ್ಗಿನಿ ಹುರಕಾನ್ ಕಾರನ್ನು ಅತ್ಯಂತ ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಲಾಗುತ್ತಿತ್ತು. ಚಾಲಕ ಕಾರನ್ನು ಡ್ರಿಫ್ಟಿಂಗ್ ಮಾಡುವ ಮೂಲಕ ಸಂಚಾರ ನಿಯಮಗಳನ್ನು ಗಾಳಿಗೆ ತೂರಿದ್ದ. ಈ ದೃಶ್ಯವನ್ನು ಗಮನಿಸಿದ ಸಾರ್ವಜನಿಕರು ನಗರ ಪೊಲೀಸರ ಸಾಮಾಜಿಕ ಜಾಲತಾಣದ ಪೇಜ್‌ಗೆ ಟ್ಯಾಗ್ ಮಾಡಿ ದೂರಿದ್ದರು.

ಸಾರ್ವಜನಿಕರ ದೂರಿನ ಮೇರೆಗೆ ಕಾರ್ಯಪ್ರವೃತ್ತರಾದ ಕಬ್ಬನ್ ಪಾರ್ಕ್ ಸಂಚಾರ ಪೊಲೀಸರು ಕಾರನ್ನು ಅಮಾನತುಪಡಿಸಿಕೊಂಡು ತನಿಖೆ ನಡೆಸಿದಾಗ ಆಘಾತಕಾರಿ ವಿಚಾರಗಳು ಬೆಳಕಿಗೆ ಬಂದಿವೆ. ಕಾರಿಗೆ ಅಳವಡಿಸಲಾಗಿದ್ದ ಕೆಎ-05-ಎನ್‌ಆರ್-0009 ಎಂಬ ನಂಬರ್ ಈವರೆಗೂ ಸಾರಿಗೆ ಇಲಾಖೆಯಲ್ಲಿ ಯಾವುದೇ ವಾಹನಕ್ಕೂ ನೋಂದಣಿಯಾಗಿಲ್ಲ ಎಂಬುದು ಆರ್‌ಟಿಒ ಅಧಿಕಾರಿಗಳ ವರದಿಯಿಂದ ತಿಳಿದುಬಂದಿದೆ. ಈ ಕಾರಿನ ಮೂಲ ನೋಂದಣಿ ಸಂಖ್ಯೆ ಡಿಎಲ್-1-ಸಿಟಿ-1515 ಆಗಿದ್ದು, ಇದನ್ನು ದೆಹಲಿಯ ಮೂಲ ಮಾಲೀಕರಿಂದ ಖರೀದಿಸಲಾಗಿತ್ತು. ಆದರೆ, ಕರ್ನಾಟಕದಲ್ಲಿ ನಿಯಮಾನುಸಾರ ವಾಹನ ವರ್ಗಾವಣೆ ಮಾಡಿಕೊಳ್ಳದೆ ನಕಲಿ ನಂಬರ್ ಪ್ಲೇಟ್ ಅಳವಡಿಸಲಾಗಿತ್ತು. ಸಂಚಾರ ನಿಯಮ ಉಲ್ಲಂಘಿಸಿದಾಗ ಪೊಲೀಸರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಹಾಗೂ ಅಧಿಕಾರಿಗಳನ್ನು ನಂಬಿಸಿ ವಂಚಿಸಲು ಈ ನಕಲಿ ನಂಬರ್ ಬಳಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದಾಶಿವನಗರದ ನಿವಾಸಿ ರಿಕ್ಕಿ ರೈ ಎಂಬವರನ್ನು ಆರೋಪಿ ಎಂದು ಗುರುತಿಸಲಾಗಿದೆ. ಸುಮಾರು 3 ಕೋಟಿ ರೂ. ಮೌಲ್ಯದ ಈ ಐಷಾರಾಮಿ ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 318(4), 340(2), 341 ಹಾಗೂ ಮೋಟಾರು ವಾಹನ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮಹಿಳಾ ಸಬಲೀಕರಣಕ್ಕೆ ಸಾಮಾಜಿಕ ಹೊಣೆಗಾರಿಕೆ ಅಗತ್ಯ: ಲಲಿತಾ ಲಕ್ಷ್ಮಿ

• ಕೆಂಗೇರಿ: ಕೇವಲ ಕಾನೂನುಗಳಿಂದ ಮಹಿಳಾ ಸಬಲೀಕರಣದ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗುವುದಿಲ್ಲ, ಜತೆಗೆ ಸಾಮಾಜಿಕ ಹೊಣೆಗಾರಿಕೆಯು ಸಹ ಬೇಕಾಗುತ್ತದೆ ಎಂದು ಮೂಗಾಂಬಿಗೈ ಚಾರಿಟಬಲ್ ಅಂಡ್ ಎಜುಕೇಷನಲ್ ಟ್ರಸ್ಟ್ ಮುಖ್ಯಸ್ಥೆ ಲಲಿತಾ ಲಕ್ಷ್ಮಿ ಹೇಳಿದರು.

ಮೈಸೂರು -ಬೆಂಗಳೂರು ಮುಖ್ಯರಸ್ತೆಯಲ್ಲಿರುವ ರಾಜರಾಜೇಶ್ವರಿ ಮೆಡಿಕಲ್ ಕಾಲೇಜಿನ ಎಸಿಎಸ್ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಎಲ್ಲಾ ಪೋಷಕರು ತಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ, ಹವ್ಯಾಸಗಳಿಗೆ ಬೆನ್ನೆಲುಬಾಗಿ ನಿಲ್ಲಬೇಕು. ಲಿಂಗ ಭೇದ ಮಾಡಬಾರದು. ಮಕ್ಕಳ ಅಭಿರುಚಿಗೆ ತಕ್ಕಂತೆ ಪೂರಕವಾದ ಶಿಕ್ಷಣ, ಕ್ರೀಡೆ ಹಾಗೂ ಹವ್ಯಾಸಗಳಿಗೆ ಸಹಕಾರ ನೀಡಿದರೆ ಹೆಣ್ಣು ಮಕ್ಕಳು ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದರು.

ವಿದ್ಯೆ, ಉದ್ಯೋಗ ಗಳಿಕೆಯ ಮಾಧ್ಯಮವಲ್ಲ, ವ್ಯಕ್ತಿತ್ವ ವಿಕಾಸ ಹಾಗೂ ಸ್ವತಂತ್ರ ಅಸ್ತಿತ್ವವನ್ನು ರೂಪಿಸುವ ಜ್ಞಾನ ಮಾರ್ಗವಾಗಿದೆ. ಶಿಕ್ಷಣವೆಂಬ ದೀವಿಗೆಯ ಬೆಳಕಿನಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು. ಕೇಂದ್ರ ಸರ್ಕಾರ ಹೆಣ್ಣು ಮಕ್ಕಳಿಗೆ ಶೇ.50ರಷ್ಟು ಮೀಸಲಾತಿ ಘೋಷಣೆ ಮಾಡಿದೆ. ಅದರಂತೆ ಆರ್ ಆರ್ ಸಮೂಹ ಸಂಸ್ಥೆಯಲ್ಲೂ ಶೇ.60ರಷ್ಟು ಉದ್ಯೋಗವನ್ನು ಮಹಿಳೆಯರಿಗೆ ಮೀಸಲಿಡುವ ಮೂಲಕ ಮಹಿಳೆಯರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು.

ಚಿತ್ರ ನಟಿ ಮೇಘಾ ಶೆಟ್ಟಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮದೆಯಾದ ಛಾಪು ಮೂಡಿಸಿದ್ದಾರೆ. ಅವರ ಸಾಧನೆಗಳು ನಮಗೆ ಸ್ಫೂರ್ತಿಯಾಗಿದೆ. ಮಹಿಳೆ ಅಬಲೆಯಲ್ಲ ಅವಳು ಸಬಲೆ, ಆತ್ಮ ವಿಶ್ವಾಸದಿಂದ ಮುನ್ನುಗ್ಗಿದರೆ ಯಾವುದೇ ಕಾರ್ಯ ಅಸಾಧ್ಯವಲ್ಲ, ಆತ್ಮ ವಿಶ್ವಾಸವೇ ನನ್ನ ಯಶಸ್ಸಿಗೆ ಕಾರಣ ಎಂದರು. ಡಾ.ಎಸ್.ವಿಜಯಾನಂದ್, ಡಾ.ಸತ್ಯ ಮೂರ್ತಿ, ಡಾ. ಪ್ರತಿಭಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಶ್ರೀ ರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್- 88ನೇ ಶ್ರೀ ರಾಮನವಮಿ ಗ್ಲೋಬಲ್ ಮ್ಯೂಸಿಕ್ ಫೆಸ್ಟಿವಲ್-2026
- ಸ್ಥಳ: ಹಳೆ ಕೋಟೆ ಹೈಸ್ಕೂಲ್ ಗ್ರೌಂಡ್ಸ್, ಚಾಮರಾಜಪೇಟೆ.
- ಬೆಳಗ್ಗೆ 8

◆

- ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
- ಸ್ಥಳ: ಶೇಷಾದ್ರಿಪುರಂ ಕಾಲೇಜು ಸಭಾಂಗಣ, ಶೇಷಾದ್ರಿಪುರ
- ಬೆಳಗ್ಗೆ 10.30

◆

- 450 ಹಾಸಿಗೆಗಳ ನೂತನ ಸ್ಪೆಷಾಲಿಟಿ ಆಸ್ಪತ್ರೆಯ ಲೋಕಾರ್ಪಣೆ ಸಮಾರಂಭ.
- ಸ್ಥಳ: ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಹೊಸ ಸ್ಪೆಷಾಲಿಟಿ ಆಸ್ಪತ್ರೆಯ ಆವರಣ,
- ಬೆಳಗ್ಗೆ 11

₹1500 ಕೋಟಿ ಆದಾಯ ಗುರಿ

• **ಬೆಂಗಳೂರು:** ಪೂರ್ವ ನಗರ ಪಾಲಿಕೆ 3889 ಕೋಟಿ ರೂ. ಬಜೆಟ್ ಮಂಡಿಸಿದ್ದು,2026-27ನೇ ಸಾಲಿನಲ್ಲಿ ಆದಾಯ ವೃದ್ಧಿಗೆ ಅನೇಕ ಉಪಕ್ರಮಗಳನ್ನು ರೂಪಿಸಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಬಲಪಡಿಸಿ 1500 ಕೋಟಿ ರೂ. ಆದಾಯದ ಗುರಿ ಸಾಧಿಸಲು ಯೋಜನೆ ರೂಪಿಸಿದೆ. ಅಲ್ಲದೆ ಆಸ್ತಿ ತೆರಿಗೆ ಪರಿಷ್ಕರಣೆ ಸೇರಿದಂತೆ ಇನ್ನಿತರ ಕ್ರಮದಿಂದ 150 ಕೋಟಿ ಹೆಚ್ಚುವರಿ ಆದಾಯದ ನಿರೀಕ್ಷೆಯಲ್ಲಿ ಪಾಲಿಕೆ ಇದೆ. ಇ-ಆಸ್ತಿ ತೆರಿಗೆಯಲ್ಲಿ ವರ್ಷಕ್ಕೆ ಹೆಚ್ಚುವರಿಯಾಗಿ 100 ಕೋಟಿ ರೂ. ಗಳಿಸಲು ಪಾಲಿಕೆ ಪ್ರಯತ್ನ ನಡೆಸಿದೆ.

ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆಯಿಂದ 225 ಕೋಟಿ ಗಳಿಸುವ ನಿರೀಕ್ಷೆಯನ್ನು ಪಾಲಿಕೆ ಇಟ್ಟುಕೊಂಡಿದೆ. ಹೊಸ ಜಾಹಿರಾತು ನೀತಿಯಿಂದ ವಿವಿಧ ತರದ ಜಾಹೀರಾತು ಉಪಕ್ರಮದಿಂದ 120.75 ಕೋಟಿ ಆದಾಯದ ನಿರೀಕ್ಷಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಏಕನಿವೇಶನ ಸ್ವತ್ತಿನಿಂದ 139 ಕೋಟಿ ಹೆಚ್ಚುವರಿ ಆದಾಯದ ನಿರೀಕ್ಷೆ ಮಾಡಲಾಗಿದೆ. 2026-27ನೇ ಸಾಲಿನಲ್ಲಿ ರಾಜ್ಯ ಸರ್ಕಾರದ 15 ಮತ್ತು 16ನೇ ಹಣಕಾಸು ಆಯೋಗದಡಿ ಕ್ರಮವಾಗಿ 73 ಕೋಟಿ, 89 ಕೋಟಿ, ಕೇಂದ್ರ ಹಣಕಾಸು ಆಯೋಗದಿಂದ 114 ಕೋಟಿ ರೂ. ಆದಾಯವನ್ನು ನಿರೀಕ್ಷಿಸಲಾಗಿದೆ ಎಂದು ಪಾಲಿಕೆ ಬಜೆಟ್‌ನಲ್ಲಿ ತಿಳಿಸಿದೆ. ಅಸಾಧಾರಣ ಆದಾಯ, ಕರ್ನಾಟಕ ಸರ್ಕಾರದ ರಾಜಸ್ವ, ಬಂಡವಾಳ ಅನುದಾನ ಸೇರಿದಂತೆ ಒಟ್ಟಾರೆ 3890 ಕೋಟಿ ಆದಾಯದ ನಿರೀಕ್ಷೆ ಇದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಪೂರ್ವ ಪಾಲಿಕೆ ವೆಚ್ಚದ ವಿವರ

- ಸಿಬ್ಬಂದಿ ವೆಚ್ಚ - 302 ಕೋಟಿ
- ಆಡಳಿತ ವೆಚ್ಚ - 82 ಕೋಟಿ
- ಕಸ ವಿಲೇವಾರಿ - 300 ಕೋಟಿ
- ನಿರ್ವಹಣೆ - 342 ಕೋಟಿ
- ಆರೋಗ್ಯ, ಶಿಕ್ಷಣ - 267 ಕೋಟಿ
- ಅಭಿವೃದ್ಧಿ ಕಾಮಗಾರಿಗಳು - 2400 ಕೋಟಿ
- ಸಾಲ ಮರುಪಾವತಿ - 193 ಕೋಟಿ
- ಒಟ್ಟಾರೆ 3889 ಕೋಟಿ

ಮೂರು ಪಾಲಿಕೆಗಳ ಬಜೆಟ್ ಮಂಡನೆ ಇಂದು

• **ಬೆಂಗಳೂರು:** ಬಹು ನಿರೀಕ್ಷಿತ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಐದು ನಗರ ಪಾಲಿಕೆಗಳ ಬಜೆಟ್ ಮಂಡನೆ ನಡೆಯುತ್ತಿದ್ದು, ಶುಕ್ರವಾರ ಎರಡು ಪಾಲಿಕೆ ಬಜೆಟ್ ಮಂಡನೆಯಾಗಿದೆ. ಇನ್ನುಳಿದ ಮೂರು ಪಾಲಿಕೆ ಬಜೆಟ್ ಇಂದು ಮಂಡನೆಯಾಗಲಿದೆ. ಚುನಾವಣೆ ನಡೆಯದೆ ಜಿಬಿಎಗೆ ಜನಪ್ರತಿನಿಧಿಗಳು ಇಲ್ಲದ ಸತತ ಆರನೇ ಬಾರಿಗೆ ಅಧಿಕಾರಿಗಳೆ ಬಜೆಟ್ ಮಂಡನೆ ಮಂಡಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರು ಪೂರ್ವ ಪಾಲಿಕೆ ಬಜೆಟ್ ಮಂಡನೆಯಾಗಿದ್ದು, ಪೂರ್ವ ಪಾಲಿಕೆ ಆಯುಕ್ತ ರಮೇಶ್.ಡಿ.ಎಸ್. ಆಯವ್ಯಯವನ್ನು ಪ್ರಸ್ತುತ ಪಡಿಸಿದರೆ, ಕೇಂದ್ರ ಪಾಲಿಕೆ ಬಜೆಟ್‌ನ್ನು ಕೇಂದ್ರ ಪಾಲಿಕೆ ಹಣಕಾಸು ಉಪ ನಿಯಂತ್ರಕಿ ವಿಜಯಲಕ್ಷ್ಮಿ.ಕೆ.ಟಿ. ಮಂಡಿಸಿದ್ದಾರೆ. ಎರಡೂ ಪಾಲಿಕೆಯ ಬಜೆಟ್ ಮಂಡನೆಯ ಸಮಯದಲ್ಲಿ ಜಿಬಿಎ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಉಪಸ್ಥಿತರಿದ್ದರು. ಪೂರ್ವಪಾಲಿಕೆ ಬಜೆಟ್ ಸಂದರ್ಭದಲ್ಲಿ ಮಹದೇವಪುರದ ಶಾಸಕಿ ಮಂಜುಳಾ ಲಿಂಬಾವಳಿ, ವಿಧಾನಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಅಭಿವೃದ್ಧಿ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್, ಕಂದಾಯ ಅಪರ ಆಯುಕ್ತೆ ಪ್ರಜ್ಞಾ ಅಮ್ಮೆಂಬಳ, ಜಂಟಿ ಆಯುಕ್ತೆ ದಾಕ್ಷಾಯಿಣಿ, ಹಣಕಾಸು ಉಪ ನಿಯಂತ್ರಕ ಎ.ಜಿ. ಮಂಜುನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೇಂದ್ರ ಪಾಲಿಕೆ ಬಜೆಟ್ ಮಂಡನೆ ಸಂದರ್ಭದಲ್ಲಿ ಶಾಸಕ ಉದಯ ಗರುಡಾಚಾರ್, ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್, ಕಂದಾಯ ಅಪರ ಆಯುಕ್ತ ಕೆ. ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಶನಿವಾರ ಪಶ್ಚಿಮ, ಉತ್ತರ, ದಕ್ಷಿಣ ನಗರಪಾಲಿಕೆಗಳ ಬಜೆಟ್ ಮಂಡನೆಯಾಗಲಿದೆ.

OFFICIAL DAIRY PARTNER
ನಮ್ಮ ನಂದಿನಿ, ನಮ್ಮ ಆರ್‌ಸಿಬಿ
Follow Us On : kmfnandini.coop
www.kmfnandini.coop

2 ಪಾಲಿಕೆ ಬಜೆಟ್ ಮಂಡನೆ | ಮೂಲಸೌಕರ್ಯ, ಸಾರ್ವಜನಿಕ ಸೇವೆ, ಕಲ್ಯಾಣ ಕಾರ್ಯಕ್ರಮಗಳಿಗೆ ಆದ್ಯತೆ

ಕಸ, ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು

ಪಾಲಿಕೆ ಬಜೆಟ್ 2026-2027

• **ಬೆಂಗಳೂರು :** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚನೆಯಾಗಿ ಐದು ಪಾಲಿಕೆಗಳು ಅಸ್ತಿತ್ವಕ್ಕೆ ಬಂದ ನಂತರ, ಪಾಲಿಕೆಗಳು ತಮ್ಮ ಮೊದಲ ಬಜೆಟ್ ಮಂಡನೆ ಆರಂಭಿಸಿದ್ದು, ಶುಕ್ರವಾರ ಬೆಂಗಳೂರು ಪೂರ್ವ ನಗರ ಪಾಲಿಕೆ ಮತ್ತು ಬೆಂಗಳೂರು ಕೇಂದ್ರ ನಗರ ಪಾಲಿಕೆ 2026-2027ನೇ ಸಾಲಿನ ಆಯವ್ಯಯವನ್ನು ಪ್ರಸ್ತುತ ಪಡಿಸಿವೆ. ಮೂಲಸೌಕರ್ಯ ಮತ್ತು ಸಾರ್ವಜನಿಕ ಸೇವೆ, ಕಲ್ಯಾಣ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾದ ಎರಡು ಪಾಲಿಕೆ ಬಜೆಟ್‌ನಲ್ಲಿ ಕಸ ಮತ್ತು ಬೀದಿನಾಯಿಗಳ ನಿರ್ವಹಣೆಗೂ ಒತ್ತು ನೀಡಲಾಗಿದೆ.

ಕಾರ್ಯಕ್ಷಮತೆ ಆಧಾರಿತ ಹಂಚಿಕೆ ಮಾದರಿಯನ್ನು ಪರಿಚಯಿಸಿರುವ ಪ್ರಮುಖ ಐಟಿ ವಲಯ ಬರುವ ಪೂರ್ವ ನಗರ ಪಾಲಿಕೆ, 3,889.98 ಕೋಟಿ ಮೊತ್ತದ ಬಜೆಟ್ ಮಂಡನೆ ಮಾಡಿದ್ದು, 1.56 ಲಕ್ಷ ರೂ. ಉಳಿತಾಯ ಬಜೆಟ್ ಅನ್ನು ಪ್ರಸ್ತುತ ಪಡಿಸಿದೆ. ಬೆಂಗಳೂರು ಕೇಂದ್ರ, ನವ ನಿರ್ಮಾಣ ಎಂಬ ಉದ್ದೇಶದೊಂದಿಗೆ, ಮಾನವೀಯತೆಯ ನೆಲೆಗಟ್ಟಿಗೆ ಆಧುನಿಕತೆ ಸೇರ್ಪಡೆ ಮಾಡುವ ಮೂಲಕ 3,427 ಕೋಟಿ ಗಾತ್ರದ ಬಜೆಟ್ ಮಂಡನೆ ಮಾಡಿದೆ. 78.65 ಲಕ್ಷ ಮಿಗತೆ ಉಳಿಸುವ ಮೂಲಕ ಆರ್ಥಿಕ ಶಿಸ್ತಿಗೆ ಮುನ್ನುಡಿ ಬರೆದಿದೆ.

ಬೀದಿ ನಾಯಿಗಳ ನಿರ್ವಹಣೆಗೆ ಹೆಚ್ಚಿನ ಅನುದಾನ: ನಗರದ ಬೀದಿನಾಯಿಗಳ ನಿಯಂತ್ರಣಕ್ಕೆ ಮುಂದಾಗಿರುವ ಪೂರ್ವ ಮತ್ತು ಕೇಂದ್ರ ಪಾಲಿಕೆ ಹೆಚ್ಚಿನ ಅನುದಾನ ನೀಡಿವೆ. ಪೂರ್ವ ಪಾಲಿಕೆ ಬೀದಿ ನಾಯಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಗೆ 22 ಕೋಟಿ ರೂ. ಮೀಸಲಿಟ್ಟಿದೆ. ಅದರಲ್ಲಿ 500 ಬೀದಿನಾಯಿಗಳ ಸಾಮರ್ಥ್ಯವುಳ್ಳ ಆಶ್ರಯ ತಾಣ ಮತ್ತು ಆಹಾರಕ್ಕಾಗಿ 12 ಕೋಟಿ ರೂ., ಸಂತಾನ ಹರಣ ಚಿಕಿತ್ಸೆಗಳಿಗೆ ಎರಡು ಪ್ಯಾಕೇಜ್‌ಗಳಲ್ಲಿ 6 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಮಹದೇವಪುರದಲ್ಲಿ ವೈಜ್ಞಾನಿಕ ಬೀದಿನಾಯಿ ಸಂತಾನಹರಣ ಶಸ್ತ್ರಚಿಕಿತ್ಸಾ ಕೇಂದ್ರ ನಿರ್ಮಾಣಕ್ಕೆ 4 ಕೋಟಿ ರೂ.ನಿಗದಿಗೊಳಿಸಲಾಗಿದೆ. ಕೇಂದ್ರ ಪಾಲಿಕೆ ಬೀದಿ ನಾಯಿಗಳ ನಿರ್ವಹಣೆಗೆ ಸಂಬಂಧಿಸಿದಂತೆ 5.93 ಕೋಟಿ ರೂ. ಮೀಸಲಿಟ್ಟಿದೆ. ಅದರಲ್ಲಿ ವಿಶೇಷ ಸಂರಕ್ಷಣಾ ಕೇಂದ್ರ ಸ್ಥಾಪನೆಗೆ 2 ಕೋಟಿ ರೂ., ಬಡ ಕುಟುಂಬಗಳ ಸಾಕು ಪ್ರಾಣಿ ಮತ್ತು ಸಮುದಾಯ ನಾಯಿಗಳಿಗೆ ಉಚಿತ ಹಾಗೂ ತ್ವರಿತ ಚಿಕಿತ್ಸೆ ನೀಡಲು ಹೊಸ ಪಶು ಚಿಕಿತ್ಸಾಲಯ ನಿರ್ಮಾಣಕ್ಕೆ 50 ಲಕ್ಷ ರೂ., ಸಂತಾನ ಹರಣ ಚಿಕಿತ್ಸೆಗೆ 80.94 ಲಕ್ಷ ರೂ. ದಂಡು ಕೇಂದ್ರದ ಎಬಿಸಿ ಕೇಂದ್ರ ದುರಸ್ತಿಗೆ 60 ಲಕ್ಷ ರೂ., 30,432 ಬೀದಿನಾಯಿಗಳಿಗೆ ಮೈಕ್ರೋಚಿಪ್ ಅಳವಡಿಸಲು 58.50 ಲಕ್ಷ ರೂ. ನೀಡಲಾಗಿದೆ.

ಮೂಲಸೌಕರ್ಯಕ್ಕೆ ಒತ್ತು

- ರಸ್ತೆ, ಟನಲ್, ಫ್ಲೈಓವರ್ ಅಭಿವೃದ್ಧಿಗೆ 450 ಕೋಟಿ ರೂ.
- ಸ್ಕೈವಾಕ್, ಸ್ನೇಹಮಯಿ ಪಾದಚಾರಿ ನಿರ್ಮಾಣಕ್ಕೆ 50 ಕೋಟಿ
- 100 ಕಿಮೀ ಪಾದಚಾರಿ ಮಾರ್ಗ ನಿರ್ಮಾಣ
- ಭೂಸ್ವಾಧೀನಕ್ಕೆ 70 ಕೋಟಿ ಮೀಸಲು
- ಚನ್ನಸಂದ್ರ, ಬೆಳಿಕಿವಾಲಯ, ಕೊತ್ತನೂರು, ಸೀತಾರಾಂಪಾಳ್ಯ, ಕುರುಡುಸೊಣ್ಣೆನಹಳ್ಳಿ, ಸೀಗೇಹಳ್ಳಿ, ಕಾಡುಗೋಡಿ ಮತ್ತು ಹಲ್ಲೂರುಹಳ್ಳಿ ಪ್ರಮುಖ ರಸ್ತೆಗಳ ಅಗಲೀಕರಣಕ್ಕಾಗಿ ರೂ.40 ಕೋಟಿ ಮೀಸಲಾಗಿದೆ.
- ಕೊನೆ ಮೈಲಿ ಸಂಪರ್ಕ ಯೋಜನೆಗೆ ಆದ್ಯತೆ
- ಮುನ್ಸಿಪಲ್ ಬಾಂಡ್ ಮೂಲಕ 200 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಅಭಿವೃದ್ಧಿ
- ಎಲ್‌ಇಡಿ ಬೀದಿ ದೀಪ ಅಳವಡಿಕೆಗೆ 38 ಕೋಟಿ, ನಿರ್ವಹಣೆಗೆ 17 ಕೋಟಿ
- ವಿದ್ಯುತ್ ಚಿತಾಗಾರ ನಿರ್ಮಿಸಲು 5 ಕೋಟಿ
- 20 ಪ್ರವಾಹ ಪೀಡಿತ ಪ್ರದೇಶ ಅಭಿವೃದ್ಧಿಗೆ ಕ್ರಮ
- ವಿಶ್ವಬ್ಯಾಂಕ್ ಅನುದಾನದಲ್ಲಿ ಮಹದೇವಪುರಕ್ಕೆ 540 ಕೋಟಿ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರಕ್ಕೆ 89 ಕೋಟಿ ಹಂಚಿಕೆ

ಕಸ ಮುಕ್ತಿಗೆ ಹಣಕಾಸಿನ ಬಲ

ನಗರದ ಘನ ತ್ಯಾಜ್ಯ ನಿರ್ವಹಣೆ ಸವಾಲಿನ ಕೆಲಸವಾಗಿದೆ. ಅದನ್ನು ಸಮರ್ಪಕವಾಗಿ ನಿರ್ವಹಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ(ಬಿಎಸ್‌ಡಬ್ಲ್ಯೂಎಂಎಲ್)ಕ್ಕೆ ಪೂರ್ವ ಮತ್ತು ಕೇಂದ್ರ ಪಾಲಿಕೆ ಹೆಚ್ಚಿನ ಅನುದಾನ ನೀಡಿವೆ. ಕೇಂದ್ರ ಪಾಲಿಕೆ 215 ಕೋಟಿ ರೂ. ಮತ್ತು ಪೂರ್ವ ಪಾಲಿಕೆ 300 ಕೋಟಿ ರೂ. ಅನುದಾನ ನೀಡಿದ್ದು, ಎರಡು ಪಾಲಿಕೆಯಿಂದ ಒಟ್ಟಾರೆ 515 ಕೋಟಿ ರೂ. ಘನ ತ್ಯಾಜ್ಯ ನಿರ್ವಹಣೆಗೆ ಅನುದಾನ ಲಭಿಸಿದೆ. ಕಸ ಸಂಗ್ರಹಣೆ,ಕಸ ವಿಲೇವಾರಿ, ಭೂ ಭರ್ತಿ ಪ್ರದೇಶ ಅಭಿವೃದ್ಧಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಈ ಅನುದಾನ ಬಳಕೆಯಾಗಲಿದೆ. ಅಲ್ಲದೆ ಪೂರ್ವ ಪಾಲಿಕೆಯಲ್ಲಿ ಪೌರ ಕಾರ್ಮಿಕರಿಗೆ ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಲು 1.50 ಕೋಟಿ ರೂ., ಪೌರ ಕಾರ್ಮಿಕರ ವಿಶ್ರಾಂತಿ ಮಸ್ಟರಿಂಗ್ ಸೆಂಟರ್‌ಗಳಲ್ಲಿ ಸುವಿಧಾ ಕೇಂದ್ರ ತೆರೆಯಲು 2 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

- 63 ವಾರ್ಡ್‌ಗಳಿರುವ ಕೇಂದ್ರ ಪಾಲಿಕೆಯು ಪ್ರತಿ ವಾರ್ಡ್‌ಗೆ ತಲಾ 2.25 ಕೋಟಿಯಂತೆ ಒಟ್ಟು 141.75 ಕೋಟಿ ಮೀಸಲಿಡಲಾಗಿದೆ
- 50 ವಾರ್ಡ್ ಇರುವ ಪೂರ್ವ ಪಾಲಿಕೆಯು ಪ್ರತಿ ವಾರ್ಡ್‌ಗೆ 2.25 ಕೋಟಿಯಂತೆ 112.50 ಕೋಟಿ ರೂ.ಮೀಸಲಿಡಲಾಗಿದೆ.

> ಹಂಚಿಕೆ ಮಾಡಲಾದ ಅನುದಾನ ಸಮರ್ಪಕವಾಗಿ ವಿನಿಯೋಗಿಸಿ, ಕಾಮಗಾರಿಗಳು ಉತ್ತಮ ಗುಣಮಟ್ಟದಲ್ಲಿ ನಡೆದಲ್ಲಿ ಬಜೆಟ್‌ನಲ್ಲಿಟ್ಟ ಅನುದಾನಕ್ಕೆ ಅರ್ಥ ಬಂದಂತಾಗುತ್ತದೆ.
> ■ **ಮಂಜುಳಾ ಲಿಂಬಾವಳಿ,** ಮಹದೇವಪುರ ಶಾಸಕಿ

> ಅಭಿವೃದ್ಧಿ ಕೆಲಸಗಳಿಗೆ ಹಣಕಾಸಿನ ಕೊರತೆಯಾಗದಂತೆ ಪಾಲಿಕೆಗಳು ತಮ್ಮ ಆದಾಯದ ಮೂಲವನ್ನು ವಿಸ್ತರಿಸಲು ಮುಂದಾಗಿದ್ದು, ನಗರದ ಅಭಿವೃದ್ಧಿಗೆ ಪೂರಕ ಬಜೆಟ್ ಮಂಡನೆ ಮಾಡಲಾಗುತ್ತಿದೆ.
> ■ **ಮಹೇಶ್ವರ್ ರಾವ್,** ಜಿಬಿಎ ಮುಖ್ಯ ಆಯುಕ್ತ

ಬೆಂಗಳೂರು ಪೂರ್ವ ನಗರ ಪಾಲಿಕೆ ಬಜೆಟ್ ಹೈಲೈಟ್ಸ್

- ಬಜೆಟ್ ಗಾತ್ರದ ಶೇ.7ರಷ್ಟು ಕಲ್ಯಾಣ ಕಾರ್ಯಕ್ರಮಕ್ಕೆ ಮೀಸಲು
- ಎಸ್ಸಿ ಎಸ್ಟಿ ಹಿಂದುಳಿದ ವರ್ಗ, ಪೌರ ಕಾರ್ಮಿಕರು, ಅಲ್ಪಸಂಖ್ಯಾತರು, ಮಹಿಳೆಯರು, ಹಿರಿಯ ನಾಗರಿಕರ
- ಒಂಟಿ ಮನೆ ನಿರ್ಮಾಣ ಮತ್ತು ವಸತಿ ಯೋಜನೆಯಡಿ 1 ಬಿಎಚ್‌ಕೆ ಮನೆ ಖರೀದಿಗೆ 5 ಲಕ್ಷ ರೂ.ಸಹಾಯಧನ
- ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ, ವಿದೇಶಿ ವಿದ್ಯಾಭ್ಯಾಸ ಪ್ರೋತ್ಸಾಹ
- ಪರಿಶಿಷ್ಟ ಜಾತಿ ಪಂಗಡ,ಹಿಂದುಳಿದ ವರ್ಗದ ಫಲಾನುಭವಿಗಳು ಗಂಭೀರ ಕಾಯಿಲೆಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿ
- ಪರಿಶಿಷ್ಟ ಜಾತಿ ಪಂಗಡ,ಹಿಂದುಳಿದ ವರ್ಗದ ಮಕ್ಕಳಿಗೆ ಉಚಿತ ಲ್ಯಾಪ್‌ಟ್ಯಾಪ್ ವಿತರಣೆ
- ಪೌರ ಕಾರ್ಮಿಕರು ಮಹಿಳೆಯರಿಗೆ ವಿಶೇಷ ಯೋಜನೆ
- 1605 ಪೌರ ಕಾರ್ಮಿಕರಿಗೆ ಆರೋಗ್ಯ ಯೋಜನೆ
- ಉದ್ಯೋಗಸ್ಥ ಮಹಿಳೆಯರಿಗೆ ಉಚಿತ ಇ-ಸ್ಕೂಟರ್
- ಉಚಿತ ಹೊಲಿಗೆ ತರಬೇತಿ ಯಂತ್ರ ವಿತರಣೆ
- ವಿಶೇಷ ಚೇತನ ಬೀದಿ ವ್ಯಾಪಾರಿಗಳಿಗೆ ನೆರವು
- ಎಲೆಕ್ಟ್ರಿಕ್ ವೀಲ್‌ಚೇರ್, ವಿಶೇಷ ದ್ವಿಚಕ್ರ ವಾಹನ
- ಬೀದಿ ವ್ಯಾಪಾರಿಗಳಿಗೆ ಇ-ವೆಂಡಿಂಗ್ ವಾಹನ
- 6 ನಿರಾಶ್ರಿತ ಕೇಂದ್ರ ಉನ್ನತೀಕರಣ, 2 ಹೊಸ ನಿರಾಶ್ರಿತ ಕೇಂದ್ರ ಸ್ಥಾಪನೆ
- ಸಾರಥಿ ಯೋಜನೆಯಡಿ ಆಟೋರಿಕ್ಷಾ ಖರೀದಿಗೆ 80 ಸಾವಿರ, ಕಾರು ಖರೀದಿಸಲು 1.50 ಲಕ್ಷ ಸಹಾಯಧನ

ಡಿಜಿಟಲ್ ಆಡಳಿತಕ್ಕೆ ಒತ್ತು

- 4.5 ಲಕ್ಷ ಖಾತೆಗಳ ಡಿಜಿಟಲೀಕರಣ
- ಇ-ಖಾತಾ, ಜಿಯೋ ಟ್ಯಾಗಿಂಗ್, ಬ್ಲಾಕ್‌ಚೈನ್ ಬಳಕೆ
- ಆನ್‌ಲೈನ್ ಕಟ್ಟಡ ಅನುಮತಿ ವ್ಯವಸ್ಥೆ
- ಎಐ ಆಧಾರಿತ ಸಿಬ್ಬಂದಿ ಹಾಜರಾತಿ

ಪರಿಸರಕ್ಕೆ ಪೂರಕ ಯೋಜನೆ

- ಕೆರೆಗಳ ನಿರ್ವಹಣೆಗೆ 28 ಕೋಟಿ
- 10 ಕೆರೆಗಳಿಗೆ ತಂತಿಬೇಲಿ ನಿರ್ಮಾಣಕ್ಕೆ 5 ಕೋಟಿ ರೂ.
- 25 ಕೋಟಿ ವೆಚ್ಚದಲ್ಲಿ 4 ಕೆರೆಗಳ ಸಮಗ್ರ ಅಭಿವೃದ್ಧಿ
- ಕೆರೆಗಳ ಸಂರಕ್ಷಣೆಗೆ ಗೃಹ ರಕ್ಷಕ ದಳ ನಿಯೋಜನೆ
- ಆಸಕ್ತಿ ಇರುವ ನಾಗರಿಕರು ಮತ್ತು ಸಂಸ್ಥೆ ಸಹಯೋಗದಲ್ಲಿ ಕೆರೆ ಅಭಿವೃದ್ಧಿ
- ಉದ್ಯಾನವನ ನಿರ್ವಹಣೆ ಹಾಗೂ 35 ಇಂಗುಗುಂಡಿ ನಿರ್ಮಾಣಕ್ಕೆ 10 ಕೋಟಿ
- ಉದ್ಯಾನವನಗಳಿಗೆ ತಂತಿ ಬೇಲಿ ನಿರ್ಮಾಣಕ್ಕೆ 7.50 ಕೋಟಿ
- ಕೆರೆ ಉದ್ಯಾನವನ ಅಭಿವೃದ್ಧಿಗೆ 17.50 ಕೋಟಿ
- ಉದ್ಯಾನವನದಲ್ಲಿ ನರ್ಸರಿ ಕೇಂದ್ರ ಸ್ಥಾಪನೆಗೆ 10 ಕೋಟಿ
- ನಗರದ ಅರಣ್ಯೀಕರಣಕ್ಕೆ 3.50 ಕೋಟಿ ಅನುದಾನ
- ಮಿಯಾವಾಕಿ ಟ್ರೀಪಾರ್ಕ್ ನಿರ್ಮಾಣ ಮಾಡಲು ಕ್ರಮ
- ಬಿ.ಎಂ.ಆರ್.ಸಿ.ಎಲ್ ಮತ್ತು ಕೆ-ರೈಡ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಂದಾಜು 25,000 ವೈವಿಧ್ಯಮಯ ಸಸಿಗಳನ್ನು ನೆಡಲಾಗುವುದು
- ಹವಾಮಾನ ಕ್ರಿಯಾ ಯೋಜನೆಗೆ 20 ಕೋಟಿ ಮೀಸಲು

ಬಜೆಟ್‌ನಲ್ಲಿ ಹೊಸ ಯೋಜನೆಗಳ ಘೋಷಣೆ

ಹೆಜ್ಜೆ ಹೆಜ್ಜೆಗೆ ಸುರಕ್ಷೆ, ಹಿರಿಯರ ವಾಡಿಗೆ ಆದ್ಯತೆ

• **ಬೆಂಗಳೂರು:** ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯವ್ಯಯದಲ್ಲಿ ಹೆಜ್ಜೆ ಹೆಜ್ಜೆಗೆ ಸುರಕ್ಷೆ, ಹಿರಿಯರ ವಾಡಿ, ಸ್ಮಾರ್ಟ್ ವರ್ಚುವಲ್ ಕ್ಲಿನಿಕ್ ಮುಂತಾದ ಹೊಸ ಯೋಜನೆ ಘೋಷಿಸಲಾಗಿದೆ.

ಜಿಬಿಎ ಅಡಿ ಬರುವ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಬಜೆಟ್‌ನಲ್ಲಿ ಹಳೇ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡುವುದರೊಂದಿಗೆ ಹೊಸ ಯೋಜನೆ ಘೋಷಿಸಲಾಗಿದೆ. ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಜ್ಞರಿಂದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

ಹೆಜ್ಜೆ ಹೆಜ್ಜೆಗೆ ಸುರಕ್ಷೆ ಯೋಜನೆಗೆ 50 ಕೋಟಿ ರೂ.: ಪಾದಚಾರಿಗಳ ಹಿತಕ್ಕಾಗಿ ಹೆಜ್ಜೆ ಹೆಜ್ಜೆಗೆ ಸುರಕ್ಷೆ ಎಂಬ ಯೋಜನೆಯಡಿ 50 ಕಿ.ಮೀ. ಪಾದಚಾರಿ ಮಾರ್ಗಗಳ ಸುಧಾರಣೆ ಮತ್ತು 15 ಕಿ.ಮೀ. ಹೊಸ ಪಾದಚಾರಿ ಮಾರ್ಗಗಳ ನಿರ್ಮಾಣದ ಗುರಿ ಹೊಂದಲಾಗಿದ್ದು, ಇವು ವೃದ್ಧರು ಮತ್ತು ದಿವ್ಯಾಂಗ ಸ್ನೇಹಿಯಾಗಿ ಮಳೆ ನೀರು ಹೀರುವ ಆಧುನಿಕ ವಿನ್ಯಾಸದೊಂದಿಗೆ ರೂಪುಗೊಳ್ಳಲಿವೆ. ಹೈ-ರೈಸ್ ಕ್ರಾಸಿಂಗ್‌ಗಳನ್ನು ಅಳವಡಿಸಿ ಅಪಘಾತ ಮುಕ್ತ ಸಂಚಾರಕ್ಕೆ ಒತ್ತು ನೀಡಲು 50 ಕೋಟಿ ರೂ. ಮೀಸಲಿರಿಸಲಾಗಿದೆ.

ಕಿರು ಮಳಿಗೆ ಶುದ್ಧ ಆಹಾರ: ಆಹಾರ ಪ್ರೇಮಿಗಳ ಆರೋಗ್ಯ ರಕ್ಷಣೆಗಾಗಿ ಕಿರುಮಳಿಗೆ ಶುದ್ಧ ಆಹಾರ ಎಂಬ ಪೈಲಟ್ ಯೋಜನೆಯನ್ನು 25 ಲಕ್ಷ ರೂ.ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದ್ದು, ಬೀದಿ ಬೀದಿ ವ್ಯಾಪಾರಿಗಳಿಗೆ ಎಫ್‌ಎಸ್‌ಎಸ್‌ಎಐ ತರಬೇತಿ ಹಾಗೂ ಪ್ರಮಾಣಪತ್ರ ನೀಡಲು ಉದ್ದೇಶವಾಗಿದೆ.

ನಗರ ವಿನ್ಯಾಸ ಕೋಶ: ಪಾಲಿಕೆ ವ್ಯಾಪ್ತಿಗೆ ಬರುವ ರಸ್ತೆ, ಸಾರ್ವಜನಿಕ ಸ್ಥಳ ಮತ್ತು ಸಂಚಾರ ವ್ಯವಸ್ಥೆ ಉನ್ನತೀಕರಿಸಲು ಪ್ರತ್ಯೇಕವಾಗಿ ನಗರ ಸಾರಿಗೆ ಯೋಜನೆ ತಜ್ಞ, ನಗರ ವಿನ್ಯಾಸಕರು ಮತ್ತು ನಗರ ಯೋಜಕರನ್ನು ಒಳಗೊಂಡಂತೆ ನಗರ ವಿನ್ಯಾಸ ಕೋಶ ಸೃಜಿಸಲಾಗಿದೆ.

ವಿಶಿಷ್ಟಚೇತನ ಮಕ್ಕಳ ಬೆಳವಣಿಗೆಗೆ ವಾತ್ಸಲ್ಯ ಮನೆ: ವೊಬ್ಬತ್ತಿ ಆಸ್ಪತ್ರೆಯಲ್ಲಿ ವಿಶಿಷ್ಟಚೇತನ ಮಕ್ಕಳ ಸಮಗ್ರ ಬೆಳವಣಿಗೆ ಹಾಗೂ ಪುನರ್ವಸತಿಗಾಗಿ ವಾತ್ಸಲ್ಯ ಮನೆ ಎಂಬ ದಿನದ ಆರೈಕೆ ಕೇಂದ್ರ ಆರಂಭಿಸಲಾಗುವುದು ಎಂದು ಘೋಷಿಸಲಾಗಿದೆ.

ಸ್ಮಾರ್ಟ್ ವರ್ಚುವಲ್ ಕ್ಲಿನಿಕ್

ಆರೋಗ್ಯ ಮಿತ್ರ ಯೋಜನೆಯಡಿ 22 ಸ್ಥಳಗಳಲ್ಲಿ ಸ್ಮಾರ್ಟ್ ವರ್ಚುವಲ್ ಕ್ಲಿನಿಕ್ ಸ್ಥಾಪಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದ್ದು, ಇದರಲ್ಲಿ ಉಪಕರಣಗಳ ಪೂರೈಕೆಗೆ 8.90 ಕೋಟಿ ರೂ. 2 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ 5.07 ಕೋಟಿ ರೂ. ಹಾಗೂ ಕೇಂದ್ರಿತ ಮೇಲ್ವಿಚಾರಣೆಗಾಗಿ 15 ಕ್ಯಾಬಿನ್‌ಗಳ ಕಮಾಂಡ್ ಸೆಂಟರ್ ನಿರ್ಮಾಣಕ್ಕೆ 5.03 ಕೋಟಿ ರೂ. ವೆಚ್ಚವಾಗಲಿದ್ದು, 19 ಕೋಟಿ ರೂ. ಮೀಸಲಿರಿಸಿದೆ.

ಹಿರಿಯ ನಾಗರಿಕರಿಗೆ ವಸತಿ ಸಮುಚ್ಚಯಕ್ಕಾಗಿ ಹಿರಿಯರ ವಾಡಿ

ಆಸರೆ ಇಲ್ಲದ ಹಿರಿಯ ನಾಗರಿಕರಿಗೆ ಸ್ವಯಂ ಸೇವಾ ಸಂಸ್ಥೆ ಹಾಗೂ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ ಸಹಯೋಗದೊಂದಿಗೆ ಉಚಿತ ಹಾಗೂ ಸುಸಜ್ಜಿತ ವಸತಿ ಸಮುಚ್ಚಯ ನಿರ್ಮಿಸುವ ಹಿರಿಯರ ವಾಡಿ ಎಂಬ ಹೊಸ ಯೋಜನೆ ರೂಪಿಸಲಾಗಿದೆ.

ಬೈಕ್ ಆಂಬುಲೆನ್ಸ್

ಜೀವ ಉಳಿಸುವ ಸುವರ್ಣ ಘಳಿಗೆಯ ಮಹತ್ವವನ್ನು ಅರಿತು, ಬೆಂಗಳೂರಿನ ಸಂಚಾರ ದಟ್ಟಣೆಯ ನಡುವೆಯೂ ತುರ್ತು ವೈದ್ಯಕೀಯ ನೆರವು ನೀಡಲು ಬೈಕ್ ಆಂಬುಲೆನ್ಸ್-ಪ್ರಥಮ ಸ್ಪಂದನಾ ಘಟಕ ಎನ್ನುವ ಸೇವೆಯನ್ನು ಜಾರಿಗೆ ತರಲಾಗುವುದು.

ಮೈಕ್ರೋಚಿಪ್ ಮೂಲಕ ಲಸಿಕೆ

ಬೀದಿನಾಯಿಗಳ ಸಂಖ್ಯೆ ನಿಯಂತ್ರಿಸಲು 1.44 ಕೋಟಿಗಳ ವೆಚ್ಚದಲ್ಲಿ ನಿರಂತರ ಸಂತಾನಹರಣ ಶಸ್ತ್ರಚಿಕಿತ್ಸೆ ಹಾಗೂ ರೋಗ ನಿಯಂತ್ರಣಕ್ಕಾಗಿ 80.94 ಲಕ್ಷ ವೆಚ್ಚದಲ್ಲಿ ಸಾಮೂಹಿಕ ಲಸಿಕೆ ನೀಡಲಾಗುವುದು. ದಂಡು ಪ್ರದೇಶದ ಎಬಿಸಿ ಕೇಂದ್ರದ ದುರಸ್ತಿಗೆ 60 ಲಕ್ಷ ರೂ. ಮೀಸಲಿಡಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ 15,216 ಬೀದಿನಾಯಿಗಳಿಗೆ ಮಾರಕ ರೋಗಗಳ ವಿರುದ್ಧ ಸಂಯುಕ್ತ ಲಸಿಕೆ ನೀಡುವ ಯೋಜನೆ ರೂಪಿಸಲಾಗಿದೆ. ಅಲ್ಲದೆ, 30,432 ನಾಯಿಗಳಿಗೆ 58.50 ಲಕ್ಷ ವೆಚ್ಚದಲ್ಲಿ ಮೈಕ್ರೊಚಿಪ್ ಅಳವಡಿಸುವ ಮೂಲಕ ಅವುಗಳ ವಾಸಸ್ಥಳ ಮತ್ತು ಲಸಿಕೆ ಡಿಜಿಟಲೀಕರಣಗೊಳಿಸಲಾಗುವುದು.

ವಿದ್ಯಾರ್ಥಿಗಳಿಗೆ ಪೈಲಟ್ ಯೋಜನೆ

ಪಾಲಿಕೆಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಹೈಬ್ರಿಡ್ ಮಾದರಿಯಲ್ಲಿ ದೈಹಿಕ ಶಿಕ್ಷಣ, ಯೋಗ ಮತ್ತು ಮನೋವಿಕಾಸ ಕಾರ್ಯಕ್ರಮದ ಪೈಲಟ್ ಯೋಜನೆಯನ್ನು ತರಲಾಗುವುದು. ಈ ಯೋಜನೆಯಡಿ ಪ್ರಮಾಣಿತ ಶಿಕ್ಷಕರಿಂದ ವಾರಕ್ಕೊಮ್ಮೆ ದೈಹಿಕ ಶಿಕ್ಷಣ, ಯೋಗ, ಪ್ರಾಣಾಯಾಮ, ಧ್ಯಾನ ಹಾಗೂ ಇತರ ತರಗತಿಗಳನ್ನು ನಡೆಸಿ, ಪರೀಕ್ಷಾ ಒತ್ತಡ ನಿರ್ವಹಣೆ ಹಾಗೂ ಏಕಾಗ್ರತೆ ಹೆಚ್ಚಳಕ್ಕೆ ಒತ್ತು ನೀಡಲಾಗುವುದು. ಸಕ್ರಿಯವಾಗಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಪಾಲಿಕೆಯಿಂದ ಅಧಿಕೃತ ಪ್ರಮಾಣಪತ್ರ ನೀಡಲಾಗುವುದು ಎಂದು ಘೋಷಿಸಿದೆ.

ಆರೋಗ್ಯ ಭಾಗ್ಯ

- 15 ಪ್ರಾಥಮಿಕ ಆರೋಗ್ಯ ಕೇಂದ್ರ, 10 ನಮ್ಮ ಕ್ಲಿನಿಕ್ ಪ್ರಾಂಭಿಸಿ, ನಿರ್ವಹಿಸಲು 35 ಕೋಟಿ
- ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಸ್ತರಣೆಗೆ 6.8 ಕೋಟಿ
- ಇಂದಿರಾ ಕ್ಯಾಂಟೀನ್ ನಿರ್ವಹಣೆಗೆ 5 ಕೋಟಿ

ಇತರೆ ಘೋಷಣೆ

- ಪಾಲಿಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ 25 ಕೋಟಿ
- ಕಾನೂನು ಕೋಶಕ್ಕೆ 4.50 ಕೋಟಿ
- ಪ್ರತ್ಯೇಕ ನಗರ ವಿನ್ಯಾಸ ಕೋಶ ಸ್ಥಾಪಿಸಲು 50 ಲಕ್ಷ

> ಪೂರ್ವ ನಗರ ಪಾಲಿಕೆ ವೇಗವಾಗಿ ಬೆಳೆಯುತ್ತಿರುವ ಹಿನ್ನೆಲೆ ರಸ್ತೆ ಸಂಪರ್ಕ, ಮೂಲಸೌಕರ್ಯ ಹಾಗೂ ಕೆರೆ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಮೀಸಲಿರಿಸಲಾಗಿದೆ.
> ■ **ರಮೇಶ್ ಡಿ.ಎಸ್,** ಪೂರ್ವ ಪಾಲಿಕೆ ಆಯುಕ್ತ

> ಸಿಲಿಕಾನ್ ಸಿಟಿಯ ಸಮಗ್ರ ಅಭಿವೃದ್ಧಿ ಹಾಗೂ ನಾಗರೀಕರಿಗೆ ಉತ್ತಮ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಪಾಲಿಕೆ ಮಹತ್ವಾಕಾಂಕ್ಷಿ ಬಜೆಟ್ ಮಂಡಿಸಿದೆ.
> ■ **ಪಿ.ರಾಜೇಂದ್ರ ಚೋಳನ್,** ಕೇಂದ್ರ ಪಾಲಿಕೆ ಆಯುಕ್ತ

> ಮೊದಲ ಬಾರಿಗೆ ಮಂಡನೆಯಾದ ಬೆಂಗಳೂರು ಪೂರ್ವ ನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್‌ನಲ್ಲಿ ಅಭಿವೃದ್ಧಿ, ಆದಾಯ ಸಂಗ್ರಹ, ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ.
> ■ **ಡಿ.ಕೆ.ಶಿವಕುಮಾರ್,** ಡಿಸಿಎಂ

> ಪೂರ್ವ ನಗರ ಪಾಲಿಕೆ ಬಜೆಟ್‌ನಲ್ಲಿ ಐತಿಹಾಸಿಕ ಕೃಷ್ಣರಾಜಪುರ ಸಂತೆ ಮಾರುಕಟ್ಟೆ ಅಭಿವೃದ್ಧಿಗೆ ವಿಶೇಷ ಅನುದಾನ ನೀಡದಿರುವುದು ವಿಷಾದನೀಯ. ಮುಂದಿನ ದಿನಗಳಲ್ಲಿ ಈ ಬಗ್ಗೆ ಗಮನ ಹರಿಸಬೇಕು.
> ■ **ಡಿ.ಟಿ. ಶ್ರೀನಿವಾಸ್,** ವಿಧಾನಪರಿಷತ್ ಸದಸ್ಯ

> ಅರ್ಥಪೂರ್ಣ ನಾಗರಿಕರ ಭಾಗವಹಿಸುವಿಕೆ ಇಲ್ಲದೆ ರೂಪಿಸಿದ ನಗರದ ಬಜೆಟ್ ನಿಜವಾದ ಅಗತ್ಯಗಳನ್ನು ಪ್ರತಿಬಿಂಬಿಸಲು ಸಾಧ್ಯವಿಲ್ಲ. ಸೀಮಿತ ಮತ್ತು ರೂಪಕಾತ್ಮಕ ಸಮಾಲೋಚನೆಗಳೊಂದಿಗೆ ಸಿದ್ಧವಾದ ಈ ಬಜೆಟ್, ಬೆಂಗಳೂರಿನ ಜನರ ದೈನಂದಿನ ವಾಸ್ತವತೆಗಳಿಂದ ದೂರವಾಗಿದೆ.
> ■ **ಶ್ರೀಕಾಂತ್ ನರಸಿಂಹನ್,** ಬಿಎನ್‌ಪಿ ಸ್ಥಾಪಕ

> ನಿರೀಕ್ಷೆಯಂತೆ ರಸ್ತೆ, ಮೇಲ್ಸೇತುವೆ, ಕೆರೆಗಳ ಅಭಿವೃದ್ಧಿ, ಪರಿಸರ ಸಂರಕ್ಷಣೆಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ವಲಯಗಳಿಗೆ ಘೋಷಣೆಯಾಗಿರುವ ಅನುದಾನ ಅಭಿವೃದ್ಧಿಗೆ ಸಮರ್ಪಕವಾಗಿ ಬಳಕೆಯಾಗಬೇಕು.
> ■ **ಬಾಲಕೃಷ್ಣ,** ಗುಂಜೂರು ವಾರ್ಡ್ ಬಿಜೆಪಿ ಮುಖಂಡ

> ಬೀದಿನಾಯಿಗಳಿಗಿಂತ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚು ಅನುದಾನದ ಅಗತ್ಯವಿತ್ತು. ಸಂಚಾರ ದಟ್ಟಣೆ ನಿಯಂತ್ರಣ ಸೇರಿ ಸ್ಥಳೀಯ ಸಮಸ್ಯೆ ಕಡೆಗಣಿಸಲಾಗಿದೆ. ಬಜೆಟ್ ರಾಜಕೀಯ ಪ್ರೇರಿತವಾಗಿದೆ.
> ■ **ವಿಜಯ ರೆಡ್ಡಿ,** ನಾಗರಿಕ, ಮಹದೇವಪುರ ವಲಯ

ಸಂಪಾದಕೀಯ

ಹೊಣೆಗೇಡಿ ವರ್ತನೆ ಸಲ್ಲದು

ಕೊಲ್ಲಿಯಲ್ಲಿ ಈಗ ನಡೆಯುತ್ತಿರುವುದು ಭಾರತ ಸಾರಿದ ಯುದ್ಧವಲ್ಲ, ಭಾರತವು ಅದರಲ್ಲಿ ಪಾಲ್ಗೊಂಡೂ ಇಲ್ಲ, ಯುದ್ಧನಿರತ ರಾಷ್ಟ್ರಗಳಿಂದ ಸಮಾನ ಅಂತರ ಕಾಯ್ದುಕೊಂಡು ದೇಶದ ಹಿತಾಸಕ್ತಿಯನ್ನಷ್ಟೆ ಗಮನದಲ್ಲಿಟ್ಟುಕೊಂಡು ಭಾರತ ಸರಕಾರವು ವ್ಯವಹರಿಸುತ್ತಿದೆ. ಕೊಲ್ಲಿ ಯುದ್ಧವು ಭಾರತವನ್ನಷ್ಟೇ ಅಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳನ್ನೂ ಬಾಧಿಸುತ್ತಿದೆ. ಅದಕ್ಕೆ ಕಾರಣ ಪೆಟ್ರೋಲಿಯಂ ತೈಲ ಪೂರೈಕೆಯ ಕೇಂದ್ರದಲ್ಲೇ ಯುದ್ಧ ನಡೆಯುತ್ತಿರುವುದು. ತೈಲ ಪೂರೈಕೆಯನ್ನು ನಿರಂತರವಾಗಿಡಲು ಭಾರತವು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಕೇವಲ ಒಂದು ರಾಷ್ಟ್ರವನ್ನಷ್ಟೇ ಅವಲಂಬಿಸದೆ ಸುಮಾರು 40 ದೇಶಗಳಿಂದ ತನಗೆ ಬೇಕಾದಂತಹ ತೈಲ ಮತ್ತು ಎಲ್‌ಪಿಜಿ ಪಡೆಯುತ್ತಿರುವುದರಿಂದ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬಿಕ್ಕಟ್ಟು ಇನ್ನೂ ನಿಯಂತ್ರಣದ ಹಂತದಲ್ಲೇ ಇದೆ. ಇಂತಹ ಸಂದರ್ಭದಲ್ಲಿ ಸರಕಾರದ ಪ್ರಯತ್ನಗಳಿಗೆ ಬೆಂಬಲ ನೀಡುವುದು, ಸಹಕಾರ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಎಲ್ಲಾ ರಾಜಕೀಯ ಪಕ್ಷಗಳೂ ಈ ಸಂದರ್ಭದಲ್ಲಿ ಸರಕಾರದೊಂದಿಗೆ ಸಹಕರಿಸಬೇಕಾದುದು, ದೇಶದಲ್ಲಿ ಪರಿಸ್ಥಿತಿ ಹದಗೆಡದಂತೆ ಹೊಣೆಗಾರಿಕೆಯಿಂದ ವರ್ತಿಸಬೇಕಾದುದು ಕರ್ತವ್ಯ.

ದುರಂತವೆಂದರೆ, ಬಹುತೇಕ ವಿರೋಧ ಪಕ್ಷಗಳು ಜನರಲ್ಲಿ ಅನವಶ್ಯ ಭಯಭೀತಿ ಸೃಷ್ಟಿಸುತ್ತಾ ಅರಾಜಕತೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿವೆ. ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಕುರಿತಂತೆ ಸುಳ್ಳು ಸುದ್ದಿ ಹರಡುತ್ತಿವೆ. ಲಾಕ್‌ಡೌನ್ ಹೇರಲು ಸರಕಾರವು ಸಿದ್ಧತೆ ನಡೆಸುತ್ತಿದೆ ಎಂದು ವದಂತಿ ಹರಡುತ್ತಿವೆ. ಸಿಲಿಂಡರ್‌ನಲ್ಲಿ ಗ್ಯಾಸ್ ಪ್ರಮಾಣವೇ ಕಡಿಮೆಯಾಗಿದೆ ಎಂದು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಆರೋಪಿಸಿ ಬಳಿಕ ಅವರಿಗೆ ಸತ್ಯದರ್ಶನ ಮಾಡಿಸಿದ ಬಳಿಕ ಪೆಚ್ಚಾದರು. ಕಾಂಗ್ರೆಸ್ ಪಕ್ಷವಂತೂ ದೇಶಾದ್ಯಂತ ಅಡುಗೆ ಅನಿಲಕ್ಕೆ ಸಂಬಂಧಿಸಿ ಪ್ರತಿಭಟನೆ ನಡೆಸುತ್ತಿದೆ. ವಿಪರ್ಯಾಸವೆಂದರೆ ಕಾಂಗ್ರೆಸ್ ಮುಖಂಡರ ಮನೆಗಳಲ್ಲೆ ಅಕ್ರಮವಾಗಿ ದಾಸ್ತಾನು ಮಾಡಿದ ಸಿಲಿಂಡರ್‌ಗಳು ಕಾಣಸಿಗುತ್ತಿವೆ. ಇವರೆಲ್ಲರೂ ಭಾರತ ಸರಕಾರವೇ ಯುದ್ಧ ಘೋಷಿಸಿದ್ದು, ಭಾರತ ಸರಕಾರವೇ ಇಲ್ಲಿನ ತೈಲ ಬಿಕ್ಕಟ್ಟಿಗೆ ಕಾರಣ ಎಂಬಂತೆ ಹೇಳಿಕೆ ನೀಡುತ್ತಿರುವುದು ಬೇಜವಾಬ್ದಾರಿತನದ ಪರಮಾವಧಿ. ಕೆಲವು ಎಲ್‌ಪಿಜಿ ಪೂರೈಕೆದಾರರು ಕೂಡಾ ಈ ಸಂದರ್ಭವನ್ನು ಬಳಸಿಕೊಂಡು ಜನರನ್ನು ಶೋಷಿಸುತ್ತಿರುವುದು ದೇಶಹಿತದ ನಡೆಯಲ್ಲ, ಇವೆಲ್ಲ ವದಂತಿಗಳನ್ನು ನಿರಾಕರಿಸುವ ಸಲುವಾಗಿ ಸರಕಾರವು ಇದೀಗ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಇಳಿಸುವ ಮೂಲಕ ಜಾಣ ನಡೆಯಿಟ್ಟಿದೆ.

ವಿಶುದ್ಧ ಚಕ್ರಕ್ಕೆ ನಿತ್ಯಾನುಷ್ಠಾನ

ನೀವು ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com

ನೀವು ಅದ್ಭುತ ಮಾತುಗಾರರು ಆಗಬೇಕಾ?! ಮೊದಲು ಓದಬೇಕು. ಅಪಾರ ಪ್ರಮಾಣದ ಪುಸ್ತಕಗಳನ್ನು ಓದಬೇಕು. ಉದಾಹರಣೆಗೆ ನೀವು ಯಕ್ಷಗಾನ ಕಲಿಯುತ್ತೀರಿ. ಅಲ್ಲಿ ನಿಮಗೆ ಕುಣಿತವನ್ನು ಹೇಳಿಕೊಡುತ್ತಾರೆ. ಬಳಿಕ ಕತೆಯನ್ನು ಹೇಳುತ್ತಾರೆ. ಹಾಗೂ ಅದಕ್ಕೆ ತಕ್ಕಂತಹ ಸಂಭಾಷಣೆಗಳನ್ನು ಹೇಳಿಕೊಡುತ್ತಾರೆ. ಪ್ರಸಾಧನ ಮಾಡಿಕೊಳ್ಳುವುದನ್ನು, ವೇಷಭೂಷಣ ಹಾಕಿಕೊಳ್ಳುವುದನ್ನು, ಧ್ವನಿಯ ಏರಿಳಿತಗಳು ಹೇಗಿರಬೇಕು ಎನ್ನುವುದನ್ನು, ಪಾತ್ರದ ಪರಿಚಯವನ್ನು, ಪದ್ಯಗಳನ್ನು ಹೀಗೆ ಒಂದು ಪ್ರಸಂಗಕ್ಕೆ ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ಬೇಕಾಗುವ ಎಲ್ಲಾ ಸಂಗತಿಗಳನ್ನು ಹೇಳಿಕೊಡುತ್ತಾರೆ. ನೀವು ಅವುಗಳನ್ನು ಕಲಿಯುತ್ತೀರಿ ಹಾಗೂ ನೀವು ಆ ಪ್ರಸಂಗದಲ್ಲಿ ಪಾತ್ರಧಾರಿಗಳಾಗುತ್ತೀರಿ.

ನೀವು ಕಲಿತಿರುವುದಷ್ಟನ್ನೇ ಅಲ್ಲಿ ಪ್ರದರ್ಶನ ಮಾಡಿದರೆ ಅದು ಒಂದು ಸಾಮಾನ್ಯ ಸಂಗತಿಯಾಗುತ್ತದೆ. ಅದೇ ನೀವು ಕಲಿತಿರುವುದಕ್ಕೆ ಪೂರಕವಾಗಿ ಇನ್ನಷ್ಟು ಜೋಡಿಸಿದರೆ ಅದು ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ಕಲಿತಂತೆ ಮತ್ತು ಪ್ರದರ್ಶನ ಮಾಡಿದಂತೆ ಆಗುತ್ತದೆ. ಹಾಗೆ ನೀವು ಮಾಡಲು ಅದೇ ಪ್ರಸಂಗವನ್ನು ಯಾರ್‍ಯಾರು ಹೇಗೆಲ್ಲಾ ಮಾಡಿದರು, ಹೇಗೆಲ್ಲಾ ಕುಣಿತ, ಮಾತುಗಳನ್ನು ಆಡಿದರು ಎಂಬುದನ್ನು ನೋಡಿದರೆ ಸಾಕು. ಆದರೆ ಅದನ್ನು ಅನುಕರಣೆ ಎನ್ನುತ್ತೇವೆ. ಪ್ರಾರಂಭದಲ್ಲಿ ಅನುಕರಣೆ ಸಹಜ. ಬಳಿಕ ಅದು ಜನಕ್ಕೆ ಸಹ್ಯವಾಗುವುದಿಲ್ಲ. ಆಗ ನೀವು ಹೊಸತನ್ನು ನೀಡಲೇ ಬೇಕಾಗುತ್ತದೆ. ಅದಕ್ಕೆ ನಿಮ್ಮದೇ ಆದ ಓದು ಬೇಕು. ಜ್ಞಾನ ಬೇಕು. ಅರಿವು ಬೇಕು. ತಜ್ಞರೊಂದಿಗೆ ಸಂವಾದ ಮಾಡಬೇಕು ಹೀಗೆ ಏನೆಲ್ಲಾ ಮಾಡಿದಾಗ ನಿಮ್ಮ ಪಾತ್ರ ವಿಭಿನ್ನವಾಗುತ್ತಾ ಹೋಗುತ್ತದೆ. ಅನನ್ಯವಾಗುತ್ತಾ ಹೋಗುತ್ತದೆ. ಅದ್ವಿತೀಯವಾಗುತ್ತಾ ಹೋಗುತ್ತದೆ. ನಿಮಗೆ ನೀವೇ ಸರಿಸಾಟಿಯಾಗುತ್ತೀರಿ. ಇದಕ್ಕೆ ನಿಮ್ಮ ಕುಣಿತ ಮಾತ್ರ ಕಾರಣವಲ್ಲ, ಮಾತೂ ಸಹಾ ಕಾರಣವಾಗಿರುತ್ತದೆ. ನೀವು ಕುಣಿಯುವ ಹೆಜ್ಜೆಗಳು ಅವೇ ಆಗಿರುತ್ತವೆ, ಆದರೆ ಭಂಗಿ ಬೇರೆಯಾಗಿರುತ್ತವೆ. ಆಡುವ ಮಾತುಗಳು ದಿನೇ ದಿನೇ ತಜ್ಞತೆಯನ್ನು ಪಡೆಯುತ್ತಾ ಹೋಗುತ್ತವೆ. ನಿಮಗೊಂದು ಸ್ಥಾನವನ್ನು ಕಲ್ಪಿಸುತ್ತದೆ. ನಿಮ್ಮನ್ನು ಎತ್ತರೆತ್ತರಕ್ಕೆ ಏರಿಸುತ್ತದೆ. ಅದಕ್ಕೆ ನಿಮಗೆ ಓದಿನ ಸಂಸ್ಕೃತಿ ಇರಲೇಬೇಕಾಗುತ್ತದೆ. ಓದಿದ್ದನ್ನು ಚರ್ಚೆಗೆ ಒಳಪಡಿಸಿ ಸರಿಯಾದದ್ದನ್ನು ಗ್ರಹಿಸುವ ಮನಸ್ಥಿತಿ ಇರಬೇಕಾಗುತ್ತದೆ. ಹಾಗೂ ಅವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಪ್ರಸ್ತುತ ಪಡಿಸುವ ಜಾಣ್ಮೆ ಇರಬೇಕಾಗುತ್ತದೆ. ಅದಕ್ಕೆ ವಿಶುದ್ಧ ಚಕ್ರದ ನಿತ್ಯಾನುಷ್ಠಾನ ಬೇಕಾಗುತ್ತದೆ.

ಅದು ಗಮಕ ಕಲೆ ಇರಬಹುದು, ಸಂಗೀತ ಇರಬಹುದು, ಭಾಷಣ ಕಲೆ ಇರಬಹುದು, ಮಂತ್ರ ಪಠಣ ಇರಬಹುದು, ಸಂದರ್ಶನ ಕಲೆ ಇರಬಹುದು, ಚರ್ಚಾಸ್ಪರ್ಧೆ ಇರಬಹುದು, ಈವೆಂಟ್ ಮ್ಯಾನೇಜ್ಮೆಂಟ್ ಇರಬಹುದು, ನಿರೂಪಣೆ ಇರಬಹುದು... ಹೀಗೆ ಮಾತಿಗೆ ಸಂಬಂಧಿಸಿದ ಸಂಗತಿಗಳಿಗೆಲ್ಲಾ ವಿಶುದ್ಧ ಚಕ್ರದ ಸಹಾಯ ಅಗತ್ಯ. ಮತ್ತು ವಿಶುದ್ಧ ಚಕ್ರ ಸಮತೋಲನದಲ್ಲಿ ಇದ್ದಾಗ ಮಾತ್ರ ನೀವು ಒಂದರ ಹಿಂದೊಂದು ಯಶಸ್ಸನ್ನು ಸಾಧಿಸುತ್ತಾ ಬರುತ್ತೀರಿ. ಹಾಗೂ ನೀವು ನಿಮ್ಮ ವಿಶುದ್ಧ ಚಕ್ರವನ್ನು ಪಾಲೀಶ್ ಮಾಡುತ್ತಿದ್ದರೆ ಮಾತ್ರ ನಿಮ್ಮ ಯಶಸ್ಸು ನಿರಂತರವಾಗಿ ಇರುತ್ತದೆ.

ನಿರಂತರತೆ

ದಿನಾಲೂ ದೊಡ್ಡದಾಗಿ ಮಂತ್ರೋಚ್ಚಾರಣೆಯನ್ನು ಮಾಡಿ. ದೊಡ್ಡದಾಗಿ ಮಾತನಾಡಿ, ದೊಡ್ಡದಾಗಿ ಹಾಡನ್ನು ಹೇಳಿ, ದೊಡ್ಡದಾಗಿ ಶ್ಲೋಕಗಳನ್ನು ಹೇಳಿ, ದೊಡ್ಡದಾಗಿ ಭಜನೆ ಮಾಡಿ. ಸೂತ್ರಗಳನ್ನು, ಬೀಜಾಕ್ಷರಗಳನ್ನು, ಬೀಜ ಮಂತ್ರಗಳನ್ನು, ಸಹಸ್ರ ನಾಮಗಳನ್ನು ಬಾಯಿಪಾಠ ಮಾಡಿ. ಎಲ್ಲವನ್ನೂ ನಿತ್ಯವೂ ಅನುಷ್ಠಾನ ಮಾಡಬೇಕು. ನಿತ್ಯವೂ ಬಿಡದೇ ಹೇಳಲೇಬೇಕು. ಅದೂ ಸ್ನಾನ ಮಾಡಿ, ಮಡಿ ಉಟ್ಟು, ದೇವರಿಗೆ ದೀಪ ಹಚ್ಚಿ, ಅಲ್ಲಿಯೇ ಮಣೆ ಹಾಕಿಕೊಂಡು ಕುಳಿತು, ಭಕ್ತಿಯಿಂದ ಕೈ ಮುಗಿದು ಅಥವಾ ದೀಪವನ್ನು ನೋಡುತ್ತಾ ಇವೆಲ್ಲವನ್ನೂ ಅಥವಾ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾಡಬೇಕು. ಕೇವಲ ವಿಟ್ಠಲ, ವಿಟ್ಠಲ, ವಿಟ್ಠಲ, ವಿಟ್ಠಲ ಎನ್ನುವ ಸ್ಮರಣೆ ಮಾತ್ರದಿಂದ ನಿಮ್ಮ ಉಸಿರಾಟ ಕ್ರಿಯೆ ಸರಾಗವಾಗುತ್ತದೆ ಎಂದಾದರೆ, ಹೃದಯಾಘಾತದಿಂದ ನೀವು ಪಾರಾಗುತ್ತೀರಿ ಎಂದಾದರೆ ವಿವಿಧ ಬೀಜ ಮಂತ್ರಗಳ ಶಕ್ತಿಯನ್ನು ಊಹಿಸಲೂ ಆಗದು.

ಅಭಿವ್ಯಕ್ತಿಶೀಲ ಬರವಣಿಗೆ

ನೀವು ನಿತ್ಯವೂ ಡೈರಿಯನ್ನು ಬರೆಯುತ್ತೀರಾ?! ಹಾಗಿದ್ದರೆ ನಿಮ್ಮಲ್ಲಿ ಒಂದು ಶಿಸ್ತು ಇದ್ದೇ ಇರುತ್ತದೆ. ನಿತ್ಯವೂ ಯಾವುದೇ ಕೆಲಸವನ್ನು ಎಚ್ಚರಿಕೆಯಿಂದ ಮಾಡುವುದು ಒಂದು ಶಿಸ್ತು. ನೀವು ಎಚ್ಚರಿಕೆಯಿಂದ ಇದ್ದಾಗ ಅಂತಹಾ ಕೆಲಸಗಳನ್ನು ಮಾಡುವಾಗ ತರ್ಕ ಮಾಡಿಯೇ ಮಾಡುತ್ತೀರಿ. ತರ್ಕ ಮಾಡಿದಾಗ ವಿಷಯದ ವಿವಿಧ ಮುಖಗಳ ಅನಾವರಣವಾಗುತ್ತದೆ. ಆಗ ಅವುಗಳಲ್ಲಿ ನಿಮಗೆ ಯಾವುದು ಸೂಕ್ತ ಎನ್ನುವುದು ಗೊತ್ತಾಗುತ್ತದೆ. ಹೀಗೆ ನೀವು ಸರಿಯಾದುದನ್ನೇ ಮಾಡುತ್ತೀರಿ. ಮತ್ತು ಹಾಗೆ ಮಾಡಿದ್ದನ್ನು ಬರೆಯುತ್ತೀರಿ. ಇವೆಲ್ಲಾ ನಿಯಮಿತವಾದ ಹಂತಗಳು. ಒಮ್ಮೆ ನಿಮಗೆ ಹಂತಗಳಲ್ಲಿ ಕೆಲಸ ಮಾಡುವುದು ಅಭ್ಯಾಸವಾದರೆ, ನೀವು ಯಾವುದನ್ನೂ ಗಾಬರಿಯಿಂದ, ಆತುರದಿಂದ ಮಾಡದೇ ಕ್ರಮಬದ್ಧವಾಗಿ ಮಾಡುತ್ತೀರಿ. ಆಗ ನಿಮಗೆ ಸೋಲು ಎದುರಾಗುವುದೇ ಇಲ್ಲ.

ಒಮ್ಮೆ ನಿಮಗೆ ಮುಂದೇನು ಮಾಡಬೇಕೆಂದು ತಿಳಿಯುವುದಿಲ್ಲ ಎಂದಿಟ್ಟುಕೊಳ್ಳೋಣ ಅಥವಾ ಏನು ಮಾಡಿದರೂ ಸರಿಹೋಗುತ್ತಿಲ್ಲ ಎಂದಾದರೆ ಆಗ ಭಗವದ್ಗೀತೆಯಲ್ಲಿ ಹೇಳಿದ ಐದು ಸೂತ್ರಗಳು ನೆನಪಿನಲ್ಲಿ ಇದ್ದರೆ ಸಾಕು:

1. **ಸುಮ್ಮನಿದ್ದು ಬಿಡಿ:** ವಿಷಯವನ್ನು ವಿರೋಧಿಸಲೂ ಹೋಗಬೇಡಿ. ಪರವಾಗಿ ಮಾತನಾಡಲೂ ಹೋಗಬೇಡಿರಿ. ನಿಮ್ಮ ಪರವಾದ ಸಾಕ್ಷಿಗಳನ್ನು ಮೌನವಾಗಿ ಯಾರಿಗೂ ಗೊತ್ತಾಗದಂತೆ ಸಂಗ್ರಹಿಸಿಟ್ಟುಕೊಳ್ಳಿ. ನೀವು ಸುಮ್ಮನಿರುವುದು, ತಪ ಮಾಡುತ್ತಿರುವುದರ ಅರ್ಥ ನೀವು ಅದನ್ನು ಒಪ್ಪಿಕೊಂಡಿಲ್ಲ ಎಂದಲ್ಲ, ಅಥವಾ ತಿರಸ್ಕರಿಸಿದಿರಿ ಎಂದೂ ಅಲ್ಲ!! ನಿಮ್ಮ ಮಾರ್ಗವನ್ನು ಪುನರ್ ಪರಿಶೀಲನೆ ಮಾಡಿಕೊಳ್ಳುತ್ತಿದ್ದೀರಿ ಅಷ್ಟೆ. ಎಲ್ಲಾ ಕೀಳರಿಮೆಗೆ ಒಳಗಾಗಬೇಡಿ, ಎಲ್ಲಾ ಸೋಲಿನ ಭಯಕ್ಕೆ ಒಳಗಾಗಬೇಡಿ, ಎಲ್ಲಾ ಹತಾಶೆಗೆ ಒಳಗಾಗಬೇಡಿ. ತಣ್ಣಗೆ ಇರಿ ಮತ್ತು ಸ್ಪಷ್ಟತೆಗಾಗಿ ಕಾಯುತ್ತಿರಿ. ನಿಮ್ಮ ತಟಸ್ಥತೆಯಲ್ಲಿ ನಿಮಗೆ ಎಲ್ಲವೂ ಸ್ಪಷ್ಟವಾಗುತ್ತಾ ಪರಿಹಾರ ಹೊಳೆಯುತ್ತದೆ.

2. **ಫಲಿತಾಂಶದಿಂದ ಕಳಚಿಕೊಳ್ಳಿ:** ಅಂದರೆ ಎಲ್ಲರೂ ಮತ್ತು ನೀವು ಫಲಿತಾಂಶಕ್ಕೆ ಅಂಟಿಕೊಂಡಿರುತ್ತೀರಿ. ಯಾವುದೋ ಒಂದು ಫಲಿತಾಂಶಕ್ಕಾಗಿ ಸದಾ ನಿರೀಕ್ಷೆ ಇದ್ದೇ ಇರುತ್ತದೆ. ಫಲಿತಾಂಶ ನಿಮಗೆ ಬೇಕಾದಂತೆ ಇರುವುದಿಲ್ಲ ಎಂದಾದರೆ ನೀವೇಕೆ ಆ ಕೆಲಸವನ್ನು ಮಾಡಬೇಕು ಎನ್ನುವ ಪ್ರಶ್ನೆ ನಿಮ್ಮನ್ನು ಕಾಡತೊಡಗುತ್ತದೆ. ನೀವು ಹೀಗೆ ಯೋಚಿಸುತ್ತಾ ಸಾಮಾನ್ಯರಾಗಿ ಬಿಡುತ್ತೀರಿ. ಬದಲಿಗೆ ನಿಮ್ಮ ಕರ್ತವ್ಯವನ್ನು ಯಾವುದೇ ಹೆಚ್ಚಿನ ನಿರೀಕ್ಷೆಗಳಿಲ್ಲದೇ ಮಾಡುತ್ತಿರಿ. ನಿಮ್ಮ ಪರಿಶ್ರಮಕ್ಕೆ ಒಳ್ಳೆಯ ಫಲಿತಾಂಶ ತಡವಾದರೂ ಸಿಕ್ಕಿಯೇ ಸಿಗುತ್ತದೆ. ಅಲ್ಲಿಯವರೆಗೆ ನೀವು ಕಾಯಬೇಕು. ಆಗ ನಿಮ್ಮೊಳಗೆ ಸೇರಿಕೊಳ್ಳುತ್ತಾ ಬಂದ ತಾಳ್ಮೆಯೇ ನಿಮ್ಮ ದೊಡ್ಡ ಶಕ್ತಿಯಾಗಿ ಮಾರ್ಪಾಡಾಗುತ್ತದೆ. ಶಾಂತಿ ನಿಮ್ಮೊಳಗೆ ವ್ಯಾಪಿಸುತ್ತಾ ಬರುತ್ತದೆ. ನೀವು ಎಲ್ಲಾ ಕಾಲದಲ್ಲೂ ಶಾಂತಿಯಿಂದ ಇದ್ದೀರಿ ಎಂದಾದರೆ ನಿಮ್ಮ ಆರೋಗ್ಯ ಎಂದಿಗೂ ಹಾಳಾಗುವುದಿಲ್ಲ, ಸಮಸ್ಯೆಗಳು ನಿಮ್ಮನ್ನು ಕಾಡುವುದಿಲ್ಲ, ತೊಡಕುಗಳು ನಿಮ್ಮನ್ನು ಬಾಧಿಸುವುದಿಲ್ಲ.

3. **ಹೋರಾಟ ನಿಮ್ಮನ್ನು ಗಟ್ಟಿಯಾಗಿಸುತ್ತದೆ:** ಕಷ್ಟ ಕಾಲಗಳು ಎಲ್ಲರಿಗೂ ಎದುರಾಗುತ್ತವೆ. ಅವುಗಳನ್ನು ಎದುರಿಸುವುದನ್ನು ಕಲಿತರೆ ನೀವು ಗಟ್ಟಿಯಾಗುತ್ತಾ ಹೋಗುತ್ತೀರಿ. ಒಂದೊಂದೇ ಕಷ್ಟಗಳನ್ನು ಎದುರಿಸಿದಂತೆ ನಿಮಗೆ ಜೀವನದ ಅನುಭವ ಹೆಚ್ಚುತ್ತಾ ಹೋಗುತ್ತದೆ. ಆರ್ಥಿಕ ಸಂಕಷ್ಟ, ಸಾಮಾಜಿಕ ಸ್ಥಾನಮಾನ, ಸಾಂಸ್ಕೃತಿಕ ಅಭಿವ್ಯಕ್ತಿ, ಶಿಕ್ಷಣ ಹೀಗೆ ಒಂದೊಂದೂ ಒಂದೊಂದು ಕಾಲಮಾನದಲ್ಲಿ ನಿಮ್ಮನ್ನು ಬಂದು ಆವರಿಸಿಕೊಳ್ಳುತ್ತವೆ. ನೀವು ಅವುಗಳನ್ನು ನಿಭಾಯಿಸುತ್ತಾ ಬರಲೇಬೇಕು.

ಅದಕ್ಕೆ ಪೂರ್ವ ತಯಾರಿ ಎನ್ನುವುದು ಏನೂ ಇರುವುದಿಲ್ಲ, ಬಂದಿದ್ದನ್ನು ಎದುರಿಸುವುದು ಅಷ್ಟೇ. ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಪರಿಹಾರ ಇರುವುದೇ ಹೊರತು ಹಿಂದಿನದೇ ದಾರಿಯಲ್ಲ!! ಹೀಗೆ ನೀವು ಹಳೆಯ ಅನುಭವದಿಂದ ಹೊಸತನ್ನು ಎದುರಿಸುವುದನ್ನು ಕಲಿಯುತ್ತೇನೆ ಎಂದಾದರೆ ಅದು ಅಸಾಧ್ಯ. ಹಾಗಂತಾ ಪ್ರತಿ ಹೋರಾಟವೂ ನಿಮಗೆ ಒಂದೊಂದು ಡಿಗ್ರಿಯನ್ನು ಕೊಡುತ್ತದೆ.

4. **ನಿಮ್ಮ ಮನಸ್ಸನ್ನು ಹಗುರಗೊಳಿಸಿ:** ನೀವು ಸತತವಾಗಿ ಕೆಲಸ ಮಾಡುತ್ತಲೇ ಇದ್ದೀರಾ? ನೀವು ಯಾವಾಗಲೂ ಏನಾದರೊಂದು ಸಂಗತಿಯ ಕುರಿತು ಚಿಂತಿಸುತ್ತಲೇ ಇದ್ದೀರಾ? ನೀವು ಸದಾ ಸಮಸ್ಯೆಗಳನ್ನು ಎದುರಿಸುತ್ತಲೇ ಇದ್ದೀರಾ? ಹಾಗಿದ್ದರೆ ನೀವು ಎಂದಿಗೂ ಸುಖವಾಗಿ ಇರಲು ಸಾಧ್ಯವೇ ಇಲ್ಲ, ನೆಮ್ಮದಿಯಂತೂ ನಿಮ್ಮಿಂದ ಮೈಲುದೂರದಲ್ಲಿ ಇರುತ್ತದೆ. ನೀವು ಎಲ್ಲವನ್ನೂ ಮರೆತು ಆರಾಮಾಗಿ, ಶೂನ್ಯರಾಗಿ, ಮನಸ್ಸಿನಲ್ಲಿ ಇರುವುದನ್ನೆಲ್ಲಾ ಖಾಲಿ ಮಾಡಿ. ಆಗ ಪರಿಹಾರ ಗೋಚರಿಸಲು ಶುರುವಾಗುತ್ತದೆ.

5. **ನಿಮ್ಮ ಪ್ಲಾನ್‌ನ್ನು ನೀವು ಮೊದಲು ನಂಬಿ:** ನಿಮ್ಮನ್ನು ಬಿಟ್ಟು ಏನೆಲ್ಲಾ ಹೊರಟುಹೋಯಿತೋ ಅವೆಲ್ಲಾ ನಿಮಗೆ ನಷ್ಟವಲ್ಲ, ಬಿಟ್ಟುಹೋಗಿದ್ದಕ್ಕಿಂತಲೂ ಸುಂದರವಾದ, ಲಾಭದಾಯಕ, ಗೆಲುವು ನೀಡುವ ಮತ್ಯಾವುದೋ ಒಂದು ಸಂಗತಿ ನಿಮಗಾಗಿ ಕಾಯುತ್ತಿರಬಹುದು. ಅಥವಾ ಬಂದು ಸೇರಬಹುದು. ಅದಕ್ಕಾಗಿಯೇ ಈ ಸಂಗತಿ ನಿಮ್ಮನ್ನು ಬಿಟ್ಟು ಹೋಯಿತು ಎಂದುಕೊಳ್ಳಿ. ಹೊಸ ಪ್ಲಾನ್ ಮಾಡಿ.

◆

ಉತ್ತಮರಿಗೆ ವಿರೋಧಿಗಳಿಲ್ಲ

ನ ವೈರಾಣ್ಯಭಿಜಾನಂತಿ ಗುಣಾನ್ ಪಶ್ಯಂತಿ ನಾಗುಣಾನ್ ।
ವಿರೋಧಂ ನಾಗಚ್ಛಂತಿ ಯೇ ತೇ ಉತ್ತಮಪೂರುಷಾಃ ॥ -ಮಹಾಭಾರತ

ವೈರವನ್ನು ಭಾವಿಸದೇ, ದುರ್ಗುಣಗಳನ್ನು ಲೆಕ್ಕಿಸದೇ ಗುಣಗಳನ್ನು ಮಾತ್ರ ನೋಡುವವರು, ಯಾರೊಡನೆಯೂ ವಿರೋಧವನ್ನು ಕಟ್ಟಿಕೊಳ್ಳದೇ ಇರುವವರು ಉತ್ತಮ ಪುರುಷರು -ಎಂಬುದು ಶ್ಲೋಕಾರ್ಥ.

ಜನರನ್ನು ಉತ್ತಮರು, ಮಧ್ಯಮರು ಹಾಗೂ ಕನಿಷ್ಠರು ಎಂದು ವಿಭಾಗಿಸುತ್ತಾರೆ. ಜೀವನವನ್ನು ಪರರ ಹಿತಕ್ಕಾಗಿಯೇ ಮೀಸಲಿರಿಸಿ, ಸ್ವಾರ್ಥದ ಲವಲೇಶವೂ ಇಲ್ಲದವರು ಉತ್ತಮರು. ಸ್ವಾರ್ಥದ ಕೆಲಸವನ್ನು ಯಾರನ್ನೂ ವಂಚಿಸದೇ ನಡೆಸಿಕೊಂಡು ಹೋಗುವುದರ ಜತೆಗೆ ಸಮಯ ಮಾಡಿಕೊಂಡು ಪರೋಪಕಾರವನ್ನು ಕರ್ತವ್ಯಬುದ್ಧಿಯಿಂದ ನಡೆಸುವವರನ್ನು ಮಧ್ಯಮರು ಎಂದು ಗುರುತಿಸುತ್ತಾರೆ. ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಳಸಿಕೊಳ್ಳುವವರು, ಇತರರಿಗೆ ಕೇಡಾಗುವುದನ್ನು ಲೆಕ್ಕಿಸದೇ ಸ್ವಾರ್ಥಸಾಧನೆಯಲ್ಲಿ ತೊಡಗುವವರು ಕನಿಷ್ಠರು. ಇನ್ನೊಬ್ಬರನ್ನು ಹಿಂಸಿಸಿ ಸಂತೋಷ ಪಡುವವರನ್ನು ಅಧಮಾಧಮರು ಎಂದು ನಾಲ್ಕನೇ ಸ್ತರದವರನ್ನಾಗಿ ಗುರುತಿಸುತ್ತಾರೆ.

• ಡಾ. ಸೋಂದಾ ಭಾಸ್ಕರ ಭಟ್

ಉತ್ತಮರಾಗಿ ಬದುಕುವುದೇ ನಿಜವಾದ ಬದುಕು. ಇದರಲ್ಲಿಯೇ ಮಾನವೀಯ ಮೌಲ್ಯವಿರುವುದು. ಎಲ್ಲರೂ ಬದುಕಬೇಕಾದುದು ಹೀಗೆಯೇ. ಭೌತಿಕ ವಿಷಯದತ್ತ ಆಕರ್ಷಿತರಾದ ನಾವು ಈ ಮೌಲ್ಯವನ್ನು ಕಡೆಗಣಿಸುತ್ತಾ ಬಂದಿದ್ದೇವೆ. ಉತ್ತಮರಾಗಲು ಸಾಧ್ಯವಾಗದಿದ್ದರೂ ಮಧ್ಯಮರಾಗಿ ಬದುಕಬಹುದಿತ್ತು ಅದನ್ನೂ ಕಡೆಗಣಿಸಿ ಇಂದಿನ ಮನುಜರು ಇನ್ನೂ ಕೆಳಕ್ಕಿಳಿದಿರುವುದು ಮನುಕುಲದ ದುರಂತ; ಮನುಕುಲಕ್ಕೆ ಮಾಡುವ ಅಪಚಾರ.

ಉತ್ತಮರಾಗಬೇಕೆನಿಸಿದರೆ ಅವರ ಜೀವನಕ್ರಮ ಹೇಗಿರಬೇಕು ಎಂಬುದನ್ನು ಪ್ರಕೃತಕಾರಿಕೆ ನಿರೂಪಿಸುತ್ತದೆ. ಯಾರೊಡನೆಯೂ ವೈರವನ್ನು ಸಾಧಿಸದೇ ಬದುಕನ್ನು ಸಾಗಿಸಬೇಕು. ವೈರದಿಂದ ವೈರವು ಉಪಶಮನಗೊಳ್ಳದು. ಪ್ರೀತಿಯಿಂದಲೇ ವೈರವನ್ನು ಗೆಲ್ಲಬೇಕು. ಇದು ಕಷ್ಟಕರವೆನಿಸಿದರೂ ಅಸಾಧ್ಯವೇನಲ್ಲ, ನಿರಂತರ ಸಾಧನೆ ಬೇಕು.

ಉತ್ತಮರು ಗುಣಗ್ರಾಹಿಗಳೇ ವಿನಾ ದುರ್ಗುಣಗಳನ್ನು ಗ್ರಹಿಸುವವರಲ್ಲ. ಸಾಮಾನ್ಯರಾದ ನಾವು ವ್ಯಕ್ತಿಯಲ್ಲಿರುವ ಗುಣಗಳಿಗಿಂತಲೂ ದೋಷವನ್ನೇ ಹೆಚ್ಚಾಗಿ ಗುರುತಿಸುತ್ತೇವೆ. ದೋಷ ಯಾವುದರಲ್ಲಿಲ್ಲ? ಯಾರಲ್ಲಿಲ್ಲ? ದೋಷವನ್ನೇ ಹುಡುಕುವ ಸ್ವಭಾವವನ್ನು ಬಿಟ್ಟು ಗುಣಗಳನ್ನು ಗುರುತಿಸಿ, ಮೆಚ್ಚುಗೆ ವ್ಯಕ್ತಪಡಿಸಬೇಕು. ಈ ಕ್ರಿಯೆ ನಿರಂತರತೆಯನ್ನು ಪಡೆದುಕೊಂಡರೆ ಉತ್ತಮರಾಗಲು ಸಾಧ್ಯ. ದೋಷವನ್ನೇ ಗುರುತಿಸಲು ಮುಂದಾದರೆ ವೈಮನಸ್ಯಕ್ಕೆ ಕಾರಣವಾಗುತ್ತದೆ. ಗುಣವನ್ನು ಗುರುತಿಸುತ್ತಾ ಸಾಗಿದರೆ ಸ್ನೇಹ ವೃದ್ಧಿಯಾಗುತ್ತದೆ; ಪರಿವರ್ತನೆಯೂ ಸಾಧ್ಯ. ಇಂತಹ ಸ್ವಭಾವವನ್ನು ಉತ್ತಮರಲ್ಲಿ ಕಾಣಬಹುದು.

ಉತ್ತಮರು ಯಾರೊಡನೆಯೂ ದ್ವೇಷವನ್ನು ಸಾಧಿಸುವುದಿಲ್ಲ, ಯಾರ ವಿರೋಧವನ್ನೂ ಕಟ್ಟಿಕೊಳ್ಳುವುದಿಲ್ಲ. ವಿರೋಧಿಗಳನ್ನು ಪ್ರೀತಿ, ಸಜ್ಜನಿಕೆಗಳಿಂದಲೇ ಗೆಲ್ಲುತ್ತಾರೆ. ಸಣ್ಣಪುಟ್ಟ ಕಾರಣಗಳಿಗಾಗಿ ವಿರೋಧ ಕಾಣಿಸಿಕೊಳ್ಳುತ್ತದೆ. ಅವುಗಳನ್ನು ಸಂಪಾದಿಸಿಕೊಂಡು, ಹೊಂದಿಸಿಕೊಂಡು ಸಾಗಿಸಿದರೆ ವಿರೋಧವುಂಟಾಗಲಾರದು.

ಅವಿರೋಧದಿಂದ ವಿರೋಧವನ್ನು ಗೆಲ್ಲುವುದೇ ಸನಾತನ ಧರ್ಮದ ಲಕ್ಷಣ. ಇದನ್ನು ಅರಿತರೆ ವಿರೋಧಕ್ಕೂ, ವೈರಕ್ಕೂ ಅಸ್ಪದವಿರಲಾರದು. ಉತ್ತಮರು ಕಡಿಮೆಯಾದಷ್ಟೂ ಸಮಾಜದಲ್ಲಿ ದುಷ್ಟರು ಹೆಚ್ಚುತ್ತಾ ಹೋಗುತ್ತಾರೆ. ಸಮಾಜದ ವ್ಯವಸ್ಥೆ ಕುಸಿಯುತ್ತದೆ. ಆದ್ದರಿಂದ ಉತ್ತಮ ಸಂಸ್ಕಾರ, ಸನ್ನಡತೆ ಸದ್ವಿಚಾರಗಳನ್ನು ಕಲಿಸಿಕೊಟ್ಟು ಉತ್ತಮರನ್ನಾಗಿ ರೂಪಿಸುವ ಪ್ರಯತ್ನವನ್ನು ಮಾಡಬೇಕಾಗಿದೆ.

ಬಯಲು ಆಲಯದೊಳಗೋ ಆಲಯವು ಬಯಲೊಳಗೋ?

ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಹಾಗೂ ಭಾರತದ ಜೀವಾಳವಾಗಿದೆ.

ಒಳನೋಟ
• ಹೆ.ಬಾ. ಮಲ್ಯ

ಇದೇನು, ಇರಾನ್ ಯುದ್ಧ, ಜಾಗತಿಕ ಇಂಧನ ಸಮಸ್ಯೆ, ಟ್ರಂಪ್, ಮೋದಿ ಬಗ್ಗೆ, ಎಲ್‌ಪಿಜಿ ಸಿಲಿಂಡರ್ ಬಗ್ಗೆ ಬರೆಯುವುದನ್ನು ಬಿಟ್ಟು ಇದ್ದಕ್ಕಿದ್ದ ಹಾಗೆ ಅಧ್ಯಾತ್ಮದ ಬಗ್ಗೆ ಬರೆಯುತ್ತಿದ್ದೇನೆ ಎಂದು ಕೆಲವರಿಗೆ ವಿಚಿತ್ರ ಎನಿಸಬಹುದು. ಮಾನವನಿಗೆ, ವಿಶೇಷವಾಗಿ ಭಾರತದಲ್ಲಿ ಹುಟ್ಟಿ ಬೆಳೆದವನಿಗೆ ಅರಿವು ಮೂಡುತ್ತಾ ಹೋದಂತೆ, ಅನುಭವಗಳಾಗುತ್ತಾ ಹೋದಂತೆ, ನಮ್ಮ ಜೀವನದಲ್ಲಿ ಹಾಗೂ ಜಗತ್ತಿನಲ್ಲಿ ನಡೆಯುವ ಅನೇಕ ಸಂಗತಿಗಳು ತನ್ನ ಕೈಯಲ್ಲಿಲ್ಲ, ಯಾವುದೋ ಅಜ್ಞಾತ ಶಕ್ತಿ ನಮ್ಮ ಜೀವನವನ್ನು, ಜಗತ್ತಿನ ವ್ಯವಹಾರಗಳನ್ನು ನಿಯಂತ್ರಿಸುತ್ತಿದೆ ಎಂಬುದು ಗೋಚರವಾಗುತ್ತಾ ಹೋಗುತ್ತದೆ. ಇಲ್ಲೇ ಅಧ್ಯಾತ್ಮ ಪ್ರಾರಂಭವಾಗುವುದು, ವೈರಾಗ್ಯ ಮೂಡುವುದು. ಒಂದೇ ವಾರದೊಳಗೆ ಇರಾನನ್ನು ಮುಗಿಸಿಬಿಡಬಹುದು ಎಂದು ಟ್ರಂಪ್ ಭಾವಿಸಿದ್ದರು. ಆದರೆ ಈಗ ಯುದ್ಧ ಅವರಿಗೇ ತಿರುಗುಬಾಣವಾಗುತ್ತಿದೆಯೋ ಎನಿಸುತ್ತಿದೆ. ತಿಂಗಳು ಕಳೆಯುತ್ತಾ ಬಂದರೂ ಇರಾನ್ ಮಂಡಿಯೂರಿಲ್ಲ, ಕ್ಷಿಪಣಿಗಳನ್ನು ಎಸೆಯುತ್ತಲೇ ಇದೆ. ಮೂರು ವರ್ಷಗಳ ಹಿಂದೆ ರಷ್ಯಾದ ಪುಟಿನ್ ಪುಟ್ಟ ದೇಶವಾದ ಉಕ್ರೇನನ್ನು ಕೆಲವೇ ದಿವಸಗಳಲ್ಲಿ ಮಣಿಸಬಹುದು ಎಂದು ಭಾವಿಸಿದ್ದರು. ಆದರೆ ಇಂದಿಗೂ ಉಕ್ರೇನ್ ಯುದ್ಧ ನಡೆಯುತ್ತಲೇ ಇದೆ. ಭಾರತದಲ್ಲಿ ಮೋದಿಯನ್ನು ಹೇಗಾದರೂ ಮಾಡಿ ಅಧಿಕಾರದಿಂದಿಳಿಸಿ ತಾನು ಪ್ರಧಾನಿಯಾಗಬೇಕೆಂದು ರಾಹುಲ್ ಗಾಂಧಿ ಇನ್ನಿಲ್ಲದ ಪ್ರಯತ್ನ ಮಾಡಿದರು. ಅಮೆರಿಕದ ಸಿ.ಐ.ಎ., ಜಾರ್ಜ್ ಸೊರೋಸ್ ಗ್ಯಾಂಗ್ ಮುಂತಾದವರು ಮೋದಿಯನ್ನು ಹಣಿಯಲು ಇನ್ನಿಲ್ಲದ ಪ್ರಯತ್ನ ನಡೆಸಿದರು. ಆದರೆ ಮೋದಿ ಇನ್ನೂ ಅಧಿಕಾರದಲ್ಲಿ ಭದ್ರವಾಗಿದ್ದಾರೆ. ಹಾಗಾದರೆ ಟ್ರಂಪ್, ಪುಟಿನ್ ಅವರುಗಳ ಯೋಜನೆ ಏಕೆ ಸಾಕಾರವಾಗಲಿಲ್ಲ, ಮೋದಿಯವರು ತಮ್ಮನ್ನು ಹಣಿಯುವ ರಹಸ್ಯ ಪ್ರಯತ್ನಗಳಿಂದ ಹೇಗೆ ಬದುಕುಳಿದರು, ಹೇಗೆ ಇನ್ನೂ ಅಧಿಕಾರದಲ್ಲಿದ್ದಾರೆ, ಯಾವ ಶಕ್ತಿ ಈ ಎಲ್ಲ ಘಟನಾವಳಿಗಳ ಹಿಂದೆ ಕೆಲಸ ಮಾಡುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ. ಅದಕ್ಕೇ ಹೇಳಿದ್ದು, ಅನೇಕ ಸಂಗತಿಗಳು ನಾವಂದುಕೊಂಡಂತೆ ನಡೆಯುವುದಿಲ್ಲ ಎಂದು. ಇಲ್ಲಿ ಅಧ್ಯಾತ್ಮದ ಬೀಜ ಮೊಳಕೆಯೊಡೆದು ಬೆಳೆಯಲಾರಂಭಿಸುವುದು.

ಎಲ್ಲವೂ ವಿಧಿಯಾಟ ಎಂದು ಭಾರತದ ಸಾಮಾನ್ಯ ಜನರು ಹೇಳುವುದನ್ನು ಮೂಢನಂಬಿಕೆ ಎನ್ನಲಾಗುವುದಿಲ್ಲ, ಏನು ಆಗಬೇಕೆಂದಿದೆಯೋ ತನ್ನ ಪಾಡಿಗೆ ಆಗಿಯೇ ಆಗುತ್ತದೆ. ಇದು ಪ್ರತ್ಯಕ್ಷ ಅನುಭವ. ಆದರೆ ಈ ಅಧ್ಯಾತ್ಮ ಚಿಂತನೆ ಭಾರತದ್ದೇ ವಿಶೇಷತೆ. ಇತರ ಪಾಶ್ಚಾತ್ಯ ಕ್ರೈಸ್ತ ದೇಶಗಳಲ್ಲಾಗಲೀ, ಇಸ್ಲಾಮಿಕ್ ದೇಶಗಳಲ್ಲಾಗಲಿ ಆಧ್ಯಾತ್ಮಿಕತೆ ಎಂಬುದು ಕಾಣಬರುವುದಿಲ್ಲ. ಅಲ್ಲಿನ 'ನಾನು' ಎಂಬ ದುರಹಂಕಾರ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಗೊಂದಲ, ಸಮಸ್ಯೆಗಳಿಗೆ ಕಾರಣ. ಭಾರತದಲ್ಲಿ ಹಿಂದೆ ಚಿಕ್ಕಂದಿನಲ್ಲೇ ಆಧ್ಯಾತ್ಮಿಕತೆ ಶಿಕ್ಷಣ, ಕಥೆಗಳ ರೂಪದಲ್ಲಿ ಸಿಗುತ್ತಿತ್ತು. ಈಗ ಕಡಿಮೆಯಾಗುತ್ತಿದೆ. ಕನಕದಾಸರ ಗುರುಗಳು ''ನಮ್ಮಲ್ಲಿ ಸ್ವರ್ಗಕ್ಕೆ ಯಾರು ಹೋಗಬಹುದು'' ಎಂದು ಕೇಳಿದಾಗ ಎಲ್ಲಾ ಶಿಷ್ಯರೂ ಮೌನವಾದರು. ಕನಕದಾಸರು ''ನಾನು ಹೋದರೆ ಹೋಗಬಹುದು'' ಎಂದರು. ಮಿಕ್ಕ ಶಿಷ್ಯರಿಗೆ ಮನಸ್ಸಿನೊಳಗೇ ಕೋಪ ಬಂತು. ಆಗ ಗುರುಗಳು ನಕ್ಕು ಅದರ ಅರ್ಥ ಹೇಳಿದರು- ''ನಾನು'' ಎಂಬ ದುರಹಂಕಾರ ನಾಶವಾದರೆ ನಾನು ಹೋಗಬಹುದು ಎಂದು. ಆದರೆ ಅದು ಅಷ್ಟು ಸುಲಭವಲ್ಲ, ಹಾಗೆಯೇ ಇನ್ನೊಮ್ಮೆ ಗುರುಗಳು ಎಲ್ಲಾ ಶಿಷ್ಯರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು ''ಯಾರೂ ಇಲ್ಲದ ಹಾಗೂ ಯಾರೂ ನೋಡದ ಜಾಗದಲ್ಲಿ ಈ ಹಣ್ಣನ್ನು ತಿಂದು ಬರಬೇಕು'' ಎಂದು ಹಣ್ಣುಗಳನ್ನು ಕೊಟ್ಟರು. ಮಿಕ್ಕೆಲ್ಲರೂ ಎಲ್ಲೆಲ್ಲೋ ಅಡಗಿ ಕುಳಿತು ಹಣ್ಣು ತಿಂದು ಬಂದರು. ಕನಕದಾಸರು ಬಾಳೆಹಣ್ಣು ತಿನ್ನದೇ ಹಾಗೆ ಬಂದರು. ಯಾಕೆ ತಿನ್ನಲಿಲ್ಲ ಎಂದು ಕೇಳಿದಾಗ ''ದೇವರು ಎಲ್ಲೆಡೆ ಇರುವನಲ್ಲವೇ? ಹಾಗಾಗಿ ತಿನ್ನಲಾಗಲಿಲ್ಲ'' ಎಂದರು. ಇವು ಸಾಮಾನ್ಯ ಮಕ್ಕಳ ಕಥೆಗಳು ಎನ್ನಿಸಿದರೂ ಇವುಗಳಲ್ಲಿ ಅಡಗಿರುವ ಆಧ್ಯಾತ್ಮಿಕ ತತ್ವ ಬಹಳ ಗಹನವಾದದ್ದು, ನಿಗೂಢವಾದದ್ದು, ಸಹಸ್ರಾರು ವರ್ಷಗಳಿಂದ ಭಾರತದಲ್ಲಿ ಜನರು ತಮ್ಮ ಜೀವನದಲ್ಲಿ ಎದುರಾಗುವ ಕಷ್ಟಗಳಿಂದ, ಸೋಲುಗಳಿಂದ ಕಂಗೆಡದೆ ಅವುಗಳನ್ನು ಧೈರ್ಯವಾಗಿ ಎದುರಿಸಿ, '' ಇದೆಲ್ಲ ವಿಧಿಯಾಟ. ತಾತ್ಕಾಲಿಕ ಸಮಸ್ಯೆ, ಕಾಲ ಹೋದಂತೆ ಈ ಕಷ್ಟ, ದುಃಖಗಳೆಲ್ಲ ಮುಗಿದು ಒಳ್ಳೆಯ ದಿನಗಳು ಬಂದೇ ಬರುತ್ತವೆ'' ಎಂಬ ಆಶಾವಾದವನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದರು. ಅಷ್ಟಕ್ಕೇ ಶರಣಾಗುತ್ತಿರಲಿಲ್ಲ, ವಿಧಿಯಾಟವೆಂದರೆ ಪಲಾಯನವಾದ ಅಲ್ಲ, ಮತ್ತೆ ಪ್ರಯತ್ನದಲ್ಲಿ ತೊಡಗುತ್ತಾರೆ. ಈ ಆಧ್ಯಾತ್ಮಿಕ ಶಕ್ತಿಯೇ ಹಿಂದು ಸಮಾಜದ ಜೀವಾಳ. ಭಾರತದ ಮೇಲೆ ಎಷ್ಟೊಂದು ಕಷ್ಟ ಪರಂಪರೆಗಳೆರಗಿ ಬಂದರೂ ಸಂಘರ್ಷ ನಿಲ್ಲಲಿಲ್ಲ, ನಾವು ಹಿಂದೆ ಏನೋ ತಪ್ಪು ಮಾಡಿರಬೇಕು, ಮುಂದೆ ಸರಿಯಾಗಿ ನಡೆದುಕೊಳ್ಳೋಣ. ಈಗ ನಮಗೆ ಕಷ್ಟ ಕೊಡುವವರೂ ಶಾಶ್ವತರೇನೂ ಅಲ್ಲ, ಅವರೂ ತಕ್ಕ ಪ್ರತಿಫಲ ಅನುಭವಿಸುತ್ತಾರೆ ಎಂಬ ಕರ್ಮಸಿದ್ಧಾಂತದ ಮೇಲೆ ನಂಬಿಕೆ. ಇವುಗಳೇ ಹಿಂದು ಸಮಾಜವನ್ನು ಇಂದಿಗೂ ಉಳಿಸಿಕೊಂಡು ಬಂದಿವೆ.

ಮಿಕ್ಕ ವಿದೇಶಿ ಜನಾಂಗಗಳಲ್ಲಿ ಇಂಥ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳು, ನಂಬಿಕೆಗಳು, ಧರ್ಮ ಇಲ್ಲದ್ದರಿಂದ ಅಲ್ಲಿನ ಗ್ರೀಕ್, ರೋಂ, ಈಜಿಪ್ಟ್, ಬೆಬಿಲೋನಿಯಾ, ಅಸ್ಸಿರಿಯಾ ಮುಂತಾದ ಶ್ರೇಷ್ಠ ಹಾಗೂ ಬಲಿಷ್ಠ ಸಂಸ್ಕೃತಿಗಳು, ಒಂದೊಮ್ಮೆ ಎಷ್ಟೋ ಉಚ್ಛ್ರಾಯ ಸ್ಥಿತಿಯಲ್ಲಿದ್ದಂಥವುಗಳು ಹೇಳ ಹೆಸರಿಲ್ಲದಂತೆ ನಾಶವಾಗಿ ಹೋದುವು. ಆದರೆ ಪ್ರಾಚೀನ ಭಾರತ ಇಂದಿಗೂ ಉಸಿರಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ, ಸಹಸ್ರಾರು ವರ್ಷ ನಮ್ಮನ್ನು ಕಾಯ್ದುಕೊಂಡು ಬಂದ ಈ ಆಧ್ಯಾತ್ಮಿಕ ಮೌಲ್ಯಗಳು ಮಸುಕಾಗುತ್ತಿವೆ. ಅದರಿಂದಾಗಿ ಸಮಸ್ಯೆಗಳು. ಮತ್ತೆ ಅವುಗಳನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ. ಮಾತ್ರವಲ್ಲ ಜಗತ್ತಿಗೆ ನೀಡಬೇಕಾಗಿದೆ. ಆಗಲೇ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಭಾರತ ಈ ಉದ್ದೇಶದಿಂದಲೇ ಇನ್ನೂ ಬದುಕಿದೆ. ಭಾರತ ಬದುಕಿದರೆ ಜಗತ್ತು ಬದುಕುತ್ತದೆ.

ಭಾರತದಲ್ಲಿ ಮಧ್ಯಯುಗೀನ ಕಾಲಖಂಡದಲ್ಲಿ ಮುಸ್ಲಿಂ ಆಕ್ರಮಣ, ದೌರ್ಜನ್ಯಗಳಿಂದ ಎಲ್ಲೆಡೆ ಕತ್ತಲು ಆವರಿಸಿದಂತಿತ್ತು. ಆಗ ದಾಸವರೇಣ್ಯರು, ಕೀರ್ತನಕಾರರು ಭಜನೆಗಳ ಮೂಲಕ, ಭಕ್ತಿ ಮಾರ್ಗದ ಮೂಲಕ ಗಹನವಾದ ಆಧ್ಯಾತ್ಮಿಕ ತತ್ವಗಳನ್ನು, ಮೌಲ್ಯಗಳನ್ನು ಸಾಮಾನ್ಯ ಜನರಲ್ಲಿ ಹರಡಿದರು. ಅದು ಆ ಕರಾಳ ಕಾಲಖಂಡದ ಅನಿವಾರ್ಯತೆಯಾಗಿತ್ತು. ಕನಕದಾಸರ ''ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ'' ಎಂಬ ಕೀರ್ತನೆಯಲ್ಲಿ ಗಹನವಾದ ಆಧ್ಯಾತ್ಮಿಕ ತತ್ವ ಅಡಗಿದೆ. ದೇವರು ಎಲ್ಲೆಡೆಯಲ್ಲೂ ಇದ್ದಾನೆ, ಅವನಿಲ್ಲದ ಜಾಗವೇ ಇಲ್ಲ ಎಂಬುದನ್ನು ದಾಸರ ಮೂಲಕ ಸಾಮಾನ್ಯ ಜನರೂ ಅರಿತುಕೊಂಡರು. ನಮ್ಮೊಳಗೂ ದೇವನಿದ್ದಾನೆ ಎಂಬುದು ಹಿಂದುಗಳ ನಂಬಿಕೆ. ಶಂಕರಾಚಾರ್ಯರು ''ಅಹಂ ಬ್ರಹ್ಮಾಸ್ಮಿ, ತತ್ವಮಸಿ'' ಎಂದು ಹೇಳಿದ್ದು ಇದನ್ನೇ. ''ನೀ ದೇಹದೊಳಗೋ ನಿನ್ನೊಳು ದೇಹವೋ'' ಎಂದು ದಾಸರು ಭಗವಂತ ಹಾಗೂ ಮಾನವನನ್ನು ಪ್ರಶ್ನಿಸುತ್ತಾರೆ. ಇಲ್ಲಿ ದೇವರು ಎಂದಾಗ ಮೂರ್ತಿಗಳು, ಚಿತ್ರಗಳು ಆಗಿರದೆ ಪರಮಾತ್ಮ ಎಂಬ ಆ ಅನಂತಶಕ್ತಿ ಸಾಗರ ಎಂದು ಅರ್ಥ ಮಾಡಿಕೊಳ್ಳಬೇಕು. ದೇಹವನ್ನು ಒಂದು ಮಡಕೆಗೆ ಹೋಲಿಸಿದ್ದಾರೆ. ಆ ಅನಂತಶಕ್ತಿ ಸಾಗರವನ್ನು ಒಂದು ಮಹಾಜಲಸಾಗರ ಎಂದಿಟ್ಟುಕೊಳ್ಳೋಣ. ಅದರೊಳಗೆ ಓರ್ವ ಮುಳುಗುತಜ್ಞ ಆಕ್ಸಿಜನ್ ಮಾಸ್ಕ್ ಧರಿಸಿ ಮುಳುಗಿದಾಗ ಅದರೊಳಗೆ ಅವನಿಗೆ ಒಂದು ಲೋಕವೇ ಕಾಣುತ್ತದೆ. ಅದು ಜಗತ್ತು. ಅವನು ಒಂದು ಮಡಕೆಯನ್ನು ತೆಗೆದುಕೊಂಡು ಹೋದನೆಂದುಕೊಳ್ಳೋಣ. ಆ ಮಡಕೆ ಒಡೆದರೆ ಅದರೊಳಗಿನ ನೀರು ಸಾಗರದಲ್ಲಿ ಕರಗಿಹೋಗುತ್ತದೆ. ಶರೀರ ಎಂದರೆ ಮಡಕೆ, ಪಂಚಕೋಶಗಳಿಂದಾವೃತವಾದ ದೇಹ- ಅನ್ನಮಯ, ಪ್ರಾಣಮಯ, ಮನೋಮಯ, ಜ್ಞಾನಮಯ, ಆನಂದಮಯ. ಅದರೊಳಗೂ ಪರಮಾತ್ಮ ಶಕ್ತಿ ಇದೆ. ಈ ಕೋಶಗಳು ಹರಿದಾಗ ಒಳಗೂ ಪರಮಾತ್ಮನಿದ್ದಾನೆ ಎಂಬ ಸತ್ಯದ ಅರಿವಾಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ದಾಸರು ಹೇಳುತ್ತಾರೆ - ''ಬಯಲು ಆಲಯದೊಳಗೋ ಆಲವು ಬಯಲೊಳಗೋ'' ಎಂದು. ದೇವರೊಳಗೆ ಅಂದರೆ ಆ ಶಕ್ತಿ ಸಾಗರದೊಳಗೆ ನಾವಿದ್ದೇವೆ. ಆತ ಎಲ್ಲಾ ಕಾಪಿನಲ್ಲಿದ್ದಾನೆ ಎಂದ ಮೇಲೆ ನಮ್ಮೊಳಗೂ ಇದ್ದಾನೆ. ಮಡಕೆ ಸಾಗರದೊಳಗೆ ಇದೆ. ಅದೇ ಸಾಗರ ಸಣ್ಣ ರೂಪದಲ್ಲಿ ಅಂದರೆ ಮಡಕೆಯ ಆಯಕ್ಕನುಗುಣವಾಗಿ ಮಡಕೆಯೊಳಗೂ ಇದೆ. ಪರಮಾತ್ಮನನ್ನು ಕುರಿತು ಹೇಳುವುದಾದರೆ ಬಯಲು ಎಂದರೆ ಬ್ರಹ್ಮಾಂಡ-ಜಗತ್ತು ಆತನದೇ ಸೃಷ್ಟಿಯಾದ್ದರಿಂದ ಆತನೊಳಗೇ ಇದೆ. ಹಾಗೇ ಬ್ರಹ್ಮಾಂಡ ಅಂದರೆ ಜಗತ್ತಿನೊಳಗೆ ಎಲ್ಲೆಡೆ ಅವನೇ ವ್ಯಾಪಿಸಿದ್ದಾನೆ. ಅವನಿಲ್ಲದ ಜಾಗವೇ ಇಲ್ಲ. ವ್ಯಕ್ತಿಯನ್ನು ಕುರಿತು ಹೇಳುವುದಾದರೆ ಈ ದೇಹವೇ ಆಲಯ, ಒಳಗಿರುವುದು ಬಯಲು, ಅಂದರೆ ಜಗತ್ತು. ''ಬಯಲು -ಆಲಯವೆರಡು ಮನಸ್ಸಿನೊಳಗೋ?'' ಎಂಬುದು ಮುಂದಿನ ಪ್ರಶ್ನೆ. ಇಂಥ ಗಹನವಾದ, ನಿಗೂಢವಾದ ಸೃಷ್ಟಿ-ಚೈತನ್ಯಗಳ ಅರ್ಥವನ್ನು ದಾಸರು ಸರಳ ಭಾಷೆಯಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಎಲ್ಲ ಹಿಂದುಗಳೂ ಮತ್ತೆ ತಮ್ಮ ಮೂಲ ಧರ್ಮ-ಚಿಂತನೆಗಳತ್ತ ಮರಳಬೇಕಾದ ಅಗತ್ಯವಿದೆ. ಆಗಲೇ ಭಾರತಕ್ಕೆ ಶಾಶ್ವತ ಭವಿಷ್ಯವಿದೆ ಎನ್ನಬಹುದು.

◆

ಐವತ್ತು ವರ್ಷಗಳ ಸ್ಮೃತಿಪಥ: ಸಾಧನೆಗಳ ಸುಗಂಧಪಥ

▸ ಭಾನುಪ್ರಕಾಶ್. ಎಲ್



ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕೈಗಾರಿಕೆ ಮತ್ತು ಹಣಕಾಸಿನ ವಲಯದಲ್ಲಿ ಆಧುನಿಕ ನಿರ್ವಹಣಾ ಕೌಶಲ್ಯದಿಂದ ನಿಭಾಯಿಸುವ ಹೊಣೆಗಾರಿಕೆಯು ಹೆಚ್ಚಾಗತೊಡಗಿತ್ತು. ದೇಶದ ಬೆಳವಣಿಗೆಯಲ್ಲಿ ತಾಂತ್ರಿಕ ಕೌಶಲ್ಯದ ಜೊತೆಗೆ ನಿಪುಣ ವ್ಯವಸ್ಥಾಪಕರ ಅಗತ್ಯ ಸ್ಪಷ್ಟವಾಗಿ ಕಾಣಿಸಿತ್ತು. ದ್ವಿತೀಯ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಭಾರೀ ಕೈಗಾರಿಕೆಗಳು ಮತ್ತು ಸಾರ್ವಜನಿಕ ಕ್ಷೇತ್ರದ ವಿಸ್ತರಣೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲು ಸಿದ್ಧವಾಗಿದ್ದವು. 'ಲೈಸನ್ಸ್‌ರಾಜ್' ದಂತಹ ಜಟಿಲ ವ್ಯವಸ್ಥೆಯನ್ನು ನಿಭಾಯಿಸಲು ಸಮರ್ಥ ವ್ಯವಸ್ಥಾಪಕರು ಅತ್ಯಗತ್ಯವಾದರು. ಆದ್ದರಿಂದ ನಿರ್ವಹಣಾ ಶಿಕ್ಷಣದ ಹೊಸ ಶಕೆ ಭಾರತದಂತಹ ದೇಶದಲ್ಲಿ, ಅಭಿವೃದ್ಧಿಗೆ ಪೂರಕವಾದ ಪ್ರಮುಖ ಆದ್ಯತೆಯಾಯಿತು.

ಈ ಕ್ಷಿಪ್ರ ಪ್ರಗತಿ ಮತ್ತು ಅಗತ್ಯತೆಯನ್ನು ಮನಗಂಡು 1961ರಲ್ಲಿ ದೇಶದ ಮೊಟ್ಟ ಮೊದಲ ಐಐಎಂ (Indian Institute of Management) ಅಂದಿನ ಕಲ್ಕತ್ತಾದಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಅಹಮದಾಬಾದ್ ನಲ್ಲೂ ಸಹ ಐಐಎಂ ಪ್ರಾರಂಭವಾಯಿತು. ಈ ಶಿಕ್ಷಣಸಂಸ್ಥೆಗಳು 1970ರ ವೇಳೆಗೆ ಕೈಗಾರಿಕಾ ವಲಯದ ಮೇಲೆ ಪರಿಣಾಮ ಬೀರಲು ಆರಂಭಿಸಿದ್ದವು. ಈ ಮಹತ್ವದ ಕಾಲಘಟ್ಟದಲ್ಲಿ 1973ರಲ್ಲಿ ಬೆಂಗಳೂರಿನಲ್ಲಿ ದೇಶದ 3ನೇ ಐಐಎಂ ಜನ್ಮ ತಾಳಿತು.

1916 ರಲ್ಲಿ ಕರ್ನಾಟಕ ಸಾಂಸ್ಕೃತಿಕ ರಾಜಧಾನಿಯಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯವು ಭಾರತದ ನಿರ್ವಹಣಾ ಶಿಕ್ಷಣದ ಈ ಹೊಸಯುಗವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅಂದಿನ ಉಪಕುಲಪತಿಗಳಾಗಿದ್ದ ದಿ. ಪ್ರೊ. ದೇ. ಜವರೇಗೌಡ (ದೇಜಗೌ) ಮತ್ತು ವಾಣಿಜ್ಯ ವಿಭಾಗ ಅಂದಿನ ಮುಖ್ಯಸ್ಥರಾಗಿದ್ದ ದಿ. ಡಾ. ಜೆ.ಕೆ.ಇರಾನಿ ಇವರ ಚುರುಕು ನಾಯಕತ್ವದಲ್ಲಿ 1974 ರಲ್ಲಿ ವ್ಯವಹಾರ ನಿರ್ವಹಣೆಯ ಅಧ್ಯಯನ ವಿಭಾಗವು ಪ್ರಾರಂಭವಾಯಿತು. ಮೊದಲು ಈ ವಿಭಾಗದ ಪಾಠಪ್ರವಚನಗಳು ವಾಣಿಜ್ಯ ವಿಭಾಗದ ಆವರಣದಲ್ಲೇ ಪ್ರಾರಂಭಗೊಂಡು, ವಿಶ್ವವಿದ್ಯಾನಿಲಯದ ಗಣಿತ ಶಾಸ್ತ್ರ, ಮನೋವಿಜ್ಞಾನ, ಸಂಖ್ಯಾ ಶಾಸ್ತ್ರ, ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳ ಸಮೂಹವು ವಿಭಾಗದ ಬೆಂಬಲಕ್ಕೆ ನಿಂತದ್ದು ಅವಿಸ್ಮರಣೀಯ. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಆರಂಭಗೊಂಡ ಈ ವಿಭಾಗವು, ನಂತರದ ಸ್ವಲ್ಪ ಅವಧಿಯನ್ನು ಇಂದಿನ ಎನ್‌ಎಸ್‌ಎಸ್ ಕಟ್ಟಡದಲ್ಲಿ, ಮುಂದುವರೆದ ಮೆಲುಕುಗಳು ಹಿರಿಯ ವಿದ್ಯಾರ್ಥಿಗಳ ಸ್ಮೃತಿಪುಟಗಳಲ್ಲಿ ದಾಖಲಾಗಿದೆ.

ಡಾ.ಜೆ.ಕೆ.ಇರಾನಿಯವರ ನಂತರ, ಪ್ರೊ. ಮುನಿರಾಮಪ್ಪ ಈ ವಿಭಾಗವನ್ನು ಮುನ್ನಡೆಸಿದ್ದರು.

ಅದೇ ಸಮಯದಲ್ಲಿ ಅಮೇರಿಕಾದಲ್ಲಿ ಅಧ್ಯಯನ ಮಾಡಿ, ಕೆಲಕಾಲ ಧಾರವಾಡ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಎಂ. ವೆಂಕಟೇಶ್ 1983-84ರಲ್ಲಿ ಈ ವಿಭಾಗಕ್ಕೆ ಸೇರ್ಪಡೆಗೊಂಡರು. ಅವರ ಅವಿರತ ಶ್ರಮದ ಫಲವಾಗಿ ಎಂಬಿಎ ವಿಭಾಗಕ್ಕೆ ಸಂಖ್ಯಾಶಾಸ್ತ್ರ ವಿಭಾಗ ಮೊದಲ ಮಹಡಿಯನ್ನು ವಿಶ್ವವಿದ್ಯಾನಿಲಯವು ನಿಯುಕ್ತಿಗೊಳಿಸಿತು. 1984-86ರ ಸಮಯದಲ್ಲಿ ಸಂಸ್ಥೆಗೆ ಪ್ರೊ. ಎಂ. ವೆಂಕಟೇಶ್ ಜೊತೆಗೆ ಶ್ರಮಿಸಿದವರಲ್ಲಿ ಪ್ರೊ. ಫ್ರಾನ್ಸಿಸ್ ಚೆಲುನಿಲಂ ಸಹಪ್ರಮುಖರು. ಪ್ರೊ. ಸಿ. ಎ. ಫ್ರಾನ್ಸಿಸ್‌ರವರ ರಚಿಸಿರುವ Business Environment ಹಾಗೂ Business and Government ಮುಂತಾದ ಪುಸ್ತಕಗಳು ಇಂದಿಗೂ ವ್ಯವಹಾರ ಶಾಸ್ತ್ರವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ. ಜೊತೆಗೆ ಇವರ ಪುಸ್ತಕಗಳು ದೇಶ ಹಾಗೂ ವಿದೇಶಗಳಲ್ಲಿ ಮನ್ನಣೆ ಪಡೆದಿದೆ. 1974 ರಲ್ಲಿ ಕೇವಲ 30 ವಿದ್ಯಾರ್ಥಿಗಳ ಪ್ರವೇಶ ಅವಕಾಶದಿಂದ ಪ್ರಾರಂಭಿಸಲ್ಪಟ್ಟ ಈ ವಿಭಾಗವು, 1999ರಲ್ಲಿ ಹೆಚ್ಚಾದ ಬೇಡಿಕೆ ಮತ್ತು ನಿರ್ವಹಣಾ ಶಾಸ್ತ್ರವನ್ನು ಹೆಚ್ಚು ಪ್ರಸರಿಸುವ ದೃಷ್ಟಿಯಿಂದ partially self-finance ಯೋಜನೆಯಡಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು 60ಕ್ಕೆ ಏರಿಸಲಾಯಿತು. ನಂತರ 2004ರಲ್ಲಿ, ಈ ಸಂಖ್ಯೆ 120ಕ್ಕೆ ಏರಿಕೆಯಾಗಿ, ಪ್ರಸ್ತುತ ಈ ಸಂಖ್ಯೆಯು 180ಕ್ಕೆ ತಲುಪಿದೆ. ಪ್ರತಿವರ್ಷ 25ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳು ನಿರ್ವಹಣಾ ಶಾಸ್ತ್ರವನ್ನು ಅಭ್ಯಾಸಿಸುತ್ತಿರುವುದು ವಿಶೇಷ. ಈ ವಿಭಾಗವು ಪ್ರಾರಂಭವಾದ ವರ್ಷದಿಂದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನ ಮೂಲಕ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದು, ಇದು ಪ್ರಸ್ತುತ ವ್ಯವಸ್ಥೆಯಲ್ಲಿನ ಪಾರದರ್ಶಕತೆಯ ಕೈಗನ್ನಡಿಯಾಗಿದೆ.

2002 ರಲ್ಲಿ ಅಂದಿನ ಉಪಕುಲಪತಿಗಳಾಗಿದ್ದ ಪ್ರೊ. ಎಸ್. ಎನ್.ಹೆಗ್ಗಡೆಯವರ ಸಂಪರ್ಕ ಮತ್ತು ಶ್ರಮದಿಂದ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಶ್ರೇಷ್ಠ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ, ದೂರದ ಅಮೇರಿಕಾದ ಮಿಚಿಗನ್‌ನಲ್ಲಿ ನೆಲೆಗೊಂಡು ಅತ್ಯಂತ ಯಶಸ್ವಿ ಉದ್ಯಮಿಯಾಗಿರುವ ಡಾ. ಬಿ.ಎನ್. ಬಹದ್ದೂರ್ ರವರ ಉದಾರಕೊಡುಗೆಯಿಂದ ಮೈಸೂರಿನ ಉತ್ತರದ ಅಂಚಿನಲ್ಲಿ ಡಾ. ಬಿ.ಎನ್. ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್ ಎಂಬ ನಾಮಕರಣದೊಂದಿಗೆ ಎಂಬಿಎ ವಿಭಾಗವು ಸುಸಜ್ಜಿತವಾಗಿದೆ ತನ್ನ ಮರು ಹುಟ್ಟನ್ನು ಪಡೆದುಕೊಂಡಿತು. ಈ ಸಂಸ್ಥೆಯಲ್ಲಿ ಪ್ರೊ. ಆಯೇಷಾ ಶರೀಫ್, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ.ಹೆಚ್. ಎನ್. ರಮೇಶ್ ಮತ್ತು ಹಲವಾರು ಅತಿಥಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಜ್ಞಾನದ ಬುತ್ತಿಯನ್ನು ಹೆಚ್ಚಿಸಿದ್ದನ್ನು ಮರೆಯಲು ಸಾಧ್ಯವಿಲ್ಲ.

1995 ರಿಂದ ಈ ವಿಭಾಗದ ವಿದ್ಯಾರ್ಥಿಗಳ ಸಮೂಹವು ರಾಜ್ಯಮಟ್ಟದ ಸಾಹಿತ್ಯ, ನಿರ್ವಹಣಾ ಕೌಶಲ್ಯ ಹಾಗೂ ಸಾಂಸ್ಕೃತಿಕ ಉತ್ಸವವನ್ನು 'ಮಂತ್ರ' MANTRA (Management The Rewarding Attitude)) ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮವು ಹೆಚ್ಚು ಪ್ರಶಂಸೆಯನ್ನು ಪಡೆದಿದೆ. ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಪ್ರಸ್ತುತ ದೇಶವಿದೇಶಗಳ ಹಲವು ಕಂಪನಿಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ತಮ್ಮ ಯಶಸ್ಸಿನಿಂದ ಈ ಶಿಕ್ಷಣ ಸಂಸ್ಥೆಯ ರಾಯಭಾರಿಗಳಾಗಿ, ಉದ್ಯಮಿಗಳಾಗಿ ದೇಶದ ಪ್ರಗತಿಗೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಬೆನ್ನೆಲುಬಾಗಿದ್ದಾರೆ.

ಇದೇ ಶನಿವಾರ 28 ರಂದು ಈ ವಿಭಾಗವು ಸುವರ್ಣ ಮಹೋತ್ಸವದ ಸಂಭ್ರಮದ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಆಯೋಜಿಸಿದೆ. ಕಾರ್ಯಕ್ರಮವನ್ನು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟನೆ ಮಾಡಲಿದ್ದು, ಇದೇ ವಿಭಾಗದ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಯಾದ ಬ್ರಿಗೇಡ್ ಗ್ರೂಪ್ ಕಾರ್ಯನಿರ್ವಾಹಕ ಅಧ್ಯಕ್ಷರಾದ ಎಂ.ಆರ್. ಜೈಶಂಕರ್ ಸಮಾರೋಪ ಭಾಷಣ ಮಾಡಲಿದ್ದಾರೆ.

◆

ಇಂಧನ ಭದ್ರತೆ, ಜನ ಹಿತ ರಕ್ಷಣೆಗೆ ಆದ್ಯತೆ

ಪುಟ 0➡ ಸರಬರಾಜು ಸರಪಳಿಗಳ ಸುಗಮ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳುವಂತೆ ಹಾಗೂ ಅಕ್ರಮ ಸಂಗ್ರಹಣೆ ಮತ್ತು ಅತಿಲಾಭ ಪಡೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ ಮೋದಿ, ತಪ್ಪು ಮಾಹಿತಿ ಮತ್ತು ವದಂತಿಗಳ ಹರಡುವಿಕೆಯನ್ನು ತಡೆಯುವ ಅಗತ್ಯವಿದೆ ಎಂದು ಎಚ್ಚರಿಸಿದರು. ಜನರಲ್ಲಿ ಆತಂಕ ಉಂಟಾಗದಂತೆ ನಿಖರ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ತಲುಪಿಸುವುದು ಅತ್ಯಗತ್ಯ ಎಂದರು.

ಪಶ್ಚಿಮ ಏಷ್ಯಾದ ಪರಿಸ್ಥಿತಿ ಉಲ್ಲೇಖಿಸಿ, ಭಾರತವು ಇಂತಹ ಜಾಗತಿಕ ಅಶಾಂತಿಗಳನ್ನು ಎದುರಿಸುವಲ್ಲಿ ಹಿಂದಿನಿಂದಲೂ ಅನುಭವ ಹೊಂದಿದೆ ಎಂದು ಹೇಳಿದರು. ಕೋವಿಡ್-19 ಮಹಾಮಾರಿಯ ಸಮಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಟೀಮ್ ಇಂಡಿಯಾ ಆಗಿ ಕೆಲಸ ಮಾಡಿ ಸರಬರಾಜು ಸರಪಳಿ, ವ್ಯಾಪಾರ ಮತ್ತು ದೈನಂದಿನ ಜೀವನದ ಮೇಲೆ ಪರಿಣಾಮವನ್ನು ಕಡಿಮೆ ಮಾಡಿದುದನ್ನು ಅವರು ನೆನಪಿಸಿದರು. ಈಗಿನ ಪರಿಸ್ಥಿತಿಯನ್ನು ಎದುರಿಸಲು ಸಹಕಾರ ಮತ್ತು ಸಮನ್ವಯದ ಅದೇ ಮನೋಭಾವವೇ ಭಾರತದ ದೊಡ್ಡ ಶಕ್ತಿ ಎಂದು ಮೋದಿ ಹೇಳಿದರು. ಆನ್‌ಲೈನ್ ಮೋಸಗಳು ಮತ್ತು ನಕಲಿ ಏಜೆಂಟ್‌ಗಳ ವಿರುದ್ಧ ಜಾಗ್ರತೆ ವಹಿಸಲು ಸಲಹೆ ನೀಡಿದ ಅವರು, ಗಡಿ ಮತ್ತು ಕರಾವಳಿ ರಾಜ್ಯಗಳಲ್ಲಿ ಸಾಗಣೆ, ಅಗತ್ಯ ವಸ್ತುಗಳು ಮತ್ತು ಸಮುದ್ರ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಲು ವಿಶೇಷ ಗಮನಹರಿಸುವಂತೆ ಹೇಳಿದರು. ಜನರ ವಿಶ್ವಾಸವನ್ನು ಕಾಪಾಡುವುದು ಅತ್ಯಂತ ಮುಖ್ಯ ಎಂದು ಮೋದಿ ಒತ್ತಿಹೇಳಿದರು. ಅಗತ್ಯ ವಸ್ತುಗಳ ಲಭ್ಯತೆಯ ಬಗ್ಗೆ ಭರವಸೆ ನೀಡುವುದರಿಂದ ಜನರಲ್ಲಿ ಅನಗತ್ಯ ಆತಂಕ ತಡೆಯಬಹುದು ಎಂದು ಹೇಳಿದರು.

20% ವಾಣಿಜ್ಯ ಅಡುಗೆ ಅನಿಲ ಹೆಚ್ಚಳ: ಪ್ರಧಾನಿ ಸಕಾರಾತ್ಮಕ ಸ್ಪಂದನೆ

• **ಬೆಂಗಳೂರು:** ರಾಜ್ಯದ ಹೋಟೆಲ್‌ಗಳಿಗೆ ಸದ್ಯ ನೀಡುತ್ತಿರುವ ಶೇ.50ರಷ್ಟು ವಾಣಿಜ್ಯ ಅಡುಗೆ ಅನಿಲವನ್ನು ಇನ್ನೂ ಶೇ.20ರಷ್ಟು ಹೆಚ್ಚಿಸಲು ಪ್ರಧಾನಿಯವರಲ್ಲಿ ಮನವಿ ಮಾಡಿದ್ದು, ಪ್ರಧಾನಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು. ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿದ ಅವರು, ಸಭೆಯ ವಿವರವನ್ನು ಹಂಚಿಕೊಂಡರು. ಕರ್ನಾಟಕವೂ ಈ ವಿಷಮ ಪರಿಸ್ಥಿತಿಯಲ್ಲಿ ಕೇಂದ್ರದ ಜತೆಗೆ ಇರುವುದಾಗಿ ಪ್ರಧಾನಿಗಳಿಗೆ ಭರವಸೆ ನೀಡಲಾಗಿದೆ ಎಂದು ಮುನಿಯಪ್ಪ ತಿಳಿಸಿದರು.

ಅಬಕಾರಿ ಸುಂಕ ಕಡಿತ

ಪುಟ 0➡ ಗುರುವಾರ ತಡರಾತ್ರಿ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಪೆಟ್ರೋಲ್ ಮೇಲಿನ ಸುಂಕವನ್ನು 13 ರೂ.ಗಳಿಂದ 3 ರೂ.ಗೆ ಇಳಿಸಲಾಗಿದ್ದು, ಡೀಸೆಲ್ ಮೇಲಿನ ಸುಂಕವನ್ನು 10 ರೂ.ರಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ಇರಾನ್-ಅಮೆರಿಕ-ಇಸ್ರೇಲ್ ಸಂಘರ್ಷ ಹಾಗೂ ಹಾರ್ಮುಜ್ ಜಲಸಂಧಿಯ ಅಸ್ಥಿರತೆ ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಗಿದ್ದು, ಇದರಿಂದ ಜಾಗತಿಕ ಇಂಧನ ಸರಬರಾಜಿನಲ್ಲಿ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ನಿಯಂತ್ರಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಆದಾಗ್ಯೂ, ಸದ್ಯಕ್ಕೆ ಚಿಲ್ಲರೆ ಇಂಧನ ಬೆಲೆಗಳಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ.

2 ವಾರದಲ್ಲಿ 5,500 ಕೋಟಿ ರೂ. ಆದಾಯ ನಷ್ಟ: ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಲೀಟರ್‌ಗೆ 10ರೂ. ಕೇಂದ್ರ ಅಬಕಾರಿ ಸುಂಕ ಕಡಿತ ಹಾಗೂ ವಿಮಾನ ಟರ್ಬೈನ್ ಇಂಧನ(ಎಟಿಎಫ್) ಮತ್ತು ಡೀಸೆಲ್ ರಫ್ತು ಮೇಲಿನ ಸುಂಕ ಹೆಚ್ಚಳದಿಂದ ಎರಡು ವಾರಗಳಲ್ಲಿ ಕೇಂದ್ರ ಸರ್ಕಾರಕ್ಕೆ ಒಟ್ಟಾರೆ 5,500 ಕೋಟಿ ಆದಾಯ ನಷ್ಟವಾಗಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಬಕಾರಿ ಸುಂಕ ಕಡಿತದಿಂದ ಸುಮಾರು 7 ಸಾವಿರ ಕೋಟಿ ರೂ. ಆದಾಯ ನಷ್ಟವಾಗಲಿದ್ದು, ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕದಿಂದ 1,500 ಕೋಟಿ ರೂ. ಹೆಚ್ಚುವರಿ ಆದಾಯ ಲಭಿಸಲಿದೆ ಎಂದು ಹೇಳಿದರು. ಅಬಕಾರಿ ಕಡಿತದ ನಂತರ ಪೆಟ್ರೋಲ್ ಮೇಲಿನ ಒಟ್ಟು ಸುಂಕ ಪ್ರತಿ ಲೀಟರ್‌ಗೆ 11.9 ರೂ. ಆಗಿದ್ದು, ಇದರಲ್ಲಿ ಮೂಲ ಸುಂಕ 1.40 ರೂ., ವಿಶೇಷ ಹೆಚ್ಚುವರಿ ಸುಂಕ 3 ರೂ., ಕೃಷಿ ಮೂಲಸೌಕರ್ಯ ಸೆಸ್ 2.50 ರೂ. ಹಾಗೂ ರಸ್ತೆ ಸೆಸ್ 5 ರೂ. ಸೇರಿವೆ. ಮಾ.26ರಿಂದ ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲೆ ಕ್ರಮವಾಗಿ 21.5 ರೂ. ಮತ್ತು 29.5 ರೂ. ಪ್ರತಿ ಲೀಟರ್ ಸುಂಕ ವಿಧಿಸಲಾಗಿದೆ.

ರಾಮ ಬಾಣ


ಅದು ಈ 'ಗಂಭೀರ ವ್ಯಕ್ತಿ'ಯನ್ನವಲಂಬಿಸಿದೆ!
ಭಾರತದಲ್ಲಿ ದರ್ಶನ್ ಹೊಸ ಅನಿಶ್ಚಿತತೆ; ಸುದ ಸಮುದ್ರ ಸಿಂಗ್ ಪೈ
-ರಾಮಣ್ಣ

ಕಿಡಿ ನುಡಿ

• ವಾಸುದೇವರಾವ್ ಕಕ್ಕೇಜೆ

◈ ಜಗತ್ತಿನ ಅತಿ ಕಲುಷಿತ ದೇಶಗಳಲ್ಲಿ ಪಾಕಿಸ್ತಾನಕ್ಕೆ ನಂಬರ್ ಒನ್ ಸ್ಥಾನ - ಸುದ್ದಿ
- ಹೊರಗಿನದೇ ಹೀಗಿರುವಾಗ ಒಳಗಿನ ಕಲುಷಿತ ಮಾನಸಿಕತೆ ಅದೆಷ್ಟು ಭೀಕರವಾಗಿಬಹುದು?

ದಿನ ಭವಿಷ್ಯ

ಮೇಷ
ಕೆಲ ಅಹಿತಕರ ಪ್ರಸಂಗದಿಂದಾಗಿ ನಿಮ್ಮ ಆತ್ಮವಿಶ್ವಾಸ ಕುಸಿತ. ಹೋರಾಟ ಮನೋಭಾವ ಬಿಡಬೇಡಿ. ಇತರರ ಮನ ಒಪ್ಪಿಸಬೇಕಾಗಿಲ್ಲ.

ವೃಷಭ
ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಸಂಭ್ರಮ. ಆರೋಗ್ಯ ಸಮಸ್ಯೆ ನಿವಾರಣೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಯೋಜಿಸಿ.

ಮಿಥುನ
ಮನಸ್ಸಿನ ಶಾಂತಿ ಕಾಪಾಡಿ. ವಾಗ್ವಾದ, ಸಂಘರ್ಷಕ್ಕೆ ಇಳಿಯದಿರಿ. ಹೊಸ ವ್ಯವಹಾರ ಆರಂಭಕ್ಕೆ ಕಾಲ ಸುಸೂತ್ರವಾಗಿದೆ. ಬಂಧು ಸಹಕಾರ.

ಕಟಕ
ಉದ್ಯಮದಲ್ಲಿ ಹಣ ಹೂಡಲು ಸೂಕ್ತ ಸಮಯ. ನಿಮ್ಮ ಮೃದು ಸ್ವಭಾವ ಒಳ್ಳೆ ಫಲ ನೀಡದು. ಅವಶ್ಯ ಸಂದರ್ಭದಲ್ಲಿ ಕಠಿಣವಾಗಿ ವರ್ತಿಸಲು ಕಲಿಯಿರಿ.

ಸಿಂಹ
ಅಹಿತಕರ ಪ್ರಸಂಗ ಎದುರಿಸುವಿರಿ. ಜಾಣ್ಮೆಯಿಂದ ನಿಭಾಯಿಸಿ. ಆಕರ್ಷಕ ವ್ಯಕ್ತಿಯ ಜತೆ ಸ್ನೇಹ ಬೆಳೆದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿ.

ಕನ್ಯಾ
ಕಲಾವಿದರಿಗೆ ಉತ್ತಮ ದಿನ. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ನೆಂಟರಿಷ್ಟರ ಸಮ್ಮುಖ ಆತ್ಮೀಯ ಕಾಲಕ್ಷೇಪ. ಆರ್ಥಿಕ ಉನ್ನತಿ.

ತುಲಾ
ಸ್ಪಷ್ಟವಾಗಿ ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ಕಟುಸತ್ಯ ಹೇಳಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ತುಸು ಹಿನ್ನಡೆ ಉಂಟಾದೀತು.

ವೃಶ್ಚಿಕ
ಹಳೆಬರ ಭೇಟಿ ಸಂಭವ. ಹಳೆ ನೆನಪು ಕೆದಕುವಿರಿ. ನಿಮ್ಮ ವ್ಯವಹಾರದಲ್ಲಿ ಅಡ್ಡಿ ಒದಗೀತು. ಸಹನೆಯ ನಡೆ ಒಳ್ಳೆಯದು.

ಧನು
ಕಠಿಣ ಪರಿಸ್ಥಿತಿ ಒದಗಿದರೂ ಆತ್ಮವಿಶ್ವಾಸ ಬಿಡಬೇಡಿ. ಎಲ್ಲ ಕಷ್ಟವೂ ತಾತ್ಕಾಲಿಕ. ಅನಿರೀಕ್ಷಿತ ನೆರವು ಒದಗಲಿದೆ. ಬಂಧು ಭೇಟಿಯಿಂದ ಸಂತಸ.

ಮಕರ
ಸಂಘಟಿತ ಕಾರ್ಯದಿಂದ ಯಶಸ್ಸು. ಏಕಾಂಗಿ ಪ್ರಯತ್ನ ಫಲ ನೀಡದು. ಕೇಳಿದವರಿಗೆಲ್ಲ ಹಣ ನೀಡಬೇಡಿ. ಕೌಟುಂಬಿಕ ಹೊಣೆ ಹೆಚ್ಚಳ.

ಕುಂಭ
ಮುತುವರ್ಜಿಯಿಂದ ಕೆಲಸ ನಿರ್ವಹಿಸಿ. ಉದಾಸೀನತೆ ಕಾರ್ಯ ಕೆಡಿಸಬಹುದು. ಸಂಬಂಧ ಪಡದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬೇಡಿ.

ಮೀನ
ಹಣದ ವಿವಾದ ಪರಿಹಾರ. ಸಂಬಂಧದಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳದಿರಿ. ಸಂವಹನ ಕೊರತೆಯಿಂದ ಆಪ್ತರ ಜತೆ ಮುನಿಸು ಸಂಭವ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30
ಅದೃಷ್ಟ ಸಂಖ್ಯೆ 3,7,5,1

ಮಹಾರಾಷ್ಟ್ರ ಕನ್ನಡಿಗರ ಜತೆ ಜಿಲ್ಲಾಧಿಕಾರಿ ಸಭೆಯಲ್ಲಿ ನಿರ್ಧಾರ

ಕನ್ನಡಿಗರ ಹಿತ ರಕ್ಷಣೆಗೆ ಒತ್ತು

• **ಬೆಳಗಾವಿ:** ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತರಕ್ಷಣೆಗಾಗಿ ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಗಡಿ ಸಚಿವ ಎಚ್.ಕೆ.ಪಾಟೀಲ್ ಅವರ ಸೂಚನೆಯಂತೆ ಬೆಳಗಾವಿಯಲ್ಲಿ ಸುಮಾರು ಎರಡು ದಶಕಗಳ ನಂತರ ಗಡಿ ಕನ್ನಡಿಗರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ನಡುವೆ ಐತಿಹಾಸಿಕ ಸಭೆ ನಡೆದಿದ್ದು, ಸುಮಾರು 24 ಪ್ರಮುಖ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿರುವ ಸಭೆಯಲ್ಲಿ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತ ರಕ್ಷಣೆ ಹಾಗೂ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕೆಂದು ಗಡಿ ಸಚಿವರಾದ ಎಚ್.ಕೆ.ಪಾಟೀಲ ಅವರ ಸೂಚನೆಯಂತೆ ಮಹಾರಾಷ್ಟ್ರ ಗಡಿಯಲ್ಲಿರುವ ಕನ್ನಡಿಗರೊಂದಿಗೆ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಕರೆಯಲಾಗಿತ್ತು.

ಸುಮಾರು 23 ವರ್ಷಗಳ ಬಳಿಕ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮಹಾರಾಷ್ಟ್ರದ ಮಾಜಿ ಶಾಸಕ ವಿಕ್ರಮ್ ಸಾವಂತ್, ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ, ಸೇರಿದಂತೆ ಮಹಾರಾಷ್ಟ್ರ ಗಡಿಭಾಗದ ಕನ್ನಡಿಗರು ಭಾಗಿಯಾಗಿ ಸುಮಾರು 24 ಅಂಶಗಳ ಕುರಿತು ಸುದೀರ್ಘ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು, ಸುಮಾರು ತಿಂಗಳ ಹಿಂದೆ ಬೆಳಗಾವಿಯಲ್ಲಿರುವ ಮರಾಠಿ ಭಾಷಿಕರಿಗಾಗಿ ಒಂದು ಸಭೆ ಕರೆಯಲಾಗಿತ್ತು. ಅದರಂತೆ ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಸಮಸ್ಯೆಗಳನ್ನು ಅರಿಯಲು ಈ ಸಭೆ ಆಯೋಜಿಸಲಾಗಿದೆ. ಮಹಾರಾಷ್ಟ್ರದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರದಿಂದ ಒದಗಿಸಬಹುದಾದ ಹೆಚ್ಚಿನ ಸವಲತ್ತುಗಳು ಮತ್ತು ಕರ್ನಾಟಕದಲ್ಲಿರುವ ಮರಾಠಿ ಮಾಧ್ಯಮ ಶಾಲೆಗಳಿಗೆ ಕರ್ನಾಟಕ ಸರ್ಕಾರ ನೀಡುವ ಕುರಿತು ಚರ್ಚೆ ನಡೆದಿದೆ.

ಕರ್ನಾಟಕ ಸರ್ಕಾರದ ರಾಜ್ಯಮಟ್ಟದ ಯೋಜನೆಗಳನ್ನು ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ತಲುಪಿಸಲು ಚರ್ಚಿಸಲಾಗಿದೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಸೇರಿದಂತೆ ಗಡಿಭಾಗದಲ್ಲಿ ಸದಾ ಶಾಂತಿ ಮತ್ತು ಸೌಹಾರ್ದತೆಯಿರಬೇಕು. ಇದರಿಂದ ಸಮಸ್ಯೆ ಪರಿಹರಿಸಲು ಸಾಧ್ಯ. ಮತ್ತೆ 2-3 ಸುತ್ತಿನ ಸಭೆ ನಡೆಸಿ, ಸೂಕ್ತ ತೀರ್ಮಾನಗಳನ್ನು ಅಂತಿಮ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

> **ಕರ್ನಾಟಕ-ಮಹಾರಾಷ್ಟ್ರದ ಎರಡು ರಾಜ್ಯಗಳ ಸೌಹಾರ್ದತೆ ಕಾಪಾಡಲು ಬಂದಿರುವಾಗ ಬೆಳಗಾವಿಯಲ್ಲಿ ಕೆಲ ಸಂಘಟನೆಗಳು ಗಡಿ ವಿವಾದಕ್ಕಾಗಿ ಹೋರಾಡುತ್ತಿವೆ. ಮಾತೃಭಾಷೆಯ ಪ್ರೇಮ ಎಲ್ಲರಿಗೂ ಇರುವುದು ಸಹಜ. ಆದರೆ, ಅದಕ್ಕಿಂತ ಮೊದಲು ಬರುವುದು ಮಾನವೀಯತೆ. ಮಾನವೀಯ ಮೌಲ್ಯಗಳನ್ನು ಆಧರಿಸಿ ಅರಿತು ಬೆರೆತು ಬಾಳಬೇಕು.**
> ■ **ವಿಕ್ರಮ್ ಸಾವಂತ್,** ಮಹಾರಾಷ್ಟ್ರದ ಮಾಜಿ ಶಾಸಕ

ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಬಸ್ಸಿನ ವ್ಯವಸ್ಥೆ, ರಸ್ತೆ ಅಭಿವೃದ್ಧಿ, ನೀರಿನ ಸಮಸ್ಯೆ, ಸೇರಿದಂತೆ ಇನ್ನುಳಿದ ಸಮಸ್ಯೆಗಳನ್ನು ನಮ್ಮ ಮಟ್ಟದಲ್ಲಿ ಪರಿಹರಿಸಲು ಪ್ರಯತ್ನಿಸಲಾಗುವುದು. ನಮ್ಮ ಹಂತದಲ್ಲಿ ಸಾಧ್ಯವಾಗದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಜಿಲ್ಲಾಧಿಕಾರಿ ಭರವಸೆ ನೀಡಿದರು.

ಜತ್ ತಾಲೂಕಿನ ಕೆಲ ಹಳ್ಳಿಗಳು ನೀರಿನ ಸಮಸ್ಯೆಗೆ ಸೋತು ಕರ್ನಾಟಕಕ್ಕೆ ಸೇರುವ ಠರಾವನ್ನು ಪಂಚಾಯಿತಿಯಲ್ಲಿ ಪಾಸ್ ಮಾಡಿವೆ. ಈ ಕುರಿತು ಅರ್ಜಿಗಳು ಬಂದಲ್ಲಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಇನ್ನು ಮಹಾರಾಷ್ಟ್ರದ ಮಾಜಿ ಶಾಸಕರಾದ ವಿಕ್ರಮ್ ಸಾವಂತ್ ಅವರು ಈಗಾಗಲೇ ಗಡಿಭಾಗದ ಸಮಸ್ಯೆಗಳ ಕುರಿತು ಸಚಿವರಾದ ಎಚ್.ಕೆ.ಪಾಟೀಲ್ ಮತ್ತು ಎಂ.ಬಿ.ಪಾಟೀಲರನ್ನು ಭೇಟಿಯಾಗಿ ಗಮನ ಸೆಳೆಯಲಾಗಿತ್ತು.

ನಮ್ಮ ಕ್ಷೇತ್ರದಲ್ಲಿ ಶೇ.65ರಷ್ಟು ಕನ್ನಡಿಗರಿದ್ದು, ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಪ್ರಯತ್ನವಿದೆ. ಪ್ರಥಮವಾಗಿ ಶಿಕ್ಷಣ, ರಸ್ತೆ, ನೀರು, ಬಸ್, ಮೂಲಸೌಲಭ್ಯಗಳ ಕುರಿತು ಮಹತ್ವದ ಚರ್ಚೆಯಾಗಿದೆ. ಕರ್ನಾಟಕದ 865 ಹಳ್ಳಿಗಳಿಗೆ ಮಹಾರಾಷ್ಟ್ರದಿಂದ ವಿವಿಧ ಯೋಜನೆಗಳು ದೊರೆಯುತ್ತವೆಯೋ ಅದೇ ಮಾದರಿಯಲ್ಲಿ ಮಹಾರಾಷ್ಟ್ರದಲ್ಲಿರುವ 747 ಹಳ್ಳಿಗಳ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು. ಮಹಾರಾಷ್ಟ್ರ ಮತ್ತು ಕರ್ನಾಟಕದ ಜನರು ಮಾನವೀಯತೆಯ ದೃಷ್ಟಿಯಿಂದ ನೀರಿನ ನಿರ್ವಹಣೆಯಾಗಬೇಕು. ಜತ್, ಅಕ್ಕಲಕೋಟ್, ಸೋಲ್ಲಾಪುರಗಳಲ್ಲಿ ನೀರಿನ ಸಮಸ್ಯೆಯಿದ್ದು, ಮಳೆಗಾಲದಲ್ಲಿ ಕರ್ನಾಟಕದ ತುಬಚಿ-ಬಬಲೇಶ್ವರದಿಂದ ನೀರು ನೀಡಿ ಮತ್ತು ಬೇಸಿಗೆಯಲ್ಲಿ ತೆಗೆದುಕೊಳ್ಳುವ ನೀತಿಯನ್ನು ಅನುಸರಿಸಬೇಕಾಗಿದೆ. ಗಡಿಯಲ್ಲಿ ಶಿಕ್ಷಣ ಪಡೆದವರಿಗೆ ಶೇ.5ರಷ್ಟು ಮೀಸಲಾತಿ ಕರ್ನಾಟಕದಲ್ಲಿ ನೀಡಬೇಕು ಎಂದರು.

ಶಾಲೆ ಸ್ಥಾಪಿಸಲು ಸ್ವಂತ ಭೂಮಿ ಹೊಂದಿರಬೇಕು

• **ಬೆಂಗಳೂರು:** ರಾಜ್ಯದಲ್ಲಿ ಹೊಸದಾಗಿ ಪೂರ್ವ ಪ್ರಾಥಮಿಕದಿಂದ ಪ್ರೌಢಶಾಲೆಗಳನ್ನು ಸ್ಥಾಪಿಸಲು ಬಯಸುವ ಖಾಸಗಿ ಸಂಸ್ಥೆಗಳು ಕನಿಷ್ಠ 15 ವರ್ಷಗಳ ಕಾಲ ನೋಂದಾಯಿತ ಗುತ್ತಿಗೆ ಅಥವಾ ಸ್ವಂತ ಭೂಮಿಯನ್ನು ಹೊಂದಿರಬೇಕು ಎಂಬ ಕರಡು ನಿಯಮವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿದೆ.

ಈ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ) (ತಿದ್ದುಪಡಿ) ನಿಯಮಗಳು 2026 ರ ಕರಡನ್ನು ಸರ್ಕಾರ ಹೊರಡಿಸಿದೆ. ಹೊಸ ಕರಡಿನಂತೆ ಭೂ ಮಾಲೀಕತ್ವದ ಪುರಾವೆಯಾಗಿ ಶಿಕ್ಷಣ ಸಂಸ್ಥೆಗಳು ಇನ್ನು ಮುಂದೆ (ಪಹಣಿ), ಇ-ಖಾತಾ ಅಥವಾ ಖಾತಾ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಈ ಭೂಮಿಯು ಶಾಲಾ ಕಟ್ಟಡ ಮತ್ತು ಆಟದ ಮೈದಾನಕ್ಕೆ ಪೂರಕವಾಗಿರಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆದಿರಬೇಕು ಎಂದು ಸೂಚಿಸಲಾಗಿದೆ.

ಹಾಗೆಯೇ ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಬದಲಾವಣೆ ಅಥವಾ ಸ್ಥಳ ಬದಲಾವಣೆ) (ತಿದ್ದುಪಡಿ) ನಿಯಮಗಳು, 2026 ರ ಕರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಉರುಳಿಗೆ ಸಿಲುಕಿ ಹುಲಿ ಸಾವು

• **ಮೈಸೂರು:** ಉರುಳಿಗೆ ಸಿಲುಕಿ ಹುಲಿಯೊಂದು ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ನಾಗರಹೊಳೆ ಹುಲಿ ಮೀಸಲು ಅರಣ್ಯದ ಮೆಟ್ಟಿಕುಪ್ಪೆ ಶ್ರೇಣಿಯ ಬಳಿ ನಡೆದಿದೆ. ಹುಲಿ ಮೀಸಲು ಅರಣ್ಯದ ಗಡಿಯಿಂದ 300 ಮೀಟರ್ ದೂರದಲ್ಲಿರುವ ಆನಗಟ್ಟುಂಡಿಯ ಗಿರೀಶ್ ಎಂಬುವವರಿಗೆ ಸೇರಿದ ಖಾಸಗಿ ಹೊಲದ ಜಮೀನಿನಲ್ಲಿ ಕಾಡು ಹಂದಿಯನ್ನು ಬಲೆಗೆ ಬೀಳಿಸಲು ಬಲೆ ಹಾಕಲಾಗಿತ್ತು.

ಹಾವು ಕಡಿತ: ಸಾವು ಹೆಚ್ಚಳ

ಪುಟ 0➡ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಹಾವು ಕಡಿತ ಪ್ರಕರಣಗಳನ್ನು ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳನ್ನು ಘೋಷಿತ ಖಾಯಿಲೆ ಎಂದು ಘೋಷಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿರುವುದರಿಂದ, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳು ಕಡ್ಡಾಯವಾಗಿ ಕೇಂದ್ರ ಸರ್ಕಾರದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ ದಾಖಲು ಮಾಡುತ್ತಿರುತ್ತವೆ.

ಸರ್ಕಾರದ ಕ್ರಮಗಳು: ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ವರದಿ ಮಾಡುವುದು ಕಡ್ಡಾಯಗೊಳಿಸಲಾಗಿದೆ. ರಾಜ್ಯದಲ್ಲಿ ಈಗಾಗಲೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಆ್ಯಂಟಿ ಸ್ನೇಕ್ ವೆನಮ್ (ಎಎಸ್‌ವಿ) ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯೂ ಹಾವು ಕಡಿತಕ್ಕೆ ಚಿಕಿತ್ಸೆ ಹಾಗೂ ಕಡಿತದಿಂದ ಉಂಟಾಗುವ ಬೇರೆ ಬೇರೆ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯಾಧಿಕಾರಿಗಳು ಹಾಗೂ ಇತರೆ ಆರೋಗ್ಯ ಸಿಬ್ಬಂದಿ ವಿವಿಧ ಹಂತಗಳಲ್ಲಿ ಹಾವು ಕಡಿತ ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗಿದೆ. ಸಾಂಪ್ರದಾಯಿಕ/ನಾಟಿ ಚಿಕಿತ್ಸಕರಿಂದ ಹಾವು ಕಡಿತ ಪ್ರಕರಣಗಳು ಆಸ್ಪತ್ರೆ ಸೇರುವುದು ತಡವಾದಲ್ಲಿ ಅಥವಾ ಮರಣ ಹೊಂದಿದಲ್ಲಿ ಅವರ ಮೇಲೆ ಕೆಪಿಎಂಇ ಕಾಯ್ದೆ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸಲು ಸೂಚಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಮುಂಗಡ ಹಣಕ್ಕಾಗಿ ಒತ್ತಾಯಿಸದೆ ಹಾವು ಕಚ್ಚಿದ ಸಂತ್ರಸ್ತರಿಗೆ ತಕ್ಷಣ ಜೀವ ಉಳಿಸುವ ಚಿಕಿತ್ಸೆ ಒದಗಿಸುವಂತೆ ಆದೇಶಿಸಲಾಗಿದೆ.

> **ಹಾವು ಕಡಿತ ಮತ್ತು ಮರಣಗಳನ್ನು ತಡೆಗಟ್ಟಲು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯವು ವಿವಿಧ ಇಲಾಖೆಗಳು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ರಾಜ್ಯ ಕ್ರಿಯಾಯೋಜನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಸಂಬಂಧ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.**
> ■ **ದಿನೇಶ್ ಗುಂಡೂರಾವ್,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ

525 ಅಂಕಕ್ಕಿಳಿದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪುಟ 0➡ **ಯಾವುದೇ ತೃತೀಯ ಭಾಷೆಗೆ ಮಾತ್ರ ಗ್ರೇಡ್:** ಒಟ್ಟು 1,64,000 ವಿದ್ಯಾರ್ಥಿಗಳು ತೃತೀಯ ಭಾಷೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು, ಅದರಲ್ಲಿ 1,48,000 ವಿದ್ಯಾರ್ಥಿಗಳು ಕೇವಲ ಹಿಂದಿ ಭಾಷೆಯಲ್ಲಿಯೇ ಫೇಲ್ ಆಗಿರುವ ಆತಂಕಕಾರಿ ಅಂಶವನ್ನು ಸಚಿವರು ಮುಂದಿಟ್ಟಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಿಂದಿ, ಸಂಸ್ಕೃತ, ತುಳು, ಮರಾಠಿ, ಅರೇಬಿಕ್ ಸೇರಿದಂತೆ ಪಠ್ಯಕ್ರಮದಲ್ಲಿರುವ ಎಲ್ಲಾ ತೃತೀಯ ಭಾಷೆಗೆ ಕಡ್ಡಾಯವಾಗಿ ಪರೀಕ್ಷೆ ಬರೆಯಬೇಕಾಗಿದೆ. ಜತೆಗೆ ತೃತೀಯ ಭಾಷೆಯು ಕೇವಲ ಗ್ರೇಡಿಂಗ್ (ಎ,ಬಿ,ಸಿ,ಡಿ)ಗೆ ಮಾತ್ರ ಸೀಮಿತವಾಗಲಿದ್ದು, ವಾರ್ಷಿಕ ಅಂಕಗಳ ಪಟ್ಟಿಗೆ ಪರಿಗಣನೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

16 ವರ್ಷದೊಳಗಿನ ಮಕ್ಕಳಿಗೆ ಸೋಷಿಯಲ್ ಮೀಡಿಯಾ ನಿರ್ಬಂಧ: ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಭವಿಷ್ಯ ದೃಷ್ಟಿಯಲ್ಲಿಟ್ಟುಕೊಂಡು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸುವ ಮಹತ್ವದ ಪ್ರಸ್ತಾವನೆಯನ್ನು ಸದನದಲ್ಲಿ ಚರ್ಚಿಸಲಾಗಿದ್ದು, ಎಲ್ಲರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಈ ಸಮಸ್ಯೆಯು ಕೇವಲ ಸರ್ಕಾರದ ಮಟ್ಟದಲ್ಲಿ ಬಗೆಹರಿಯುವುದಿಲ್ಲ, ಪೋಷಕರು ತಮ್ಮ ಮಕ್ಕಳ ಮೊಬೈಲ್ ಬಳಕೆಯ ಮೇಲೆ ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎಂದು ಸಚಿವರು ಮನವಿ ಮಾಡಿದರು.

ಎಲ್ಲ ಪಠ್ಯಕ್ರಮ ಶಾಲೆಗೂ ಅನ್ವಯ

ಪುಟ 0➡ ಇಲಾಖೆಯಿಂದ ಸ್ಪಷ್ಟನೆ ದೊರೆತ ತಕ್ಷಣ ಈ ಕುರಿತಾದ ಗೊಂದಲಗಳು ಬಗೆಹರಿಯಲಿವೆ ಎಂದು ಸಚಿವರು ತಿಳಿಸಿದರು. ರಾಜ್ಯ ಶಿಕ್ಷಣ ನೀತಿಯ (ಎಸ್‌ಇಪಿ) ಶಿಫಾರಸುಗಳನ್ನು ಇನ್ನೂ ಸಚಿವ ಸಂಪುಟದ ಮುಂದೆ ಮಂಡಿಸಬೇಕಿದ್ದು, ಒಮ್ಮೆ ಅದನ್ನು ಮಂಡಿಸಿ ಅನುಮೋದನೆ ಪಡೆದ ನಂತರ, ನಾವು ಕಾಯಂ ಆಗಿ ಅನ್ವಯವಾಗುವ ಮಾರ್ಗಸೂಚಿಗಳು ಮತ್ತು ಆದೇಶವನ್ನು ಹೊರಡಿಸುತ್ತೇವೆ. ಜತೆಗೆ ಕಿಂಡರ್ ಗಾರ್ಟನ್ ಪ್ರವೇಶದ ವಯೋಮಿತಿಗೆ ಸಂಬಂಧಿಸಿದಂತೆ ಸರಿಯಾದ ಮಾರ್ಗಸೂಚಿಗಳಿಲ್ಲದ ಕಾರಣ, ಪೋಷಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನಾವು ಸ್ಪಷ್ಟತೆ ನೀಡಬೇಕಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ನೇಪಾಳ ಪ್ರಧಾನಿ ಆಗಿ ಬಾಲೇಂದ್ರ ಶಾ ಪ್ರಮಾಣ

ಪುಟ 0➡ **ಮೋದಿ ಅಭಿನಂದನೆ:** ಪ್ರಮಾಣವಚನ ಕಾರ್ಯಕ್ರಮ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು, ಬಾಲೇಂದ್ರ ಶಾ ಅವರನ್ನು ಅಭಿನಂದಿಸಿದ್ದಾರೆ. ಇದೇ ವೇಳೆ, ಭಾರತ-ನೇಪಾಳ ಸಂಬಂಧಗಳನ್ನು ಮುನ್ನಡೆಸಲು ತಮ್ಮ ನೇಪಾಳದ ಸಹವರ್ತಿಗಳೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ. ಪ್ರಧಾನಿ ಆಗಿ ನಿಮ್ಮ ಆಯ್ಕೆಯು ನೇಪಾಳದ ಜನರು ನಿಮ್ಮ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ಶಾಸಕರಿಗೆ ತಲಾ 2 ಐಪಿಎಲ್ ಟಿಕೆಟ್

ಪುಟ 0➡ ಸಭೆಯ ಬಳಿಕ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರಿಗೆ ಟಿಕೆಟ್ ಕೇಳುವ ಹಕ್ಕಿದೆ ಎಂದು ಹೇಳಿದ್ದಾರೆ. ಸರ್ಕಾರದ ಭಾಗವಾಗಿರುವ ಕಾರಣ ಅವರಿಗೆ ಅವಕಾಶ ಕಲ್ಪಿಸಬೇಕು ಎಂದರು. ಅಲ್ಲದೇ ಮೊದಲ ಪಂದ್ಯದ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿವೆ ಎಂದು ಕೆಎಸ್‌ಸಿಎ ಮಾಹಿತಿ ನೀಡಿದೆ. ಹೀಗಾಗಿ ಈ ಪಂದ್ಯಕ್ಕೆ ಪ್ರತಿ ಶಾಸಕರಿಗೆ ಹಾಗೂ ಸಂಸದರಿಗೆ ಎರಡು ಟಿಕೆಟ್ ನೀಡಲು ಸೂಚಿಸಿದ್ದು, ಅವರೂ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಎರಡು ಟಿಕೆಟ್ ನೀಡಲು ಒಪ್ಪಿದ ಕೆಎಸ್‌ಸಿಎ: ಚಿನ್ನಸ್ವಾಮಿ ಮೈದಾನದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ ಶಾಸಕರಿಗೆ 1+1 ಟಿಕೆಟ್ ನೀಡಲು ಕೆಎಸ್‌ಸಿಎ ಒಪ್ಪಿಕೊಂಡಿದೆ. ಈ ಕುರಿತು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪದಾಧಿಕಾರಿಗಳು ಸಿಎಂ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ, ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಆಹ್ವಾನ ನೀಡಿದ್ದಾರೆ. ಭೇಟಿಯ ವೇಳೆ ಸಿಎಂ ಶಾಸಕರಿಗೆ ಹೆಚ್ಚುವರಿ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದು, ನಾಲ್ಕು ಟಿಕೆಟ್ ಕೊಡಲು ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೆ ಕೆಎಸ್‌ಸಿಎ ಒಪ್ಪಿಗೆ ಸೂಚಿಸಿದ್ದು, ಈಗಾಗಲೇ ಮೊದಲ ಪಂದ್ಯದ ಟಿಕೆಟ್‌ಗಳು ಮಾರಾಟವಾಗಿರುವ ಹಿನ್ನೆಲೆಯಲ್ಲಿ ಶನಿವಾರದ ಪಂದ್ಯಕ್ಕೆ 1+1 ಟಿಕೆಟ್ ಹಾಗೂ ಮುಂದಿನ ಪಂದ್ಯಗಳಿಗೆ 4 ಟಿಕೆಟ್ ನೀಡುವುದಾಗಿ ಭರವಸೆ ನೀಡಿದೆ.

ಸುರಕ್ಷತೆ ಕುರಿತು ಸಿಎಸ್ ಸಭೆ

ಪುಟ 0➡ ಕ್ರಿಕೆಟ್ ಪ್ರೇಮಿಗಳ ಸುರಕ್ಷತೆಗೆ ಕ್ರೀಡಾಂಗಣದ ಒಳಗೆ ಮತ್ತು ಕ್ರೀಡಾಂಗಣದ ಸುತ್ತ ರೂಪಿಸಿರುವ ಭದ್ರತಾ ವ್ಯವಸ್ಥೆ, ನಗರದ ಸಂಚಾರ ವ್ಯವಸ್ಥೆಯಲ್ಲಿ ಮಾಡಿಕೊಳ್ಳಲಾಗಿರುವ ಬದಲಾವಣೆಗಳು, ಪಾರ್ಕಿಂಗ್ ವ್ಯವಸ್ಥೆ, ಕ್ರೀಡಾಂಗಣದ ಒಳಗೆ ಕುಡಿಯುವ ನೀರು ಸೇರಿದಂತೆ ಇತರೆ ಅತ್ಯಾವಶ್ಯಕ ಸಂಗತಿಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು. ಪಂದ್ಯಾವಳಿ ಆಯೋಜನೆಗೆ ಸರ್ಕಾರ ವಿಧಿಸಿರುವ ಷರತ್ತುಗಳು ಮತ್ತು ಎಚ್ಚರಿಕೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಭೆಯಲ್ಲಿ ಸೂಚನೆ ನೀಡಿದರು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಗಳು ಹೈ ಅಲರ್ಟ್ ಆಗಿರಬೇಕು. ಆಯಾ ಕ್ಷಣದ ಮಾಹಿತಿಗಳನ್ನು ಮೇಲಿನ ಅಧಿಕಾರಿಗಳಿಗೆ ನಿಯಮಿತವಾಗಿ ವಿನಿಮಯ ಮಾಡಿಕೊಳ್ಳಬೇಕು ಎನ್ನುವ ಸೂಚನೆಗಳನ್ನು ನೀಡಿದರು.

ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ

ಪುಟ 0➡ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಾದಿಕ್ ಪೈಲ್ವಾನ್ ಅವರು ನನಗೆ ಬಹಳ ವರ್ಷಗಳಿಂದ ಪರಿಚಿತರು. ಮೈಸೂರಿನ ಕುಸ್ತಿ ಅಖಾಡಗಳಲ್ಲಿ ಅವರು ಪಾಲ್ಗೊಂಡಾಗ ಭೇಟಿಯಾಗುತ್ತಿದ್ದೆ ಎಂದರು.

ಅಭ್ಯರ್ಥಿಯಾಗಬೇಕೆಂದು ಯಾವುದೇ ವ್ಯಕ್ತಿ ಬಯಸುವುದು ತಪ್ಪಲ್ಲ, ನಿನ್ನೆ 11 ಜನ ನಾಮಪತ್ರ ಹಿಂಪಡೆದಿದ್ದಾರೆ. ಪಕ್ಷದ ಕೋರಿಕೆ ಮೇರೆಗೆ ಸಾದಿಕ್ ಅವರು ಚುನಾವಣಾ ಕಣದಿಂದ ನಿವೃತ್ತರಾಗಿರುವುದಕ್ಕೆ ಅವರಿಗೆ ಧನ್ಯವಾದಗಳು. ಶಾಸಕರಾದ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್, ನಜೀರ್ ಅಹ್ಮದ್ ಅವರು ದಾವಣಗೆರೆಗೆ ಭೇಟಿ ನೀಡಿದ್ದರು. ಅವರು ತಲುಪುವುದು ತಡವಾದ್ದರಿಂದ ನಾಮಪತ್ರ ಸಲ್ಲಿಸುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ನಾನು ವಿಧಾನಪರಿಷತ್‌ನಲ್ಲಿ ಉತ್ತರ ನೀಡಬೇಕಿದ್ದರಿಂದ ಖುದ್ದು ಭೇಟಿ ಮಾಡಲಾಗಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಪಕ್ಷದ ಕಟ್ಟಾಳು; ನಿಷ್ಠಾವಂತ ಕಾರ್ಯಕರ್ತ: ಸಾದಿಕ್ ಪೈಲ್ವಾನ್ ಅವರು ಕಾಂಗ್ರೆಸ್‌ನಲ್ಲಿ ಸುಮಾರು 40 ವರ್ಷಗಳಿಂದ ಇದ್ದು, ಪಕ್ಷದ ಕಟ್ಟಾಳು. ದಾವಣಗೆರೆಯಲ್ಲಿ 70 ಸಾವಿರ ಮುಸ್ಲಿಂ ಮತದಾರರು ಇದ್ದಾರೆ. ಹೀಗಾಗಿ ಸಾದಿಕ್ ಟಿಕೆಟ್ ಆಕಾಂಕ್ಷಿ ಯಾಗಿದ್ದರು. ಹೈಕಮಾಂಡ್ ಇದನ್ನು ಪರಿಶೀಲಿಸಿ, ಮೃತರಾದವರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯಂತೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡಲಾಗಿದೆ ಎಂದರು.

ಸಾದಿಕ್ ಎದೆಯಲ್ಲಿ ಪಕ್ಷ ನಿಷ್ಠೆ: ಡಿಸಿಎಂ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ದಾವಣಗೆರೆ ವಿಷಯದಲ್ಲಿ ಕೆಲವರು ದೊಡ್ಡ ಆತಂಕ ತೋರಿಸುತ್ತಿದ್ದರು. ಆದರೆ, ನಮಗೆ ನಮ್ಮ ಸಿದ್ಧಾಂತದ ಮೇಲೆ ನಂಬಿಕೆಯಿತ್ತು. ಸಾದಿಕ್ ಪೈಲ್ವಾನ್ ಹುಟ್ಟು ಕಾಂಗ್ರೆಸ್ಸಿಗ. ಅವರ ಎದೆಯಲ್ಲಿ ಪಕ್ಷ ನಿಷ್ಠೆಯೇ ಕಾಣುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ತೊಂದರೆ ಆಗಬಾರದು ಎಂದು ಪೈಲ್ವಾನ್ ಒಪ್ಪಿಕೊಂಡಿದ್ದಾರೆ. ಮಲ್ಲಿಕಾರ್ಜುನ ಹಾಗೂ ಸಾದಿಕ್ ಪೈಲ್ವಾನ್ ಅಣ್ಣ ತಮ್ಮಂದಿರ ರೀತಿ ಇದ್ದವರು. ಪಕ್ಷವನ್ನು ಗೆಲ್ಲಿಸುತ್ತೇವೆ. ದೇಶಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕು ಎಂದು ಸಾದಿಕ್ ಪೈಲ್ವಾನ್ ತಿಳಿಸಿದ್ದಾರೆ. ಹೀಗಾಗಿ ಸಾದಿಕ್ ಪೈಲ್ವಾನ್ ಅವರನ್ನು ಅಭಿನಂದಿಸುತ್ತೇನೆ ಎಂದರು.

> **ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ನಾಡಿನಲ್ಲಿ ಕಾಂಗ್ರೆಸ್ ಆಡಳಿತ ಮಾಡಿಕೊಂಡು ಬಂದಿದೆ. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರ ನಡುವೆ ಒಡಕು ಬಂದರೆ ಹಿರಿಯರು ಸರಿ ಮಾಡ್ತಾರೆ. ನಾನು ನನ್ನ ಮನೆಗೆ ಬಂದಿದ್ದೇನೆ. ಬಂಡಾಯ ಸ್ಪರ್ಧೆಯಿಂದ ನಾನು ನಿವೃತ್ತಿ ಆಗಿದ್ದೇನೆ.**
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : Construction of Eight Class Rooms and others to Govt. Higher Primary School at Sathnoor village in Chittapur Taluka District Kalaburagi Indent No.RDPR/2025-26/BD/WORK_INDENT24736/CALL-2, 2) ಲೆಕ್ಕ ಶೀರ್ಷಿಕೆ: **2025-26 & 2026-27 ನೇ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮೈಕ್ರೋ ಯೋಜನೆ**, 3) ಟೆಂಡರಿಗಿಟ್ಟ ಅಂದಾಜು ಮೊತ್ತ : **ರೂ.1,10,20,891.22**, 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ್ ಫಾರಂ ಪಡೆಯುವ ದಿನಾಂಕ : **26.03.2026 ರಿಂದ 09.04.2026 ಸಾಯಂಕಾಲ 4.00 ಗಂಟೆವರೆಗೆ.** 6) ಟೆಂಡರ್ ಅರ್ಜಿ ಬೆಲೆ: ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ. 7) ಇ.ಎಂ.ಡಿ. : **ರೂ.2,00,000.00**, 8) ಟೆಂಡರ್ ಸಲ್ಲಿಸುವ ದಿನಾಂಕ: **26.03.2026 ರಿಂದ 09.04.2026 ಸಾಯಂಕಾಲ 4.00 ಗಂಟೆಯ ವರೆಗೆ**, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.04.2026 ಸಾಯಂಕಾಲ 4.00 ಗಂಟೆ** ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **13.04.2026 ಬೆಳಿಗ್ಗೆ 11.00 ಗಂಟೆ** ನಂತರ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಎದುರಿಗೆ, ಕುಸನೂರ ರಸ್ತೆ, ರಾಜಾಪುರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಕಲಬುರಗಿ

ವಾ.ಸಾ.ಸಂ./ವಾ.ಕಲಬುರಗಿ/1226/ದೊಡ್ಡಜಾಹೀರಾತು ಪಟ್ಟಿ/KMC/2025-26

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ

Pho: 08194-234488 Email:-eerdwsd.chd@gmail.com

ನಂ.ಗ್ರಾ.ಕು.ನೀ.ನೈ/ವಿ/ಚಿ/ಕಾ.ಇಂ/ಟಿ4/ಟೆಂಡರ್/2025-26/1855

ದಿನಾಂಕ: 27.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-03 ನಿಬಂಧನೆಗೊಳಪಟ್ಟಂತೆ, ಲೋಕೋಪಯೋಗಿ ಇಲಾಖೆ ಇವರಲ್ಲಿ ನೋಂದಾಯಿತ ಅರ್ಹ ದರ್ಜೆಯ ನೋಂದಣಿ ಮಾಡಿದ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಜೆ.ಜೆ.ಎಂ ಯೋಜನೆಯಡಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವ್ಯಾಪ್ತಿಯ 01 ಕಾಮಗಾರಿಗಳಿಗೆ ರೂ. 63.76 ಲಕ್ಷಗಳಿಗೆ ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 13.04.2026 ಸಂಜೆ 4-00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15.04.2026 ರ ಸಂಜೆ 4-30 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2026 ಬೆಳಗ್ಗೆ 11-00 ಗಂಟೆಗೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.ನೈ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/
805/2025-26

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಎಸ್.ಸಿ.ಪಿ.ಟಿ.ಎಸ್.ಪಿ/ಶಾಸ-1/2025-26/2272 ದಿನಾಂಕ:26.03.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-2 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) 2ನೇ ಕರೆ

1) **ಕಾಮಗಾರಿಗಳ ವಿವರ:** ಯಾದಗಿರಿ ತಾಲೂಕಿನ ಬಬ್ಬೇಪಲ್ಲಿ ಗ್ರಾಮದ ಪರಿಜನವಾಡಾದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ:RDPR/2025-26/RD/WORK_INDENT23232/CALL-2 SC Bidders Only **2) ಲೆಕ್ಕ ಶೀರ್ಷಿಕೆ:** 2025-26ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 50.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 27.03.2026 ರಿಂದ 07.04.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 07.04.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 09.04.2026 ಬೆಳಿಗ್ಗೆ 11:00 ನಂತರ **9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸೂಚನೆ :- ಟೆಂಡರರಿಗೆಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/614/ಕೆ.ಎಸ್.ಎಂ.ಸಿ.ಎ/2025-26

ಕಿರುಸುದ್ದಿ

ಟಿಕೆಟ್‌ಗಾಗಿ ವಿಜಯೇಂದ್ರಗೆ ಹರೀಶ್ ಮನವಿ

ಬೆಂಗಳೂರು : ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಕೆ.ಹರೀಶ್ ಅವರು ಮುಂಬರುವ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣಾ ಟಿಕೆಟ್‌ಗಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು. ಕೆ.ಹರೀಶ್ ಅವರು ಮುಂಬರುವ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಭಾರತೀಯ ಜನತಾ ಪಾರ್ಟಿಯ ಅಧಿಕೃತ ಅಭ್ಯರ್ಥಿಯಾಗಿ ಸ್ಪರ್ಧಿಸಲು ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ. ಈ ಕುರಿತು ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಅವರಿಗೆ ಅಧಿಕೃತವಾಗಿ ಮನವಿ ಪತ್ರವನ್ನು ಸಲ್ಲಿಸಿ, ತಮಗೆ ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಮನವಿ ಮಾಡಿದರು. ವೃತ್ತಿಯಲ್ಲಿ ಎಲೆಕ್ಟ್ರಾನಿಕ್ ಇಂಜಿನಿಯರ್ ಆಗಿರುವ ಹರೀಶ್ ಅವರು ದೇಶದ ಹೆಮ್ಮೆಯ ಇಸ್ರೋ (ಐಎಸ್ಆರ್‌ಒ) ಸಂಸ್ಥೆಯಲ್ಲಿ 17 ವರ್ಷಗಳ ಕಾಲ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ ಅಪಾರ ಅನುಭವ ಹೊಂದಿದ್ದಾರೆ. ಬಾಲ್ಯದಿಂದಲೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಕ್ರಿಯ ಸ್ವಯಂಸೇವಕರಾಗಿರುವ ಇವರು, ಸಂಘದ ಸೇವಾ ಮತ್ತು ಬೌದ್ಧಿಕ ವಿಭಾಗಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸುವುದರ ಜತೆಗೆ ರಾಮಜನ್ಮಭೂಮಿ ಚಳುವಳಿ ಹಾಗೂ ರಾಮಮಂದಿರ ನಿರ್ಮಾಣದ ನಿಧಿ ಸಂಗ್ರಹಣೆಯಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಗಿರಿಜಾ ಲೋಕೇಶ್‌ಗೆ ರಾಜಕುಮಾರ್ ಪ್ರಶಸ್ತಿ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2026ನೇ ಸಾಲಿನ ವರನಟ ಡಾ.ರಾಜಕುಮಾರ್ ಪ್ರಶಸ್ತಿಗೆ ರಂಗಭೂಮಿ ಹಾಗೂ ಚಿತ್ರರಂಗದ ಹಿರಿಯ ಕಲಾವಿದೆ ಗಿರಿಜಾ ಲೋಕೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು 25 ಸಾವಿರ ರೂ. ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಏ.13ರಂದು ಸಂಜೆ 5.15 ಕ್ಕೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ರವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಿರಿಯ ಕನ್ನಡ ಹೋರಾಟಗಾರ ಸಾ.ರಾ.ಗೋವಿಂದು ರವರು ಅಧ್ಯಕ್ಷತೆ ವಹಿಸಲಿದ್ದು, ನವಯುಗ ಹೋಟೆಲ್ ಮಾಲೀಕ ಕೆ.ಮೋಹನರಾವ್ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ. ಗಿರಿಜಾ ಲೋಕೇಶ್ ಅವರು ಕಳೆದ 6 ದಶಕಗಳಿಗೂ ಹೆಚ್ಚು ಕಾಲ ರಂಗಭೂಮಿ ಮತ್ತು ಕನ್ನಡ ಚಿತ್ರರಂಗದಲ್ಲಿ ತಮ್ಮ ಕಲಾ ಪ್ರತಿಭೆಯಿಂದ, 200 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ಗಮನಾರ್ಹ ಅಭಿನಯಿಸಿದ್ದಾರೆ. ಪ್ರಭಾತ್ ಶಿಶುವಿಹಾರ, ರಂಗಸಂಪದ, ನಟರಂಗ ಮುಂತಾದ ಜನಪ್ರಿಯ ನಾಟಕ ತಂಡಗಳಲ್ಲಿ 1000ಕ್ಕೂ ಹೆಚ್ಚು ನಾಟಕಗಳಲ್ಲಿ ಸ್ಮರಣೀಯ ಅಭಿನಯ ನೀಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಆಕಸ್ಮಿಕ ಬೆಂಕಿ; ಪ್ರಯಾಣಿಕರು ಪ್ರಾಣಾಪಾಯದಿಂದ ಪಾರು

ಬೆಂಗಳೂರು: ಮೆಜೆಸ್ಟಿಕ್‌ನಿಂದ ಶಿವಮೊಗ್ಗಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನ ಜಾಗರೂಕತೆಯಿಂದಾಗಿ ಬಸ್ಸಿನಲ್ಲಿದ್ದ ಎಲ್ಲಾ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗುರುವಾರ ರಾತ್ರಿ ಸುಮಾರು 10.20ರ ಸಮಯದಲ್ಲಿ ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರಯಾಣಿಕರನ್ನು ಹೊತ್ತು ಶಿವಮೊಗ್ಗಕ್ಕೆ ಹೊರಟಿದ್ದ ಬಸ್, ಮೆಜೆಸ್ಟಿಕ್ ದಾಟಿ ಲುಲು ಮಾಲ್ ಮುಂಭಾಗ ಬರುತ್ತಿದ್ದಾಗ ಇಂಜಿನ್ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬಸ್ಸಿನಿಂದ ಹೊಗೆ ಬರುತ್ತಿರುವುದನ್ನು ಗಮನಿಸಿದ ದಾರಿಹೋಕರೊಬ್ಬರು ತಕ್ಷಣ ಬಸ್ ಚಾಲಕನಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಎಚ್ಚೆತ್ತ ಚಾಲಕ, ತಕ್ಷಣವೇ ಬಸ್ಸನ್ನು ರಸ್ತೆ ಬದಿಗೆ ನಿಲ್ಲಿಸಿ ಪ್ರಯಾಣಿಕರೆಲ್ಲರೂ ಕೆಳಗಿಳಿಯುವಂತೆ ಸೂಚಿಸಿದ್ದಾರೆ. ಪ್ರಯಾಣಿಕರು ಬಸ್ಸಿನಿಂದ ಕೆಳಗಿಳಿದ ಕೆಲವೇ ಕ್ಷಣಗಳಲ್ಲಿ ಬೆಂಕಿ ಇಡೀ ಬಸ್ಸನ್ನು ಆವರಿಸಿಕೊಂಡು ಹೊತ್ತಿ ಉರಿದಿದೆ. ಚಾಲಕ ಮತ್ತು ನಿರ್ವಾಹಕರ ಈ ತ್ವರಿತ ನಿರ್ಧಾರದಿಂದಾಗಿ ಯಾವುದೇ ಜೀವಹಾನಿ ಸಂಭವಿಸದೆ ದೊಡ್ಡ ಮಟ್ಟದ ದುರಂತವೊಂದು ತಪ್ಪಿದಂತಾಗಿದೆ. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು.

---

10 ದಿನಗಳ ಬ್ರಹ್ಮೋತ್ಸವದಲ್ಲಿ 4ನೇ ದಿನ ನಡೆಯಲಿದೆ ವೈರಮುಡಿ | ಹಲವು ವೈಶಿಷ್ಟ್ಯಗಳ ಸಂಗಮ

ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ

ಸೌಮ್ಯ ಸಂತಾನಂ ಮೇಲುಕೋಟೆ

ಮೇಲುಕೋಟೆ: ಸ್ಮಾರಕಗಳ ತವರೂರು, ಪ್ರಕೃತಿಯ ಸುಂದರ ತಾಣ, ದೇವಾಲಯಗಳ ಪಟ್ಟಣ. ಇದು ದಕ್ಷಿಣಭಾರತದ ಪ್ರಮುಖ ಶ್ರೀವೈಷ್ಣವ ಕ್ಷೇತ್ರ, ಭಾರತ ಕಂಡ ಸಮಾನತೆಯ ಹರಿಕಾರರಾದ ಭಗವದ್ ರಾಮಾನುಜಾಚಾರ್ಯರ ಕರ್ಮಭೂಮಿ. ಕೃತಯುಗದಲ್ಲಿ ನಾರಾಯಣಾದ್ರಿ, ತ್ರೇತಾ ಯುಗದಲ್ಲಿ ವೇದಾದ್ರಿ, ದ್ವಾಪರ ಯುಗದಲ್ಲಿ ಯಾದವಾದ್ರಿ, ಕಲಿ ಯುಗದಲ್ಲಿ ಯತಿಶೈಲವೆಂದೂ ಸಮಸ್ತ ಯುಗಗಳಲ್ಲಿ ದಕ್ಷಿಣ ಬದರೀಕಾಶ್ರಮವೆಂದೇ ಪ್ರಖ್ಯಾತವಾದ ದಿವ್ಯಕ್ಷೇತ್ರದ ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಕೋಟೆಯ ನಂತರ ಮೇಲುಕೋಟೆ ಎಂದು ಹೆಸರಾಗಿದೆ.

ಇಂತಹ ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವದ ಪುಣ್ಯಕ್ಷೇತ್ರದಲ್ಲಿ ನೆಲೆಸಿರುವ ಚೆಲುವನಾರಾಯಣ ಸ್ವಾಮಿಯ ದರ್ಶನ ಮಾತ್ರದಿಂದಲೇ ಎಲ್ಲಾ ವಿಧವಾದ ದೋಷಗಳೂ ಪರಿಹಾರವಾಗಿ ಇಷ್ಟಾರ್ಥಗಳು ಸಿದ್ಧಿಸುತ್ತದೆ ಎಂಬ ಮಾಹಿತಿ ಪುರಾಣಗಳಲ್ಲಿ ಲಭಿಸುತ್ತವೆ. ಇಲ್ಲಿ ಮೂರು ಬ್ರಹ್ಮೋತ್ಸವಗಳು ನಡೆಯುತ್ತವೆಯಾದರೂ ಈ ಪೈಕಿ ವೈರಮುಡಿ ಬ್ರಹ್ಮೋತ್ಸವ ವಿಶ್ವವಿಖ್ಯಾತವಾಗಿದೆ. ಹತ್ತು ದಿನಗಳ ಬ್ರಹ್ಮೋತ್ಸವದಲ್ಲಿ ವೈರಮುಡಿ 4ನೇ ದಿನ ನಡೆಯುತ್ತದೆ. ಶನಿವಾರ ಚೆಲುವನಾರಾಯಣಸ್ವಾಮಿಗೆ ವೈರಮುಡಿ ಉತ್ಸವ ರಾತ್ರಿ 8ಕ್ಕೆ ಆರಂಭವಾಗಿ ತಡರಾತ್ರಿ 4ರವರೆಗೆ ನಡೆಯಲಿದೆ.

ಮಹಾವಿಷ್ಣುವಿನ ಸ್ವಯಂವ್ಯಕ್ತವಾದ ಕ್ಷೇತ್ರಗಳಾದ ತಿರುಪತಿ, ಕಂಚಿ ಮುಂತಾದ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಗರುಡೋತ್ಸವಕ್ಕೆ ಪ್ರಾಶಸ್ತ್ಯ. ಇಲ್ಲೂ ಸಹ ಗರುಡೋತ್ಸವವೇ ಆದ ವೈರಮುಡಿ ಉತ್ಸವ ವಿಶೇಷ. ಹಲವು ವೈಶಿಷ್ಟ್ಯಗಳ ಸಂಗಮವಾದ ವೈರಮುಡಿ ಉತ್ಸವ ಲಕ್ಷಾಂತರ ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಒಂದು ರಾತ್ರಿ ಮಾತ್ರ ನಡೆಯುವ ಉತ್ಸವಕ್ಕೆ ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವದ ಹಿನ್ನೆಲೆಯಿದೆ.

ವೈರಮುಡಿ ಜಾತ್ರೆಯ ಸಂಬಂಧ ಪುರಾಣಗಳ ಪ್ರಕಾರ ತ್ರೇತಾ ಯುಗದಿಂದಲೇ ಆರಂಭವಾಗುತ್ತದೆ. ಅದು ಅತ್ಯಂತ ಪವಿತ್ರ ದಿನವಾದ ಫಾಲ್ಗುಣ ಮಾಸದ ಪುಷ್ಯ ನಕ್ಷತ್ರದ ಶುಭದಿನ, ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಗೊತ್ತುಮಾಡಿದ ದಿನಗಳವು. ದಶರಥ ಮಹಾರಾಜನ ಅರಮನೆಯಲ್ಲಿ ಸಡಗರ, ಸಂಭ್ರಮದ ವಾತಾವರಣ ತುಂಬಿತ್ತು. ಕೈಕೇಯಿಯ ಹಠಮಾರಿತನದ ಕಾರಣ ಇಡೀ ಅರಮನೆಯ ಚಿತ್ರಣ ಒಂದೇ ರಾತ್ರಿಯಲ್ಲಿ ಬದಲಾಗಿಹೋಯಿತು. ಪರಿಣಾಮ ರಾಮಚಂದ್ರನ ನಿರೀಕ್ಷಿತ ಪಟ್ಟಾಭಿಷೇಕ ನಡೆಯಲಿಲ್ಲ, ಇದಕ್ಕಾಗಿ ಕಾದಿದ್ದ ರಾಮನ ಸಹೋದರ ಲಕ್ಷ್ಮಣನಿಗೆ ತುಂಬಾ ನಿರಾಸೆಯಾಯಿತು.

ಬ್ರಹ್ಮೋತ್ಸವದ ಪ್ರಮುಖ ಉತ್ಸವಗಳು

- ಮಹಾರಥೋತ್ಸವ
- ತೆಪ್ಪೋತ್ಸವ
- ಅವಭೃತ, ಪಟ್ಟಾಭಿಷೇಕ
- ಮಹಾಭಿಷೇಕ

ದಿಗಂತ ವಿಶೇಷ

ರಾಮಾನುಜರೇ ಆದಿಶೇಷ

ಶ್ರೀಮನ್ನಾರಾಯಣನ ಯೋಗವಿಹಾರದ ಕೈಂಕರ್ಯದ ಸೇವಕ ಆದಿಶೇಷನೇ ಸ್ವಾಮಿಯ ಸೇವೆ ಮಾಡಲು ಸಹೋದರನಂತೆ ಅವತಾರವಾಗಿದ್ದ ಲಕ್ಷ್ಮಣ, ದ್ವಾಪರದಲ್ಲಿ ಬಲರಾಮನಾಗಿ ಶ್ರೀಕೃಷ್ಣನ ಜೊತೆಯಲ್ಲೇ ಇದ್ದ ಆದಿಶೇಷ ಮುಂದೆ ಕಲಿ ಯುಗದಲ್ಲಿ ರಾಮಾನುಜರಾಗಿ ಹುಟ್ಟಿದ್ದಾರೆ. 12ನೇ ಶತಮಾನದಲ್ಲಿ ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿದರು. ಉತ್ಸವ ಬ್ರಹ್ಮೋತ್ಸವಗಳನ್ನು ವಿಸ್ತರಿಸಿದರು. ಶ್ರೀರಾಮಚಂದ್ರನ ಆರಾಧ್ಯದೈವವಾದ ಮೇಲುಕೋಟೆಯ ಚೆಲುವರಾಯನಿಗೆ ಶ್ರೀ ರಾಮಚಂದ್ರನ ಪಟ್ಟಾಭಿಷೇಕಕ್ಕೆ ನಿಗದಿಯಾದ ಅದೇ ಫಾಲ್ಗುಣ ಮಾಸದ ಪುಷ್ಯ ನಕ್ಷತ್ರದಂದೇ ವೈರಮುಡಿ ಕಿರೀಟ ಧರಿಸುವ ಮೂಲಕ ಲಕ್ಷ್ಮಣನಾದ. ರಾಮಾನುಜಾಚಾರ್ಯರು ತಮ್ಮ ಮನೋಭಿಲಾಷೆ ಈಡೇರಿಸಿಕೊಂಡು ಸಂಭ್ರಮಿಸಿದರೆಂಬುದು ಪುರಾಣ ಹೇಳುವ ಸಂಗತಿ. ಮೇಲುಕೋಟೆ ದೇವಾಲಯದಲ್ಲಿ ನಡೆಯುವ ಎಲ್ಲಾ ಉತ್ಸವಗಳಲ್ಲೂ ಅತ್ಯಂತ ಪ್ರಮುಖವಾದ ಮತ್ತು ಪ್ರಸಿದ್ಧವಾದ ವೈರಮುಡಿ ಕಿರೀಟಧಾರಣ ಮಹೋತ್ಸವದಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಳ್ಳುತ್ತಾರೆ. ಒಟ್ಟಾರೆ ಭಾರತದ ಅತ್ಯಂತ ಪುರಾತನ ಆಭರಣಗಳಲ್ಲಿ ವೈರಮುಡಿ ಪ್ರಮುಖವಾಗಿದ್ದು ಐತಿಹಾಸಿಕ ಜಾತ್ರಾಮಹೋತ್ಸವವೂ ಆಗಿದೆ.

ಸಾಕ್ಷಾತ್ ಭಗವಂತನ ಕಿರೀಟವೇ 'ವೈರಮುಡಿ'

ವರ್ಷಕ್ಕೊಮ್ಮೆ ಒಂದು ರಾತ್ರಿ ಮಾತ್ರ ಚೆಲುವನಾರಾಯಣ ಸ್ವಾಮಿಯನ್ನು ಅಲಂಕರಿಸುವ ವೈರಮುಡಿ ಸಾಕ್ಷಾತ್ ಭಗವಂತನ ಕಿರೀಟವೆಂದೇ ನಂಬಲಾಗಿದೆ. ದ್ವಾಪರ ಯುಗದಲ್ಲಿ ವೈಕುಂಠದಿಂದ ಯೋಗನಿದ್ರೆಯಲ್ಲಿದ್ದ ನಾರಾಯಣನ ಕಿರೀಟವನ್ನು ರಾಕ್ಷಸ ವಿರೋಚನ ಅಪಹರಿಸಿ ಪಾತಾಳದಲ್ಲಿ ಅಡಗಿಸಿಟ್ಟನಂತೆ, ಇದನ್ನು ತಿಳಿದ ಗರುಡ ರಾಕ್ಷಸನೊಡನೆ ಹೋರಾಡಿ ಕಿರೀಟವನ್ನು ಮರಳಿ ತರುವಾಗ ಭೂಲೋಕದಲ್ಲಿ ಕೃಷ್ಣನ ಅವತಾರವಾಗಿದ್ದನ್ನು ಕಂಡು ಅಲ್ಲಿಗೆ ತೆರಳಿದಾಗ ಕೃಷ್ಣ ಭೂಲೋಕದ ಭಕ್ತರಿಗೂ ಕಿರೀಟದ ದರ್ಶನ ಭಾಗ್ಯ ದೊರೆಯಲೆಂದು ಯಾವುದಾದರೂ ವಿಷ್ಣುವಿನ ದೈವಸ್ಥಾನಕ್ಕೆ ನೀಡಲು ಸೂಚಿಸುತ್ತಾನೆ. ಪ್ರಯತ್ನಿಸಿದ ಗರುಡನಿಗೆ ಫಲ ದೊರೆಯಲಿಲ್ಲ, ಕೊನೆಯ ಪ್ರಯತ್ನವೆಂಬಂತೆ ಯದುಗಿರಿಯ ಶ್ರೀ ಚೆಲುವರಾಯನಿಗೆ ಸಮರ್ಪಿಸುತ್ತಾನೆ. ತಕ್ಷಣ ಅಷ್ಟು ದೊಡ್ಡ ಕಿರೀಟ ಸ್ವಾಮಿಗೆ ಹೇಳಿ ಮಾಡಿಸಿದಂತೆ ಸರಿಹೊಂದಿತು. ಆನಂದಪರವಶನಾದ ಗರುಡ ಚೆಲುವನಾರಾಯಣ ಸ್ವಾಮಿಯನ್ನು ಹೆಗಲ ಮೇಲೆ ಹೊತ್ತು ಕುಣಿದಾಡಿದ ಈ ಕಾರಣಕ್ಕಾಗಿಯೇ ಶ್ರೀದೇವಿ, ಭೂದೇವಿಯರೊಂದಿಗೆ ಗರುಡಾರೂಢನಾದ ಚೆಲುವನಾರಾಯಣನಿಗೆ ವೈರಮುಡಿ ಧರಿಸಿ ಉತ್ಸವ ನೆರವೇರಿಸಲಾಗುತ್ತದೆ ಎಂಬುದು ಪುರಾಣ ನೀಡುವ ವಿವರಣೆ.

ಜಾತ್ರೆ ಅವಧಿಯಲ್ಲಿ ಚೆಲುವರಾಯನನ್ನು ಅಲಂಕರಿಸುವ ಮತ್ತೊಂದು ವಜ್ರಖಚಿತ ಕಿರೀಟ ರಾಜಮುಡಿಯನ್ನು ಮೈಸೂರು ಅರಸರಾದ ರಾಜ ಒಡೆಯರ್ ಸಮರ್ಪಿಸಿದ್ದಾರೆ. ಈ ಕಿರೀಟಗಳೊಂದಿಗೆ ಶಂಖ, ಚಕ್ರ, ಗದಾ, ಪದ್ಮ ಸೇರಿದಂತೆ 16 ವಜ್ರಖಚಿತ ಆಭರಣಗಳನ್ನೂ ನೀಡಿದ್ದು, ವೈರಮುಡಿ ಬ್ರಹ್ಮೋತ್ಸವದಲ್ಲಿ ಸ್ವಾಮಿಯನ್ನು ಅಲಂಕರಿಸುತ್ತದೆ ಇದರೊಂದಿಗೆ ಅಪೂರ್ವ ಮುತ್ತು ಮುಡಿಕಿರೀಟ ಹಾಗೂ ಮುತ್ತಿನ ಹಾರಗಳು ಸ್ವಾಮಿಯ ಚೆಲುವನ್ನು ಇಮ್ಮಡಿಗೊಳಿಸುತ್ತವೆ.

ಚೆಲುವರಾಯಸ್ವಾಮಿ ಆಭರಣಗಳು

ಚೆಲುವರಾಯ ಆಭರಣ ಮತ್ತು ಅಲಂಕಾರಪ್ರಿಯ ವರ್ಷದಲ್ಲಿ ಮೂರು ಬ್ರಹ್ಮೋತ್ಸವಗಳು ಇಲ್ಲಿ ನಡೆಯುತ್ತವೆ. ಹಾಗಾಗಿ ಮೂರು ಅಪೂರ್ವವಾದ ವಜ್ರದ ಕಿರೀಟಗಳು ಸ್ವಾಮಿಯನ್ನು ಅಲಂಕರಿಸುತ್ತವೆ. ಸಾಕ್ಷಾತ್ ಭಗವಂತನ ಕಿರೀಟವೆಂದೇ ನಂಬಲಾದ ವೈರಮುಡಿ, ಮೈಸೂರು ರಾಜ ಒಡೆಯರ್ ಸಮರ್ಪಿಸಿರುವ ರಾಜಮುಡಿ ಕಿರೀಟ, ಗಂಡಭೇರುಂಡ ಪದಕ, ಶಂಖ, ಚಕ್ರ, ಗದೆ, ಪದ್ಮಪೀಠ, ಕರ್ಣಕುಂಡಲ ಸೇರಿದಂತೆ ವಜ್ರಖಚಿತವಾದ 16 ಆಭರಣಗಳು ಹಾಗೂ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಸಮರ್ಪಿಸಿದ ಶ್ರೀಕೃಷ್ಣರಾಜ ಮುಡಿಕಿರೀಟ, ಗಂಡಭೇರುಂಡ ಪದಕ ಪ್ರಮುಖ ಐತಿಹಾಸಿಕ ಆಭರಣಗಳಾಗಿವೆ. ಇದಲ್ಲದೆ ಮುತ್ತುಮುಡಿ ಕಿರೀಟ, ಮುತ್ತಿನ ಹಾರಗಳು, ಸೇರಿ 52 ಆಭರಣಗಳು ಅಹೋಬಿಲಮಠದ ಶ್ರೀಗಳು ಅರ್ಪಿಸಿರುವ ಬಂಗಾರದ ಆಕರ್ಷಕ ಕಿರೀಟ, ಭಕ್ತರು ಸಮರ್ಪಿಸಿರುವ ಒಡವೆಗಳು ಚೆಲುವನಾರಾಯಣನನ್ನು ಅಲಂಕಾರ ಮಾಡುವ ಪ್ರಮುಖ ಆಭರಣಗಳಾಗಿವೆ.

ವೈರಮುಡಿಯಂದು ಕಾರ್ಯಕ್ರಮಗಳೇನು: ಸಂಜೆ 5ಕ್ಕೆ ಮಂಡ್ಯದಿಂದ ಬರುವ ವೈರಮುಡಿ-ರಾಜಮುಡಿ ತಿರುವಾಭರಣ ಪೆಟ್ಟಿಗೆಗಳನ್ನು ಬಂಗಾರ ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ, 6-30 ರಾಜಮುಡಿ ಕಿರೀಟದ ಪಾರ್ಕಾವಣೆ, 7-45 ಸುಮಾರಿಗೆ ಗರುಡದೇವನ ಮೆರವಣಿಗೆ, 8 ಮಹಾಮಂಗಳಾರತಿ ವೈರಮುಡಿ ಉತ್ಸವ ಮೆರವಣಿಗೆ ಆರಂಭ, ತಡರಾತ್ರಿ, 3-30ರ ನಂತರ ರಾಜಮುಡಿ ಉತ್ಸವ.

ಮೊದಲ, ಎರಡನೇ ಹಂತದ 24 ಕೋಟಿ ಕಾಮಗಾರಿಗೆ ಚಾಲನೆ: ಶಾಸಕ ಶ್ರೀನಿವಾಸ್

ಕೆಂಪಲಿಂಗನಹಳ್ಳಿ-ಬಾಣವಾಡಿ ದ್ವಿಪಥ ರಸ್ತೆ ಅಭಿವೃದ್ಧಿ

ನೆಲಮಂಗಲ ತಾಲೂಕಿನ ಕೆಂಪಲಿಂಗನಹಳ್ಳಿ ಗ್ರಾಮದಲ್ಲಿ ಮೊದಲ ಹಂತದ 12ಕೋಟಿ ಅನುದಾನದ ದ್ವಿಪಥ ರಸ್ತೆಯ ಕಾಮಗಾರಿಗೆ ಶಾಸಕ ಎನ್.ಶ್ರೀನಿವಾಸ್ ಚಾಲನೆ ನೀಡಿದರು.

ಕಾಮಗಾರಿಗೆ ಚಾಲನೆ

ಪಿಡಬ್ಲ್ಯೂಡಿ ಇಲಾಖೆಯ ರಸ್ತೆಯಾದ ಕೆಂಪಲಿಂಗನಹಳ್ಳಿ - ಬಾಣವಾಡಿ ಮುಖ್ಯರಸ್ತೆಯ ಮೊದಲ ಹಂತವಾಗಿ 3.6 ಕಿ.ಮೀ.ನ 12 ಕೋಟಿ ಅನುದಾನ ಕಾಮಗಾರಿಗೆ ಬೆನಕಾ ಕಂಪನಿಗೆ ಟೆಂಡರ್ ಆಗಿದ್ದು ಕೆಲಸದ ಆದೇಶ ಸಹ ದೊರಕಿದೆ.
ಮುಂದಿನ 5 ಕಿ.ಮೀ. ರಸ್ತೆಗೆ ಸೇತುವೆ ಸೇರಿದಂತೆ 12ಕೋಟಿ ಅನುದಾನಕ್ಕೆ ಆದೇಶವಾಗಿದ್ದು ಮುಂದಿನ ಪ್ರಕ್ರಿಯೆ ಆರಂಭವಾಗಿದೆ ಈ ಎರಡು ಕಾಮಗಾರಿಗೆ ಭೂಮಿ ಪೂಜೆ ಮಾಡುವ ಮೂಲಕ ಶಾಸಕ ಎನ್. ಶ್ರೀನಿವಾಸ್ ಚಾಲನೆ ನೀಡಿದರು.

ನೆಲಮಂಗಲ: ಕೆಂಪಲಿಂಗನಹಳ್ಳಿ-ಬಾಣವಾಡಿ ಮುಖ್ಯರಸ್ತೆಯನ್ನು ದ್ವಿಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸಿದ್ದು ಒಂದು ಮತ್ತು ಎರಡನೇ ಹಂತದ 24 ಕೋಟಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಒಟ್ಟಾರೆ 50ರಿಂದ 60ಕೋಟಿ ಅನುದಾನದಲ್ಲಿ 14 ಕಿ.ಮೀ. ರಸ್ತೆ ಕಾಮಗಾರಿ ಪೂರ್ಣವಾಗಲಿದೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಹನುಮಂತೇಗೌಡನಪಾಳ್ಯ ಹಾಗೂ ಕೆಂಪಲಿಂಗನಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ 75ರಿಂದ ಕೆಂಪಲಿಂಗನಹಳ್ಳಿ ಮಾರ್ಗವಾಗಿ ಬಾಣವಾಡಿ ವರೆಗಿನ ಮುಖ್ಯರಸ್ತೆಯನ್ನು ದ್ವಿಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸಿದ್ದು ಮೊದಲ ಹಾಗೂ ಎರಡನೇ ಹಂತಕ್ಕೆ ಭೂಮಿ ಪೂಜೆ ಮಾಡಿ ಮಾತನಾಡಿದರು.

ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆ ವಿಸ್ತಾರವಾದರೆ ರೈತರ ಜಮೀನುಗಳಿಗೆ ಬೆಲೆ ಹೆಚ್ಚಾಗುವ ಜತೆಗೆ ರೈತರೇ ಗೋದಾಮು ಅಥವಾ ಕೃಷಿ ಚಟುವಟಿಕೆಗಳನ್ನು ಮಾಡಬಹುದು. ಆ ನಿಟ್ಟಿನಲ್ಲಿ ಕೆಂಪಲಿಂಗನಹಳ್ಳಿ ರಸ್ತೆ ಮೇಲ್ದರ್ಜೆಗೇರಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ. ನಾಲ್ಕು ಹೋಬಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಗೆ ಗ್ರಾಮಗಳ ವ್ಯಾಪ್ತಿಯಲ್ಲಿ ಚರಂಡಿ, 7ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಸಹ ಮಾಡಲು ಮುಂದಾಗಿದ್ದೇವೆ. ರೈತರು ಜಾಗ ಮಾಡಿಕೊಟ್ಟರೆ 10 ಮೀ. ರಸ್ತೆಯನ್ನು 15 ಮೀಟರ್ ರಸ್ತೆ ಮಾಡಿ ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತದೆ. ನಾವು ಮಾಡುವ ಅಭಿವೃದ್ಧಿ ನಮ್ಮ ಅವಧಿಗೆ ಸೀಮಿತವಾಗದೆ ಭವಿಷ್ಯದಲ್ಲಿ ಕ್ಷೇತ್ರದ ಪ್ರಗತಿಗೆ ದಿಕ್ಸೂಚಿಯಾಗಿರಬೇಕು ಆ ನಿಟ್ಟಿನಲ್ಲಿ ನೀವು ಕೊಟ್ಟ ಶಕ್ತಿಯಿಂದ ನಾನು ಕೆಲಸ ಮಾಡುತ್ತಿದ್ದೇನೆ ಎಂದರು.

> ಗ್ರಾಮೀಣ ಪ್ರದೇಶದ ಹಳ್ಳಿಗಳ ರಸ್ತೆ, ಚರಂಡಿಗಳ ಅಭಿವೃದ್ಧಿಯ ಜತೆ ಸ್ತ್ರೀಶಕ್ತಿ ಭವನ ನಿರ್ಮಾಣದ ಮೂಲಕ ಹೆಚ್ಚಿನ ಸಹಕಾರ ನೀಡುತ್ತಿರುವುದು ಈಗಿನ ಶಾಸಕರು ಮಾತ್ರ, ಮಾಜಿ ಶಾಸಕರು ಜನರಿಗೆ ಎಂದಿಗೂ ಸೇವೆ ಮಾಡಲಿಲ್ಲ, ಊಹೆಯನ್ನು ಮಾಡದ ರೀತಿ ನಮ್ಮ ರಸ್ತೆ ಮೇಲ್ದರ್ಜೆಗೇರಿಸಿ 24 ಕೋಟಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿರುವುದು ಸ್ವಾಗತಾರ್ಹ.
>
> ■ **ಬೆಟ್ಟಸ್ವಾಮಿ,** ಎಚ್.ಜಿ ಪಾಳ್ಯ ಯುವ ಮುಖಂಡ

ನಗರಸಭೆ ಹೆಚ್ಚುವರಿ ಸದಸ್ಯ ರಾಜಣ್ಣ(ರಂಗಸ್ವಾಮಿ), ಗುಂಡಿಯಿಂದ ತುಂಬಿದ್ದ ರಸ್ತೆಯನ್ನು ದ್ವಿಪಥ ರಸ್ತೆಯಾಗಿ ಮೇಲ್ದರ್ಜೆಗೇರಿಸುವ ಶಾಸಕರು ಮೊದಲ ಹಂತದಲ್ಲಿ 12ಕೋಟಿ ಅನುದಾನ ನೀಡಿ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಗ್ರಾಮದಲ್ಲಿ ಚರಂಡಿ ಸಹ ಆಗುತ್ತಿರುವುದು ಸ್ವಾಗತಾರ್ಹ, ರೈತರು, ರಸ್ತೆ ಪಕ್ಕದ ಜಮೀನು ಮಾಲೀಕರು ರಸ್ತೆ ವಿಸ್ತಾರಕ್ಕೆ ಸ್ಥಳ ಬಿಡಬೇಕು. ನಾನು ಸಹ ಬಿಡುತ್ತೇನೆ ನೀವು ಬಿಡಿ ನಮ್ಮ ಜಮೀನುಗಳಿಗೆ ಬೆಲೆ ಬರುತ್ತದೆ ಎಂದರು.

ಈ ಸಂದರ್ಭದಲ್ಲಿ ಎನ್‌ಪಿಎ ಅಧ್ಯಕ್ಷ ಎಂ.ಕೆ. ನಾಗರಾಜು, ಮಾಜಿ ಅಧ್ಯಕ್ಷ ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಹೆಚ್ಚುವರಿ ಸದಸ್ಯರಾಗಿದ್ದ ಡಾಬಿರಾಜಣ್ಣ, ಬ್ಯಾಂಕ್ ಅಧ್ಯಕ್ಷರಾದ ಮಂಜುನಾಥಗೌಡ, ತಟ್ಟೆಕೆರೆಬಾಬು, ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂಬಿಟಿ ರಾಮಕೃಷ್ಣಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಹನುಮಂತರಾಜು, ಹರೀಶ್‌ಬಾಬು, ನಟರಾಜು, ಸವಿತಾ ವೆಂಕಟೇಶ್, ಗೋವಿಂದರಾಜು, ಉಷಾನಾರಾಯಣಸ್ವಾಮಿ, ರಾಜಣ್ಣ, ಲಕ್ಷ್ಮೀದೇವಮ್ಮ ಕೃಷ್ಣಪ್ಪ, ಗಂಗರೇವಣ್ಣ, ಮಾಜಿ ಸದಸ್ಯರಾದ ಸುನೀಲ್, ಕೆಂಪಲಿಂಗನಹಳ್ಳಿ ಕೆಂಪೇಗೌಡ, ಕುಮುದ್ವತಿ ಸಂಸ್ಥೆ ಮಾಲೀಕ ಚಿಕ್ಕಹನುಮೇಗೌಡ, ಯುವಮುಖಂಡ ಸಿ.ಎಂ.ಗೌಡ, ವಿಷ್ಣು, ರವಿ, ವಿಜಯ್, ಮಧುಕರ್, ಮಂಜು, ಶೇಖರ್, ವೆಂಕಟೇಶ್, ಮುಖಂಡರಾದ ಎಪಿಎಂಸಿ ಗೋವಿಂದರಾಜು, ಮಂಜುನಾಥಯ್ಯ, ಗೋಪಾಲಯ್ಯ, ಚಿಕ್ಕಣ್ಣ, ರಂಗನಾಥ್, ಚಿಕ್ಕಣ್ಣರಾಜು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಭಕ್ತಿಯಿಂದ ರಾಮನವಮಿ ಆಚರಣೆ

ವಿಜಯಪುರ: ಶ್ರೀರಾಮನವಮಿ ಹಬ್ಬವನ್ನು ಸಂಭ್ರಮ ಹಾಗೂ ಶ್ರದ್ಧಾಭಕ್ತಿಯಿಂದ ಶುಕ್ರವಾರ ಆಚರಿಸಲಾಯಿತು.

ಹೋಬಳಿಯಾದ್ಯಂತ ಇರುವ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಅಭಿಷೇಕ, ಅಲಂಕಾರ, ಪೂಜೆ, ಮಹಾಮಂಗಳಾರತಿ, ಹವನದಂತಹ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿಸಲಾಯಿತು. ಜತೆಗೆ ತೀರ್ಥ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಸರತಿ ಸಾಲಿನಲ್ಲಿ ನಿಂತು ತಮ್ಮ ಆರಾಧ್ಯ ದೈವವನ್ನು ಕಣ್ತುಂಬಿಕೊಳ್ಳುವ ಜತೆಗೆ ತನ್ಮಯತೆಯಿಂದ ಆರಾಧಿಸಿದರು. ಕೆಲ ದೇವಾಲಯಗಳಲ್ಲಿ ಸಾಂಪ್ರದಾಯಿಕ ಪೂಜೆಗಳು ಮಾತ್ರವಲ್ಲದೇ ಸಂಗೀತೋತ್ಸವ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ನೀರು ಮಜ್ಜಿಗೆ, ವಿವಿಧ ಹಣ್ಣುಗಳ ಪಾನಕ ಹಾಗೂ ಕೋಸಂಬರಿ ಹಬ್ಬದ ಕಳೆಯನ್ನು ಹೆಚ್ಚಿಸಿದವು.

ಗ್ರಾಮೀಣ ಪ್ರದೇಶದ ಎಲ್ಲ ದೇವಾಲಯಗಳಲ್ಲಿ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಮಧ್ಯಾಹ್ನದ ವೇಳೆಗೆ ವಿವಿಧ ಸಂಘ ಸಂಸ್ಥೆಗಳು ಹಾಗೂ ಪ್ರಮುಖರು ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಭಕ್ತರಿಗೆ ಮಜ್ಜಿಗೆ, ವಿವಿಧ ಹಣ್ಣುಗಳ ಪಾನಕ ಹಾಗೂ ಕೋಸಂಬರಿ ಹಂಚಿದರು. ಪಟ್ಟಣದ ಹಾಡಿಪುರ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯ, ಅಭಯ ಆಂಜನೇಯಸ್ವಾಮಿ ದೇವಾಲಯ, ಅರಳಕಟ್ಟೆ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯ, ಆನೆಕಲ್ಲು ಛತ್ರದ ಭಕ್ತಾಂಜನೇಯಸ್ವಾಮಿ, ನಾಗರಬಾವಿ ಬಳಿಯ ವೀರಾಂಜನೇಯ ಸ್ವಾಮಿ ದೇವಾಲಯ, ವೆಂಕಟೇನಹಳ್ಳಿ ಗ್ರಾಮದ ಆಂಜನೇಯಸ್ವಾಮಿ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ಅಭಿಷೇಕ, ವಿಶೇಷ ಹೂವಿನ ಅಲಂಕಾರ, ವಿಶೇಷ ಪೂಜೆಗಳು ನಡೆದವು. ಈ ವೇಳೆ ನೆರೆದಿದ್ದ ಭಕ್ತರಿಗೆ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿ ಹಂಚಿದರು. ವಿಜಯಪುರ ಸಮೀಪದ ನಾಗರಬಾವಿ ಬಳಿ ಇರುವ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಬಸ್ ಡಿಕ್ಕಿ: 40 ಮಂದಿಗೆ ಗಾಯ

ಮದ್ದೂರು: ಶಾಲಾ ವಾಹನಕ್ಕೆ ಖಾಸಗಿ ಬಸ್ ಡಿಕ್ಕಿಯಾಗಿ 16 ಮಂದಿ ವಿದ್ಯಾರ್ಥಿಗಳು ಸೇರಿದಂತೆ 40 ಮಂದಿ ಗಾಯಗೊಂಡಿರುವ ಘಟನೆ ಶುಕ್ರವಾರ ಸಂಜೆ ತಾಲೂಕಿನ ಸೋಮನಹಳ್ಳಿ ಸಮೀಪದ ಕೆಸ್ತೂರು ಕ್ರಾಸ್ ಬಳಿ ಜರುಗಿದೆ.

ಮದ್ದೂರು ಮರಿಯಪ್ಪ ಕಾನ್ವೆಂಟ್‌ನ 16 ಮಂದಿ ವಿದ್ಯಾರ್ಥಿಗಳು ಗಾಯಗೊಂಡಿದ್ದು, ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಲ್ಲಿ ಮೂವರನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ.

ಖಾಸಗಿ ಬಸ್ ನಲ್ಲಿದ್ದ ಕೊಳ್ಳೇಗಾಲದ ದೋರಮ್ಮ, ಸುಜಾತ ಸೇರಿದಂತೆ ಒಟ್ಟು 20ಕ್ಕೂ ಹೆಚ್ಚು ಮಂದಿ ಗಾಯಗೊಂಡು ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದು ಬಿಡುಗಡೆಯಾಗಿ ಹೋಗಿದ್ದಾರೆ. ಕೆಸ್ತೂರು ಕ್ರಾಸ್ ಬಳಿ ಶಾಲಾ ಬಸ್ ತಿರುವು ಪಡೆಯುತ್ತಿದ್ದ ವೇಳೆ ಬೆಂಗಳೂರಿಗೆ ತೆರಳುತ್ತಿದ್ದ ಉದಯರಂಗ ಬಸ್ ಡಿಕ್ಕಿ ಹೊಡೆದಿದೆ. ಘಟನೆ ಸಂಬಂಧ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸಾರ್ವಜನಿಕರ ನೆರವಿನಿಂದ ಗಾಯಾಳುಗಳಾದ ಶಾಲಾ ಮಕ್ಕಳು ಸೇರಿದಂತೆ ಹಲವರು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಕೃಷ್ಣಪ್ಪನಿಗೆ ರಂಗಗೌರವ, ರಂಗಭೂಮಿ ಸಂದೇಶ ವಾಚನ

ರಂಗಭೂಮಿ ರಕ್ಷಿಸುವ ಕೆಲಸವಾಗಲಿ: ಡಾ.ಸುಜಾತ

ನೆಲಮಂಗಲ: ಕಾಲಕ್ರಮೇಣ ರಂಗಭೂಮಿಯು ಮಸುಕಾಗದಂತೆ ಹಾಗು ನಶಿಸಿಹೋಗದಂತೆ ತಡೆಯಲು ನಾವು ದೃಢ ಸಂಕಲ್ಪ ಮಾಡುವ ಮೂಲಕ ಕಲೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಕೆಲಸವನ್ನು ಮಾಡಬೇಕು ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಸುಜಾತ.ಸಿ.ಎನ್ ತಿಳಿಸಿದರು.

ನಗರದ ರಂಗ ಶಿಕ್ಷಣ ಕೇಂದ್ರದ ಸಭಾಂಗಣದಲ್ಲಿ ರಂಗಶಿಕ್ಷಣ ಕೇಂದ್ರ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ವಿಶ್ವರಂಗಭೂಮಿ ದಿನಾಚರಣೆ ಹಾಗೂ ರಂಗ ಗೌರವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಇಂದಿನ ಯುವ ಪೀಳಿಗೆ ನಮ್ಮ ಕಲೆ, ಸಾಂಸ್ಕೃತಿಕ ಪರಂಪರೆ ಉಳಿಸಿ ಬೆಳೆಸಬೇಕಾದರೆ ಕಲೆಗೆ ಬೆಲೆ ನೀಡಿ, ಕಲಾವಿದರ ಪ್ರತಿಭೆಯನ್ನು ಪ್ರೋತ್ಸಾಹಿಸುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಕಲೆಯ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವ, ಭಾವನೆಗಳನ್ನು ಅಭಿವ್ಯಕ್ತಿಸುವ, ಕಲ್ಪನೆಯನ್ನು ನಾಟಕ ಮತ್ತು ಸಂಗೀತದ ಮೂಲಕ ಪ್ರೇಕ್ಷಕ ಮಹಾಪ್ರಭುವಿಗೆ [illegible] ಮಾಡುವುದೇ ರಂಗಭೂಮಿಯಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾರುವ ನಮ್ಮ ಭಾರತ ದೇಶದಲ್ಲಿ ಸಾಕಷ್ಟು ಕಲಾ ಪ್ರಕಾರಗಳನ್ನು ಕಾಣಬಹುದು ಎಂದರು.

World Theatre

ರಂಗಗೌರವ

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಕಲೆಯೇ ಜೀವನ ಒಂದು ಭಾಗವಾಗಿ ಮಾಡಿಕೊಂಡು ಸಾವಿರಾರು ಕಲಾವಿದರಿಗೆ ಪ್ರೇರಣೆಯಾಗಿರುವ ವಜ್ರಕಟ್ಟೆಪಾಳ್ಯದ ಹಿರಿಯ ರಂಗ ಭೂಮಿ ಕಲಾವಿದ ಕೃಷ್ಣಪ್ಪನವರಿಗೆ ವಿಶ್ವ ರಂಗಭೂಮಿ ದಿನದ ರಂಗಗೌರವ ಮಾಡಿ ಅಭಿನಂದಿಸಲಾಯಿತು.

ರಂಗಶಿಕ್ಷಣ ಕೇಂದ್ರ ಸಂಸ್ಥಾಪಕ ಅಧ್ಯಕ್ಷ ಸಿದ್ದರಾಜು.ಸಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಸಾಮಾಜಿಕ, ಕೌಟುಂಬಿಕ ಮತ್ತು ಮಕ್ಕಳ ಸಂಬಂಧಿತ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ರಂಗಭೂಮಿಯನ್ನು ಪ್ರಬಲವಾಗಿ ಬೇರೂರುವಂತೆ ಮಾಡಬೇಕಾಗುತ್ತದೆ ಎಂದರು.

ಸಂದರ್ಭದಲ್ಲಿ ರಂಗಶಿಕ್ಷಣ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕಿ ಮಂಜುಳ ಸಿದ್ದರಾಜು, ರಂಗ ನಿರ್ದೇಶಕ ವಿ.ದೇವರಾಜು, ರಂಗಸಂದೇಶ ವಾಚನ ಮಾಡಿದ ಸಹ ಪ್ರಾಧ್ಯಾಪಕಿ ನಿವೇದಿತಾ, ಕಲಾವಿದ ಬೂದಿಹಾಳ್ ಕಿಟ್ಟಿ, ಕಲಾವಿದರಾದ ಸಾಗರ್, ಕೀರ್ತಿ, ದರ್ಶನ್ ಸೇರಿದಂತೆ ಮತ್ತಿತರರಿದ್ದರು.

ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಟೋಳಿ ಸದಸ್ಯ ರಘುನಂದನ

ಸಮಾಜದಲ್ಲಿ ಕುಟುಂಬ ವ್ಯವಸ್ಥೆ ಉಳಿಯಲಿ

ಮೈಸೂರು: ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಟೋಳಿ ಸದಸ್ಯ ರಘುನಂದನ ಹೇಳಿದರು.

ಪ್ರಜ್ಞಾಪ್ರವಾಹ ಕರ್ನಾಟಕದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾದ ಏಕಾತ್ಮ ಮಾನವ ದರ್ಶನ, ಭಾರತದ ವಿಶ್ವದೃಷ್ಟಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಏಕಾತ್ಮ ಮಾನವ ದರ್ಶನ ಎನ್ನುವುದು ಭಾರತೀಯ ಜೀವನ ದರ್ಶನ. ಅದು ಹೊಸ ಸಿದ್ಧಾಂತವಲ್ಲ, ಭಾರತದ ಜೀವನ ವಿಧಾನವನ್ನು ಸಿದ್ಧಾಂತಗೊಳಿಸಲಾಗಿದೆ. ಅದರ ಪ್ರಕಾರ ಸಾಮಾಜಿಕ ವ್ಯವಸ್ಥೆ ರಾಜಕೀಯ ವ್ಯವಸ್ಥೆಗಿಂತ ಸದೃಢವಾಗಬೇಕು. ನಮ್ಮ ಕರ್ತವ್ಯ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಉಳಿಸುವುದು. ಆದಾಗಲೇ ಕುಟುಂಬ ವ್ಯವಸ್ಥೆ ನಶಿಸುತ್ತಿರುವ ಅನೇಕ ನಿದರ್ಶನವನ್ನು ನಾವು ಕಾಣುತ್ತಿದ್ದೇವೆ ಎಂದರು.

ನಮ್ಮ ಕುಟುಂಬ ವ್ಯವಸ್ಥೆ ಮಾಡಬೇಕಾದ ನಿರ್ಣಯವನ್ನು ರಾಜ್ಯ ಮಾಡಬೇಕಾದ ಸ್ಥಿತಿಗೆ ತಲುಪಿದೆ. ಇದು ಭಾರತೀಯ ವಿಧಾನವಲ್ಲ ಎನ್ನುವುದನ್ನು ಜನರಿಗೆ ತಿಳಿಸಬೇಕು ಎಂದರು. ಪುರುಷಾರ್ಥಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ನೋಡಬೇಕಾದ ಅವಶ್ಯಕತೆ ಇದೆ. ಶೈಕ್ಷಣಿಕ ವಲಯದಲ್ಲಿ ಧರ್ಮ ಪದವನ್ನು ಬಳಸುವುದು ಕಷ್ಟ. ಪ್ರಾಣಿಗಳಿಗೂ ಮತ್ತು ಮಾನವರಿಗೂ ವ್ಯತ್ಯಾಸವನ್ನು ತರುವುದು ಧರ್ಮದ ಪರಿಪಾಲನೆ. ಆದರೆ, ಪ್ರಸ್ತುತ ಧರ್ಮವನ್ನು ರಿಲಿಜನ್‌ಗೆ ಸಂವಾದಿಯಾಗಿ ಬಳಸಲಾಗುತ್ತಿದೆ. ಅದು ಸರಿಯಾದುದಲ್ಲ, ಪದಗಳು ಮಾದರಿಗಳನ್ನು ರಚಿಸುವಲ್ಲಿ ಸಹಕರಿಸುವ ಕಾರಣ ಅವುಗಳ ಬಳಕೆ ಸರಿಯಾಗಿ ಇರಬೇಕು ಎಂದು ಹೇಳಿದರು.

Date : 25,26,27 March 2026

ವಿದೇಶಿಯನ್ನು ಸ್ವದೇಶಾನುಕೂಲ ಮಾಡಬೇಕು. ಸ್ವದೇಶಿಯನ್ನು ಯುಗಾನುಕೂಲ ಮಾಡಬೇಕು ಎಂದು ದೀನ ದಯಾಳ ಉಪಾಧ್ಯಾಯರು ಹೇಳಿದ್ದರು. ಅದರ ಜವಾಬ್ದಾರಿ ಯಾರದ್ದು, ಜವಾಬ್ದಾರಿಯ ವಿಷಯ ಬಂದಾಗ ಭಾರತೀಯ ವೈಚಾರಿಕ ವಲಯ ರಾಜ್ಯದ ಮೇಲೆ ಬೊಟ್ಟು ಮಾಡಿ ತೋರಿಸುತ್ತದೆ ಎಂದರು.

ಅಂತ್ಯೋದಯ ಕಲ್ಪನೆ

ಡಾ. ಶ್ಯಾಮಪ್ರಸಾದ ಮುಖರ್ಜಿ ಸಂಶೋಧನಾ ಫೌಂಡೇಶನ್‌ನ ನಿರ್ದೇಶಕ ಬಿನಯ್ ಕುಮಾರ್ ಸಿಂಗ್ ಮಾತನಾಡಿ, ದೀನದಯಾಳ ಹೆಸರಿನ ಅರ್ಥವೇ ದೀನರನ್ನು ಪೊರೆಯುವವರು ಎಂದು ಪ್ರಭು ಶ್ರೀರಾಮನಿಗೂ ಈ ಹೆಸರಿತ್ತು. ಅಂತ್ಯೋದಯದ ಕಲ್ಪನೆಯೂ ರಾಮರಾಜ್ಯದ ಕಲ್ಪನೆಯಿಂದ ಪ್ರೇರಿತವಾದದ್ದು. ದೀನರನ್ನು ಸಮರ್ಥಗೊಳಿಸುವುದು ಅಂತ್ಯೋದಯದ ಕಲ್ಪನೆಯಾಗಿತ್ತು ಎಂದರು. ಪ್ರೀತಿ ಮತ್ತು ಯುದ್ಧದ ಹೆಸರಿನಲ್ಲಿ ಮಾಡಲಾಗುವ ಎಲ್ಲಾ ಕಾರ್ಯಗಳು ಸರಿಯೇ ಎನ್ನುವುದು ಇತರರ ಕಲ್ಪನೆ. ಆದರೆ, ಪ್ರೀತಿ ಮತ್ತು ಯುದ್ಧದ ಹೆಸರಿನಲ್ಲಿ ಮಾಡಲಾಗುವ ಎಲ್ಲಾ ಕಾರ್ಯಗಳು ಸರಿಯಲ್ಲ ಎನ್ನುವುದು ಭಾರತೀಯ ಕಲ್ಪನೆ. ಅದನ್ನು ಆಪರೇಷನ್ ಸಿಂದೂರದಲ್ಲೂ ಅನುಸರಿಸಿದ್ದೇವೆ ಎಂದರು. ವೇದಿಕೆಯಲ್ಲಿ ಪ್ರಜ್ಞಾಪ್ರವಾಹದ ಕರ್ನಾಟಕ ಉತ್ತರ ಪ್ರಾಂತದ ಸಂಯೋಜಕ ಡಾ. ನಿರಂಜನ ಪೂಜಾರ್ ಉಪಸ್ಥಿತರಿದ್ದರು.

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
ಹೊಸ ದಿಗಂತ
ಶನಿವಾರ, 28 ಮಾರ್ಚ್ 2026
ಬೆಂಗಳೂರು

ಬೆಂಗಳೂರಲ್ಲಿಂದು ಉದ್ಘಾಟನಾ ಪಂದ್ಯ | 19ನೇ ಆವೃತ್ತಿಗೆ ಚಾಲನೆ

ಮನರನ್‌ಜನಾ ಹಬ್ಬ ಶುರು

ಬೆಂಗಳೂರು: ಭಾರತ ಕ್ರಿಕೆಟ್ ಅಭಿಮಾನಿಗಳ ನಡುವೆ ಇರುವ ಭಾಯಿಚಾರಾ ಕೆಲವು ದಿನಗಳ ಮಟ್ಟಿಗೆ ನಿಲ್ಲಲಿದೆ. ಸುಮಾರು 2 ತಿಂಗಳ ಮಟ್ಟಿಗೆ ಒಬ್ಬರಿಗೊಬ್ಬರು ಟೀಕಿಸಲು ವಿವಿಧ ತಂಡಗಳ ಅಭಿಮಾನಿಗಳು ಸಿದ್ಧರಾಗಿದ್ದಾರೆ. ತಮ್ಮ ನೆಚ್ಚಿನ ಆಟಗಾರರನ್ನು ಬೆಂಬಲಿಸಲು, ಕ್ರಿಕೆಟ್ ಆನಂದಿಸಲು ಸಮಸ್ತ ಕ್ರೀಡಾಭಿಮಾನಿಗಳು ಅಣಿಯಾಗಿದ್ದಾರೆ. ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯದೊಂದಿಗೆ ಐಪಿಎಲ್ ಶುರುವಾಗಲಿದೆ. ಎಲ್ಲಾ ಹತ್ತು ತಂಡಗಳು ಭರ್ಜರಿ ಸಿದ್ಧತೆಗಳೊಂದಿಗೆ ಕಣಕ್ಕಿಳಿಯುತ್ತಿವೆ. ಹಾಲಿ ಚಾಂಪಿಯನ್ ಆರ್‌ಸಿಬಿ ಟ್ರೋಫಿ ಉಳಿಸಿಕೊಳ್ಳಲು ಫೈಟ್ ನಡೆಸಲಿದೆ. 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯಲಿವೆ ಎಂದು ಹೇಳಲಾಗಿತ್ತು. ಆದರೆ ಬಿಸಿಸಿಐ 70 ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಿದೆ. ಇನ್ನೂ 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಪ್ರಕಟಿಸಬೇಕಿದೆ. ಅಂದರೆ ಈ ಬಾರಿ ಕೂಡ 74 ಪಂದ್ಯಗಳು ಮಾತ್ರ ನಡೆಯಲಿವೆ. ಯಥಾಸ್ಥಿತಿ ಲೀಗ್ ಹಂತದ ರೌಂಡ್ ರಾಬಿನ್ ಆಮೇಲೆ ನಾಕೌಟ್ ಮತ್ತು ಫೈನಲ್ ಪಂದ್ಯ ನಡೆಯಲಿವೆ. ವಿಶೇಷವಾಗಿ ಈ ಬಾರಿ ಕೆಲವು ನಿಯಮಗಳನ್ನು ತರಲಾಗಿದೆ. 8 ವಾರದ ಹಿಂದಷ್ಟೇ ಟಿ20 ಮಾದರಿಯಲ್ಲಿ ಭಾರತ ವಿಶ್ವಕಪ್ ಗೆದ್ದಿದೆ. ಎಲ್ಲಾ ಕ್ರಿಕೆಟ್ ಅಭಿಮಾನಿಗಳ ಮನಸ್ಥಿತಿ ಈಗ ಟಿ20ಗೆ ಹೊಂದಿಕೊಂಡಿದೆ.

74	12	14	8	44
ಈ ಬಾರಿಯ ಪಂದ್ಯಗಳು	ನಗರಗಳಲ್ಲಿ ಪಂದ್ಯ	ತಂಡಕ್ಕೆ ಪಂದ್ಯಗಳು	ಡಬಲ್ ಹೆಡರ್‌ಗಳು	ಧೋನಿ ಅತಿ ಹಿರಿಯ ಆಟಗಾರ

ಗಮನಿಸಿ

- ವಾಹನದ ಬದಲು ಮೆಟ್ರೋದಲ್ಲಿ ಪ್ರಯಾಣಿಸಿ, ಟಿಕೆಟ್ ಉಚಿತ
- ಮೈದಾನದ ಸುತ್ತ ಪಾರ್ಕಿಂಗ್ ನಿಷೇಧ, 4 ಸ್ಥಳಗಳಲ್ಲಿ ಪಾರ್ಕಿಂಗ್
- ಪಾರ್ಕಿಂಗ್ ಲಾಟ್‌ನಿಂದ ಮೈದಾನದವರೆಗೆ ಬಸ್ ವ್ಯವಸ್ಥೆ
- ಕ್ವೀನ್ಸ್ ರೋಡ್‌ನಿಂದ ಮೈದಾನದೊಳಕ್ಕೆ ಪ್ರವೇಶ ಬಂದ್
- ಟಿಕೆಟ್ ಇಲ್ಲದಿದ್ದರೆ ಮೈದಾನದ ಕಡೆ ನಿಲ್ಲದಿರಿ, ಕಠಿಣ ಕ್ರಮ



ಟ್ರೋಫಿ ವಿಶೇಷತೆ

ಐಪಿಎಲ್‌ನಲ್ಲಿ ಮೊದಲಿಗೆ ಭಾರತ ನಕ್ಷೆ ಇರುವ ಟ್ರೋಫಿಯನ್ನು ನೀಡಲಾಗುತ್ತಿತ್ತು. ನಂತರ ಬದಲಾಯಿಸಿ ಹೊಸ ವಿನ್ಯಾಸದ ಟ್ರೋಫಿ ನೀಡುವ ವಾಡಿಕೆ ಮಾಡಿಕೊಂಡಿತು. ಟ್ರೋಫಿ ಬಂಗಾರದ್ದಾಗಿರುತ್ತದೆ. ಟ್ರೋಫಿ ಮೇಲೆ (where talent meets opportunity) ಎಂದು ಬರೆಯಲಾಗಿದೆ.

ಮೊದಲ ಬಾರಿಯ ಚಾಂಪಿಯನ್
▸ರಾಜಸ್ಥಾನ ರಾಯಲ್ಸ್

ಹಾಲಿ ಚಾಂಪಿಯನ್ಸ್
▸ರಾಯಲ್ ಚಾಲೆಂಜರ್ಸ್ ಬೆಂಗಳೂರು

ಹೆಚ್ಚು ಬಾರಿ ಗೆದ್ದವರು
▸ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್(5 ಟ್ರೋಫಿ)

ಅತಿ ಹೆಚ್ಚು ರನ್ ಬಾರಿಸಿದ ಆಟಗಾರ
▸ವಿರಾಟ್ ಕೊಹ್ಲಿ (8661 ರನ್)

ಅತಿ ಹೆಚ್ಚು ವಿಕೆಟ್ ಪಡೆದ ಆಟಗಾರ
▸ಯುಜುವೇಂದ್ರ ಚಾಹಲ್ (221 ವಿಕೆಟ್)

ಅತಿ ಹೆಚ್ಚು ವೈಯಕ್ತಿಕ ಸ್ಕೋರ್
▸ಕ್ರಿಸ್ ಗೇಲ್ (175)

ಅತಿ ಹೆಚ್ಚು ರನ್ ಗಳಿಸಿದ ತಂಡ
▸ಸನ್‌ರೈಸರ್ಸ್ ಹೈದರಾಬಾದ್ 287/2

ಬೆಸ್ಟ್ ಬೌಲಿಂಗ್:
▸ಅಲ್ಜಾರಿ ಜೋಸೆಫ್ (12/6)

ಹೆಚ್ಚು ಕ್ಯಾಚ್ ಪಡೆದ ಫೀಲ್ಡರ್
▸ವಿರಾಟ್ ಕೊಹ್ಲಿ (110+)

ಹೆಚ್ಚು ಟ್ರೋಫಿ ಗೆದ್ದ ನಾಯಕ
▸ರೋಹಿತ್ ಶರ್ಮ, ಮಹೇಂದ್ರ ಸಿಂಗ್ ಧೋನಿ(5)

ಬಹುಮಾನ

ಐಪಿಎಲ್ ಗೆದ್ದ ತಂಡಕ್ಕೆ
20 ಕೋಟಿ ರೂ. ನಗದು ಬಹುಮಾನ

ರನ್ನರ್-ಅಪ್ ತಂಡಕ್ಕೆ
13 ಕೋಟಿ ರೂ. ನಗದು ಬಹುಮಾನ

ಐಪಿಎಲ್ ಯಾಕೆ ಭಿನ್ನ ಕ್ರಿಕೆಟ್?

3 ಸೂಪರ್ ಓವರ್

ಪಂದ್ಯಗಳು ಟೈ ಆದರೆ ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ. ಐಸಿಸಿ ಕ್ರಿಕೆಟ್‌ನಲ್ಲಿ ಒಂದು ಅಥವಾ ಎರಡು ಸೂಪರ್ ಓವರ್‌ಗಳ ನಂತರ ಪಂದ್ಯ ನಿರ್ಧರಿಸುವುದಕ್ಕೆ ಬೌಂಡರಿ ಎಣಿಕೆ ಬಳಸುತ್ತಿತ್ತು. ಬಳಿಕ ಫಲಿತಾಂಶ ಬರುವವರೆಗೂ ಸೂಪರ್ ಓವರ್ ಎಂಬ ಘೋಷಣೆ ಮಾಡಿತು. ಐಪಿಎಲ್‌ನಲ್ಲಿ ಮೂರು ಸೂಪರ್ ಓವರ್ ಆಡಿಸಲಾಗುತ್ತದೆ.

ಡಿಆರ್‌ಎಸ್ ಬಳಕೆ ವಿಸ್ತಾರ

ಐಸಿಸಿಯಲ್ಲಿ ಕೆಲವು ನಿರ್ಧಾರಗಳಿಗೆ ಮಾತ್ರ ಡಿಆರ್‌ಎಸ್ ಬಳಸಿಕೊಳ್ಳಬಹುದಾಗಿದೆ. ಆದರೆ ಐಪಿಎಲ್‌ನಲ್ಲಿ ಪ್ರತಿಯೊಂದಕ್ಕೂ ಡಿಆರ್‌ಎಸ್ ಬಳಸಿಕೊಳ್ಳುವ ಆಯ್ಕೆ ತಂಡಗಳ ಮುಂದಿರುತ್ತವೆ. ಅಂದರೆ ವೈಡ್, ನೋ ಬಾಲ್, ಓವರ್ ಬೌನ್ಸ್‌ಗೂ ಆಟಗಾರರು ಡಿಆರ್‌ಎಸ್ ತೆಗೆದುಕೊಳ್ಳಬಹುದಾಗಿದೆ.

ಇಂಪ್ಯಾಕ್ಟ್ ಪ್ಲೇಯರ್

- ಪ್ರತಿ ತಂಡವು ಪಂದ್ಯಕ್ಕೆ ಮುನ್ನ 11 ಆಟಗಾರರ ಜೊತೆಗೆ 5 ಸಬ್‌ಸ್ಟಿಟ್ಯೂಟ್ ಆಟಗಾರರನ್ನು ಘೋಷಿಸುತ್ತದೆ.
- ಈ 5ರಲ್ಲಿ ಒಬ್ಬರನ್ನು ಪಂದ್ಯದ ವೇಳೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಳಸಬಹುದು.

ಯಾವಾಗ ಬಳಸಬಹುದು?

- ಇನ್ನಿಂಗ್ಸ್ ಆರಂಭಕ್ಕೂ ಮೊದಲು
- ಓವರ್ ಮುಗಿದ ನಂತರ
- ವಿಕೆಟ್ ಬಿದ್ದ ನಂತರ
- ಬ್ಯಾಟರ್ ನಿವೃತ್ತಿಯಾದಾಗ

ಟಿ20 ಮಾದರಿಯ ವಿಭಿನ್ನ ಕ್ರಿಕೆಟ್ ಐಪಿಎಲ್

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಜನರ ಮನದಲ್ಲಿ ಅಚ್ಚಳಿಯದಂತೆ ಕೂತಿದೆ. 2008ರಲ್ಲಿ ಶುರುವಾದಾಗಿನಿಂದಲೂ ಅತ್ಯಂತ ಜನಪ್ರಿಯ ಆಟ ಅನ್ನಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಇನ್ನೂ ಹೆಚ್ಚು ಪರಿಣಾಮ ಬೀರಿದೆ. ವಿದೇಶಗಳಲ್ಲಿ ನಡೆಸಲಾಗುವ ಟಿ20 ಲೀಗ್‌ಗಿಂತಲೂ ಹೆಚ್ಚು ಪ್ರಸಿದ್ಧಿ ಪಡೆದು ನಿಂತಿದೆ. ಜಗತ್ತಿನಲ್ಲಿ ಹತ್ತಾರು ಕಡೆ ಹತ್ತಾರು ಹೆಸರುಗಳಲ್ಲಿ ಟಿ20 ಕೂಟಗಳು ನಡೆಯುತ್ತವೆ. ಆದರೆ ಐಪಿಎಲ್‌ಗಿದ್ದಷ್ಟು ಪ್ರಾಮುಖ್ಯತೆ ಮತ್ತು ಕ್ರೇಜ್ ಬೇರ್‍ಯಾವ ಪಂದ್ಯಾವಳಿಗೂ ಇಲ್ಲ.

ವಿಭಿನ್ನ ರೂಲ್ಸ್

ಐಪಿಎಲ್ ಅನ್ನು ವಿಭಿನ್ನ ನಿಯಮಗಳು ವಿಶೇಷಗೊಳಿಸಿವೆ. ಮೊದಲಿನ ಐಪಿಎಲ್‌ನಿಂದಲೂ ಐಸಿಸಿ ಟಿ20 ಕ್ರಿಕೆಟ್‌ಗೂ ವಿಭಿನ್ನ ನಿಯಮಗಳನ್ನು ಅನುಸರಿಸುತ್ತಾ ಬಂದಿದೆ. ಹಾಗಿದ್ದರೆ ಹೊಸ ಮತ್ತು ಆಕರ್ಷಕ ನಿಯಮಗಳ್ಯಾವವು?

ಪ್ರಮುಖ ನಿಯಮಗಳು

- ಇಂಪ್ಯಾಕ್ಟ್ ಆಟಗಾರ ಬ್ಯಾಟಿಂಗ್, ಬೌಲಿಂಗ್ ಕೂಡ ಮಾಡಬಹುದು
- ಪೂರ್ಣ 4 ಓವರ್‌ಗಳ ಬೌಲಿಂಗ್ ಮಾಡಲು ಅರ್ಹ
- ಒಬ್ಬ ಆಟಗಾರ ಹೊರಗೆ ಹೋದ ಮೇಲೆ ಮತ್ತೆ ಬರುವುದಿಲ್ಲ
- ಒಂದೇ ತಂಡಕ್ಕೆ ಒಂದೇ ಇಂಪ್ಯಾಕ್ಟ್ ಪ್ಲೇಯರ್ ಅವಕಾಶ

ಟೈಮ್-ಔಟ್

ಪಂದ್ಯದ ನಡುವೆ ನಾಲ್ಕು ಟೈಮ್-ಔಟ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ಇನ್ನಿಂಗ್ಸ್‌ನಲ್ಲಿ ಒಂದು ಬ್ಯಾಟಿಂಗ್ ಮತ್ತು ಒಂದು ಬೌಲಿಂಗ್ ಟೈಮ್ ಔಟ್ ನೀಡಲಾಗುತ್ತೆ.

ಯಾವಾಗ ತೆಗೆದುಕೊಳ್ಳಬಹುದು?

- ಪವರ್‌ಪ್ಲೇ ಮುಗಿದ ನಂತರ
- 6-9ರ ಓವರ್ ಒಳಗಡೆ ಮೊದಲ ವಿರಾಮ
- 13ರಿಂದ 16ನೇ ಓವರ್ ಒಳಗಡೆ ಎರಡನೇ ವಿರಾಮ

ಗೆಲುವಿನ ಭರವಸೆಯಲ್ಲಿ ಆರ್‌ಸಿಬಿ

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ಶನಿವಾರದಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಎದುರಾಗಲಿವೆ.

ಕಳೆದ ಕೂಟದಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಟ್ರೋಫಿ ಗೆದ್ದುಕೊಂಡಿರುವ ಬೆಂಗಳೂರು ಹಾಗೂ ಲೀಗ್ ಹಂತದಲ್ಲಿ ಎಲ್ಲಿಲ್ಲದ ನಿರಾಸೆ ಅನುಭವಿಸಿರುವ ಹೈದರಾಬಾದ್ ಶುಭಾರಂಭ ಮಾಡುವುದಕ್ಕಾಗಿ ಎದುರು ನೋಡುತ್ತಿವೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಮೊದಲ ಪಂದ್ಯ ಆಯೋಜಿಸಲಿದೆ. ಹೈದರಾಬಾದ್ ಪ್ಯಾಟ್ ಕಮ್ಮಿನ್ಸ್ ಇಲ್ಲದೆ ಕಣಕ್ಕಿಳಿಯುತ್ತಿದೆ. ಇತ್ತ ಬೆಂಗಳೂರು 3 ವೇಗಿಗಳಿಲ್ಲದೆ ಮೈದಾನಕ್ಕಿಳಿಯುತ್ತಿದೆ. ಉಭಯ ತಂಡಗಳು ಬ್ಯಾಟಿಂಗ್ ಪಡೆಗಳನ್ನು ಹೊಂದಿರುವುದು ಕುತೂಹಲ ಮೂಡಿಸಿದೆ.

ಶೀಘ್ರ ಕಣಕ್ಕೆ ಜೋಶ್: ಹ್ಯಾಜೆಲ್ವುಡ್ ಬಗ್ಗೆ ಮಾಹಿತಿ ನೀಡುತ್ತಾ ಆ್ಯಂಡಿ, ಹ್ಯಾಜೆಲ್ವುಡ್ ತಂಡ ಸೇರಿಕೊಂಡಿದ್ದಾರೆ. ಸಂಪೂರ್ಣ ಫಿಟ್ ಆಗಿದ್ದಾರೆ. ಆರಂಭಿಕ ಸಮಯದಲ್ಲೇ ನಮ್ಮ ಕ್ಯಾಂಪ್ ಸೇರಿಕೊಂಡಿರುವುದು ಒಳ್ಳೆಯ ವಿಚಾರ. ಆದರೆ ಅವರು ನಾಳೆಯ ಪಂದ್ಯಕ್ಕೆ ಲಭ್ಯವಿರುವುದಿಲ್ಲ ಎಂದು ತಿಳಿಸಿದರು.

> **ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯುತ್ತಿರುವುದು ಆಟಗಾರರಲ್ಲಿ ಉತ್ಸಾಹ ತುಂಬಿದೆ. ವಿರಾಟ್ ಕೊಹ್ಲಿ, ರಜತ್ ಪಾಟೀದಾರ್ ನಾಯಕತ್ವದಲ್ಲಿ ತಂಡ ಸಾಧಿಸಬೇಕಾದ್ದನ್ನು ಸಾಧಿಸಿ ತೋರಿಸಿದೆ. ನಾವು ಹೊಸ ಆರಂಭ ಪಡೆಯುವುದಕ್ಕೆ ಸಿದ್ಧ, ಬದಲಾವಣೆಯೊಂದಿಗೆ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧ.**
> ▸ಆ್ಯಂಡಿ ಫ್ಲವರ್, ಆರ್‌ಸಿಬಿ ಕೋಚ್

ಪಿಚ್: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಿದ್ಧಗೊಂಡಿದೆ. ಅಭ್ಯಾಸದಲ್ಲಿ ಕಿಶನ್, ವಿರಾಟ್, ಪಡಿಕ್ಕಲ್, ರಜತ್ ಸೇರಿದಂತೆ ವಿವಿಧ ಬ್ಯಾಟರು ಗಗನದೆತ್ತರದ ಸಿಕ್ಸರ್‌ಗಳನ್ನು ಬಾರಿಸಿ ಮಿಂಚಿದರು. ಪಂದ್ಯದಲ್ಲೂ ಅದೇ ಫಲಿತಾಂಶ ಮೂಡಿ ಬರುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದ್ದು, ಸ್ಪಿನ್ನರ್‌ಗಳು ಮುಖ್ಯ ಪಾತ್ರ ವಹಿಸಲು ಸಜ್ಜಾಗಿದ್ದಾರೆ.

ಪಂದ್ಯದ ವಿವರ:
ಯಾವಾಗ: ಶನಿವಾರ
ಎಲ್ಲಿ: ಬೆಂಗಳೂರು
ಸಮಯ: ಸಂಜೆ 7:30
ವೀಕ್ಷಣೆ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಆರ್‌ಸಿಬಿಗೆ ಬೌಲಿಂಗ್ ಪಡೆ ಸವಾಲು

ತಂಡದಲ್ಲಿ ಹೊಸ ಬದಲಾವಣೆಗಳಾದರೂ ಶ್ರೀಲಂಕಾದ ತುಷಾರಾ ಬರದಿರುವುದು ಆರ್‌ಸಿಬಿಗೆ ಆರಂಭಿಕ ಪಂದ್ಯಗಳಲ್ಲಿ ಬಲವಾದ ಪೆಟ್ಟು ನೀಡಿದೆ. ಹ್ಯಾಜೆಲ್ವುಡ್ ಮೊದಲಿನ ಪಂದ್ಯಕ್ಕಿಲ್ಲ, ಯಶ್ ದಯಾಳ್ ಹೊರಬಿದ್ದಿದ್ದಾರೆ. ಈ ನಡುವೆ ತುಷಾರಾ ಕೂಡ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವಲ್ಲಿ ವಿಫಲರಾಗಿದ್ದಾರೆ. ಈ ಬೆನ್ನಲ್ಲೇ ಬೌಲಿಂಗ್ ವಿಚಾರದಲ್ಲಿ ಬೆಂಗಳೂರು ಹಿನ್ನಡೆ ಅನುಭವಿಸಿದೆ. ತಂಡದಲ್ಲಿ ಜೇಕಬ್ ಡಫಿ, ಶೆಫರ್ಡ್, ಭುವನೇಶ್ವರ್ ಕುಮಾರ್ ಜತೆಗೆ ಮಂಗೇಶ್ ಯಾದವ್, ವೆಂಕಟೇಶ್ ಅಯ್ಯರ್ ಮತ್ತು ವೇಗದ ಬೌಲಿಂಗ್ ಮಾಡುವ ಡೇವಿಡ್ ಇದ್ದಾರೆ. ಸ್ಪಿನ್ ವಿಭಾಗದಲ್ಲಿ ಸುಯಶ್ ಮತ್ತು ಕೃಣಾಲ್ ಮಿಂಚಲು ಸಜ್ಜಾಗಿದ್ದಾರೆ.

ಹೈದರಾಬಾದ್ ತಂಡಕ್ಕೆ ಸವಾಲು

ಹೆಡ್, ಅಭಿಷೇಕ್, ಇಶಾನ್ ಕಿಶನ್, ಕ್ಲಾಸೆನ್ ಅಂತಹ ಆಟಗಾರರನ್ನು ಹೊಂದಿದರೂ ಹೈದರಾಬಾದ್ ಹಿನ್ನಡೆ ಅನುಭವಿಸಿದೆ. ಮುಖ್ಯವಾಗಿ ಈ ಹಿಂದೆ ನಡೆದಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಿಶನ್ ಬಿಟ್ಟರೆ ಇನ್ನುಳಿದ ಸ್ಫೋಟಕ ಬ್ಯಾಟರು ಅಷ್ಟೊಂದು ಪರಿಣಾಮಕಾರಿಯಾಗಿ ಆಡಿಲ್ಲ. ಅದಲ್ಲದೆ, ಬೌಲಿಂಗ್‌ನಲ್ಲಿ ಶಮಿ ಮತ್ತು ಕಮ್ಮಿನ್ಸ್ ಅವರಿಲ್ಲದೆ ಅಲ್ಪ ಸವಾಲು ಎದುರಿಸಲಿದೆ.

ಬಳ್ಳಾರಿಯಲ್ಲಿ ರಾಷ್ಟ್ರೀಯ ಕಬಡ್ಡಿ ಶಿಬಿರ

ಬಳ್ಳಾರಿ: ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ, ಮಶಾಲ್ ಸ್ಪೋರ್ಟ್ಸ್‌ನ ಸಹಯೋಗದಲ್ಲಿ, ಬಳ್ಳಾರಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್‌ನಲ್ಲಿ ಹೈ-ಪರ್ಫಾರ್ಮೆನ್ಸ್ ಶಕ್ತಿ ಮತ್ತು ಕಂಡೀಷನಿಂಗ್ ಶಿಬಿರವನ್ನು ಪ್ರಾರಂಭಿಸಿತು. ಶುಕ್ರವಾರವೇ ಶುರುವಾದ ಈ ಶಿಬಿರ ಏಪ್ರಿಲ್ 2ರವರೆಗೆ ನಡೆಯಲಿದೆ. ಶಿಬಿರವು ಭಾರತದ ಕಬಡ್ಡಿ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಪ್ರಮುಖ ಹೆಜ್ಜೆಯಾಗಿದೆ.

ಈ ಉಪಕ್ರಮವು ಮಶಾಲ್ ಸ್ಪೋರ್ಟ್ಸ್ ಮತ್ತು ಕಬಡ್ಡಿ ಆಟಗಾರರ ಸಮಗ್ರ ಅಭಿವೃದ್ಧಿ ಮತ್ತು ಕಲ್ಯಾಣದತ್ತದ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ. ಜೊತೆಗೆ, ಏಷ್ಯನ್ ಗೇಮ್ಸ್ ಸೇರಿದಂತೆ ಪ್ರಮುಖ ಅಂತಾರಾಷ್ಟ್ರೀಯ ಸ್ಪರ್ಧೆಗಳ ಮುನ್ನ ಭಾರತದಿಗಾಗಿ ಬಲಿಷ್ಠ ಪ್ರತಿಭೆಗಳ ಸರಪಳಿಯನ್ನು ನಿರ್ಮಿಸಲು ಸಹಕಾರಿಯಾಗುತ್ತದೆ.

ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷರಾದ ವಿಭೋರ್ ವಿನೀತ್ ಜೈನ್ ಮಾತನಾಡಿ, ಭಾರತದಲ್ಲಿ ಕಬಡ್ಡಿಯ ಮಟ್ಟವನ್ನು ಹೆಚ್ಚಿಸುವ ನಮ್ಮ ಪ್ರಯತ್ನಗಳಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಮಶಾಲ್ ಸ್ಪೋರ್ಟ್ಸ್‌ನೊಂದಿಗೆ ಸಹಕರಿಸುವ ಮೂಲಕ, ನಮ್ಮ ಆಟಗಾರರಿಗೆ ಆಧುನಿಕ ತರಬೇತಿ ವಿಧಾನಗಳು, ವೈಜ್ಞಾನಿಕ ಬೆಂಬಲ ವ್ಯವಸ್ಥೆಗಳು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಸಾಧಿಸಲು ಅಗತ್ಯವಿರುವ ಹೈ-ಪರ್ಫಾರ್ಮೆನ್ಸ್ ವಾತಾವರಣವನ್ನು ಒದಗಿಸುತ್ತಿದ್ದೇವೆ ಎಂದರು.

ಜಾಫರ್ ಇಕ್ಬಾಲ್‌ಗೆ ಹಾಕಿ ಜೀವಮಾನ ಸಾಧನೆ ಪ್ರಶಸ್ತಿ

ಹೊಸದಿಲ್ಲಿ: ಹಾಕಿ ದಿಗ್ಗಜ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ. ಮಿಡಲ್ ಫೀಲ್ಡರ್ ಹಾರ್ದಿಕ್ ಸಿಂಗ್ ಮತ್ತು ನವನೀತ್ ಕೌರ್ ಭಾರತದ ವಾರ್ಷಿಕ ಹಾಕಿ ಆಟಗಾರ ಎಂಬ ಪ್ರಶಸ್ತಿ ಮಾಡಲಾಗಿದೆ. ಶುಕ್ರವಾರದಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ನೇತೃತ್ವದಲ್ಲಿ ಕಾರ್ಯಕ್ರಮವೊಂದು ನಡೆಯಿತು. ವರ್ಷಾದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಮಹಿಳೆಯರ ತಂಡದ ನವನೀತ್ ಕೌರ್ ಹಾಗೂ ಪುರುಷರ ತಂಡದ ಹಾರ್ದಿಕ್ ಸಿಂಗ್ ಅವರಿಗೆ ವರ್ಷದ ಆಟಗಾರ ಪ್ರಶಸ್ತಿ ನೀಡಲಾಗಿದೆ. ಇದರ ಜೊತೆಗೆ 20 ಲಕ್ಷ ರೂ. ನಗದು ಬಹುಮಾನ ಕೂಡ ನೀಡಲಾಗಿದೆ. 1980ರ ಒಲಿಂಪಿಕ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜಾಫರ್ ಇಕ್ಬಾಲ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ. ಏಷ್ಯನ್ ಕಪ್‌ಗಳಲ್ಲೂ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡ ತಂಡದ ಭಾಗವಾಗಿದ್ದ ಅವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5936

ಎಡದಿಂದ ಬಲಕ್ಕೆ
2.ತನ್ನ ತಾನೇ ಹೊಗಳಿಕೊಳ್ಳುವುದು (5)
5.ಸಂಗೀತಕ್ಕೆ ಮಾರುಹೋಗುವವನು (4)
6.ದೇವ-ದೇವತೆಗಳ ನೂರು ಹೆಸರುಗಳು (4)
7.ಈತ ತಂದೆಯ ತಮ್ಮ (2)
8.ಹಾರುವಿಕೆ-ಜಿಗಿತವಿದು (2)
10.ನಡುವ ಕ್ರಿಯೆಲ್ಲಿ ತಿರುಗಿ ಕಾಣುತ್ತಿದೆ (2)
13.ತಲೆಕೆಳಗಾಗಿ ಇಟ್ಟ ಬದಿರಕೋಲು (2)
15.ಅಂಕುಡೊಂಕಾದ ಚಲನೆಯಿದು (4)
17.ಅರ-ಗಿಣ ಒಳಗೊಂಡ ಹೆಬ್ಬಾವು (4)
18.ಪ್ರಚಾರಕರೊಂದಿಗೆ ಬಂದ ಸೇವಕ (5)

ಮೇಲಿನಿಂದ ಕೆಳಕ್ಕೆ
1.ಮಾರನಿಗೆ ಕಂಡ ಹೂ ಕಟ್ಟಿ ಮಾರುವವ (4)
2.ಹತ್ತಿರದವರೊಂದಿಗೆ ಮಾಡುವ ಪರಾಮರ್ಶೆ (5)
3.ಆಕರ್ಷಣೆಯ ಸಮಾನಪದ (3)
4.ಕಬ್ಬಿನಿಂದ ಬೆಲ್ಲ ತಯಾರಿಸುವ ಸ್ಥಳ (4)
6.ಶತ ಮೊದಲಿರುವ ವಸ್ತುವಿನ ಒಂದು ತುಂಡು (3)
9.ಆತ್ಮಸ್ನೇಹ ಹೊಂದಿದ ಹೆಣ್ಣು ಸಂಗಾತಿ (3)
11.ಜೀವಿಗಳ ಉಸಿರಾಟಕ್ಕೆ ಅಗತ್ಯ ಅನಿಲ (5)
12.ಒಂಬತ್ತು ದಿನ ಆಚರಿಸುವ ಹಬ್ಬ (4)
14.ಇದು ವೇದನೆಯ ಕೂಗು (4)
16.ವಿಘ್ನ ನಿವಾರಕ-ವಿನಾಯಕ (3)

5935 ಉತ್ತರ

ಎಡದಿಂದ ಬಲಕ್ಕೆ:
3.ಸುಶೀಲ 4.ರಚಿತ
5.ಸಾಗರ 6.ನಸುನಗು
8.ಸಮಾನ 10.ಸಕಲ
11.ವಕಾಲತ್ತು 14.ಕಲಾಪ
16.ಮಿಗಿಲು 17.ಕೌಶಿಕ

ಮೇಲಿನಿಂದ ಕೆಳಕ್ಕೆ:
1.ನಕಾರ 2.ಪತನ
3.ಸುಮನ 4.ರಸಾಯನ
7.ಗುಣಕ 9.ಮಾಧವ
10.ಸವಕಲು 12.ಕಾರಕ
13.ಸಮಿತ್ತು 15.ಪಠಣ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಾರ್ನಿಂಗ್ ಶೋ
ಶನಿವಾರ 28 ಮಾರ್ಚ್ 2026, ಬೆಂಗಳೂರು

ಜೂನ್ 26ರಂದು ಮೋಡ ಕವಿದ ವಾತಾವರಣ

ಸಿಂಪಲ್ ಸುನಿ ಅವರ ನಿರ್ದೇಶನ ಸಾರಥ್ಯದ ಬಹು ನಿರೀಕ್ಷಿತ ಚಿತ್ರ ಮೋಡ ಕವಿದ ವಾತಾವರಣ, ಸುನಿ ಅವರ ಶಿಷ್ಯ ಶೀಲಮ್ ಎಂ.ಸ್ವಾಮಿ ಈ ಚಿತ್ರದ ಮೂಲಕ ನಾಯಕನಾಗಿ ಕನ್ನಡ ಚಿತ್ರರಂಗದಲ್ಲಿ ಹೊಸ ಹೆಜ್ಜೆ ಇಟ್ಟಿದ್ದಾರೆ. ಈ ಹಿಂದೆ ಕೆಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದ್ದ ಶೀಲಮ್ ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ, ಈಗಾಗಲೇ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೊನೇ ಹಂತದಲ್ಲಿರುವ ಈ ಚಿತ್ರವು ಜೂನ್ 26ರಂದು ರಾಜ್ಯಾದ್ಯಂತ ತೆರೆಕಾಣುತ್ತಿದೆ.

ಸಿಂಪಲ್‌ಸುನಿ ಅವರ ನಿರ್ದೇಶನದ ಸಿಂಪಲ್ಲಾಗೊಂದ್ ಲವ್ ಸ್ಟೋರಿ, ಬಜಾರ್, ಅವರೇಶನ ಅಲಮೇಲಮ್ಮ ಸೇರಿದಂತೆ ತನ್ನ ಬಹುತೇಕ ಚಿತ್ರಗಳಲ್ಲಿ ಹೊಸ ಪ್ರತಿಭೆಗಳನ್ನು ಇಟ್ಟುಕೊಂಡು ಸಿನಿಮಾ ನಿರ್ದೇಶಿಸಿ ಗೆದ್ದಿರುವ ನಿರ್ದೇಶಕ ಸಿಂಪಲ್ ಸುನಿ ಅವರೀಗ ತಮ್ಮದೇ ಗರಡಿಯ ಹುಡುಗ ಶೀಲಮ್ ಎಂ.ಸ್ವಾಮಿ ಅವರನ್ನು ಹೀರೋ ಆಗಿ ಲಾಂಚ್ ಮಾಡಿದ್ದಾರೆ. ಸುನಿ ಅವರೀಗ ಮೋಡ ಕವಿದ ವಾತಾವರಣ ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಹೊಂದಿರುವ ಮೋಡ ಕವಿದ ವಾತಾವರಣ ಚಿತ್ರದಲ್ಲಿ ಶೀಲಮ್ ಎಂ ಸ್ವಾಮಿ ಅವರ ಜೊತೆ ನಾಯಕಿಯರಾಗಿ ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ನಟಿಸಿದ್ದಾರೆ.

ಮೋಡ ಕವಿದ ವಾತಾವರಣ ಚಿತ್ರದ ನಾಯಕನಟ ಶೀಲಮ್ ಎಂ.ಸ್ವಾಮಿ ಅವರು ಚಿತ್ರರಂಗಕ್ಕೆ ಹೊಸಬರೇನಲ್ಲ, ನಿರ್ದೇಶಕ ಸಿಂಪಲ್ ಸುನಿ ಅವರೊಂದಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದವರು. ಈಗ ನಾಯಕನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಈ ಬಾರಿ ಸಿಂಪಲ್ ಸುನಿ ಅವರು ತಮ್ಮ ನಿರ್ದೇಶನದ ಹೊಸ ಚಿತ್ರದಲ್ಲಿ ತನ್ನ ಶಿಷ್ಯ ಶೀಲಮ್ ಸ್ವಾಮಿ ಅವರನ್ನು ಹೀರೋ ಮಾಡಿದ್ದಾರೆ. ಹಾಗಂತ ಶೀಲಮ್ ತೆರೆಮೇಲೆ ಇದೇ ಮೊದಲ ಬಾರಿಗೆ ನಟಿಸುತ್ತಿರೋದೇನೂ ಅಲ್ಲ, ಈ ಹಿಂದೆ ಕೆಲವು ಸಿನಿಮಾಗಳಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನು ಶೀಲಂ ಅವರು ನಿರ್ವಹಿಸಿದ್ದಾರೆ. ಇದೀಗ ಹೀರೋ ಆಗಿ ಚಿತ್ರರಂಗದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿಕೊಂಡಿರುವ ಮೋಡ ಕವಿದ ವಾತಾವರಣ' ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೊನೇ ಹಂತದಲ್ಲಿದ್ದು, ಇದೀಗ ಚಿತ್ರದ ಬಿಡುಗಡೆ ದಿನಾಂಕವನ್ನೂ ಸಹ ಅನೌನ್ಸ್ ಮಾಡಿದೆ. 2026ರ ಜೂನ್ 26ರಂದು ಈ ಚಿತ್ರ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣಲಿದೆ,

ಈ ವೇಳೆ ನಿರ್ದೇಶಕ ಸಿಂಪಲ್ ಸುನಿ ಮಾತನಾಡುತ್ತ ಮೋಡ ಕವಿದ ವಾತಾವರಣ ಚಿತ್ರವನ್ನು ಜೂನ್ 26ರಂದು ತೆರೆಗೆ ತರಲು ಯೋಜನೆ ಹಾಕಿಕೊಂಡಿದ್ದೇವೆ. ಈ ಚಿತ್ರದಲ್ಲಿ ರಿವರ್ಸ್ ಸ್ಕ್ರೀನ್ ಪ್ಲೇ ಇದೆ. ಈಗಾಗಲೇ ರಿಲೀಸಾಗಿರುವ ಚಿತ್ರದ ಪ್ರೊಮೋಷನಲ್ ಹಾಡು ಸಂಗೀತ ಪ್ರಿಯರ ಮನ ಗೆದ್ದಿದೆ, ನಮ್ಮ ಚಿತ್ರ ಇಷ್ಟು ಚೆನ್ನಾಗಿ ಮೂಡಿಬರಲು ಕಲಾವಿದರು, ತಂತ್ರಜ್ಞರ ಸಹಕಾರವೇ ಕಾರಣ. ನಿರ್ಮಾಪಕರು ಚಿತ್ರಕ್ಕೆ ಏನು ಬೇಕೋ ಅದನ್ನು ಒದಗಿಸಿಕೊಟ್ಟಿದ್ದಾರೆ, ಶೀಲಮ್ ಈ ಚಿತ್ರಕ್ಕಾಗಿ ಸಾಕಷ್ಟು ವರ್ಕೌಟ್ ಜತೆಗೆ ತುಂಬಾ ಡೆಡಿಕೇಷನ್ ಇದೆ, ನಾಯಕಿ ಮೋಕ್ಷಾ ಅವರು ತೆರೆಮೇಲೆ ಬೇರೆಯದೇ ರೀತಿಯಲ್ಲಿ ಕಾಣಿಸುತ್ತಾರೆ. ಸಾತ್ವಿಕಾ ಕೂಡ ಚೆನ್ನಾಗಿ ನಟಿಸಿದ್ದಾರೆ ಎಂದರು.

ನಾಯಕನಟ ಶೀಲಮ್ ಮಾತನಾಡಿ, ನನ್ನ ಬಹುದಿನಗಳ ಕನಸು ಈ ಚಿತ್ರದ ಮೂಲಕ ನನಸಾಗಿದೆ, ಮೋಡ ಕವಿದ ವಾತಾವರಣ ಸಿನಿಮಾದ ಪ್ರತಿ ಮೊಮೆಂಟ್ ನನ್ನ ಕನಸು ನನಸಾದ ಕ್ಷಣ. ಪಾತ್ರವೂ ತುಂಬಾ ಚೆನ್ನಾಗಿದೆ, ಒಂದೊಳ್ಳೆ ಟೆಕ್ನಿಕಲ್ ಟೀಂ ಜೊತೆ ಕೆಲಸ ಮಾಡಿರುವುದು ನನ್ನ ಅದೃಷ್ಟ ಎಂದು ಹೇಳಿದರು.

ರಿಲೀಸಾಗಿರುವ ನನ್ನೆದೆಯ ಹಾಡೊಂದನು ಮೆಲೋಡಿ ಗೀತೆಯಲ್ಲಿ ಶೀಲಮ್ ಹಾಗೂ ನಾಯಕಿಯರಾದ ಸಾತ್ವಿಕಾ ಮತ್ತು ಮೋಕ್ಷಾ ಕುಶಾಲ್ ಹೆಜ್ಜೆ ಹಾಕಿದ್ದಾರೆ. ಸುನಿ ಅವರ ಸಾಹಿತ್ಯವಿರುವ ಈ ಗೀತೆಗೆ ಸಂಚಿತ್ ಹೆಗ್ಡೆ ಹಾಗೂ ಜೂಡಾ ಸ್ಯಾಂಡಿ ಧ್ವನಿಯಾಗಿದ್ದಾರೆ.

ಈ ಹಿಂದೆ ಒಂದು ಸರಳ ಪ್ರೇಮಕಥೆ ಚಿತ್ರವನ್ನು ನಿರ್ಮಿಸಿದ್ದ ರಾಮ್ ಮೂವೀಸ್ ಈ ಚಿತ್ರವನ್ನು ನಿರ್ಮಾಣ ಮಾಡಿದೆ. ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೇಳವಾಡಿ ಹಾಗೂ ಗೋಪಾ ರಮೇಶ್ ಸೇರಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮೋಡ ಕವಿದ ವಾತಾವರಣ ಸಿನಿಮಾಗೆ ಸಂತೋಷ್ ರೈ ಪಾತಾಜೆ ಅವರು ಕ್ಯಾಮೆರಾ ಹಿಡಿದಿದ್ದು, ಜೂಡಾ ಸ್ಯಾಂಡಿ ಹಾಗೂ ಜೇಡ್ ಅವರ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಅವರ ಸಂಕಲನ ಈ ಚಿತ್ರಕ್ಕಿದೆ.

ಆಯುಧ
ಎರಡು ಕುಟುಂಬಗಳ ಬಲಿಪಡೆದ ಸಣ್ಣ ತಪ್ಪು

ಚಿತ್ರ ವಿಮರ್ಶೆ

ಸತ್ಯಮೂರ್ತಿ

ದಾರಿಯಲ್ಲಿ ಪುಟ್ಟ ಮಗುವಿಗೆ ಸಿಕ್ಕ ಒಂದು ಮೊಬೈಲ್ ಫೋನ್ ಏನೆಲ್ಲ, ಅನಾಹುತ ಅವಘಡಗಳಿಗೆ ಕಾರಣವಾಯಿತು, ಆ ಮಗುವಿನ ಇಡೀ ಕುಟುಂಬ ಹೇಗೆ ಸರ್ವನಾಶವಾಯಿತು ಎಂಬುದನ್ನು ನಿರ್ದೇಶಕ ದೇವರಾಜ್‌ಕುಮಾರ್ ಆಯುಧ ಚಿತ್ರದ ಮೂಲಕ ಕುತೂಹಲಕಾರಿ ಕಥೆಯೊಂದಿಗೆ ನಿರೂಪಿಸಿದ್ದಾರೆ, ಚಿತ್ರದ ಆರಂಭದಲ್ಲೇ ನಾಯಕ ದೇವು(ದೇವರಾಜ್)ನನ್ನು ನಕಲಿ ಪೊಲೀಸರು ಎನ್‌ಕೌಂಟರ್ ಮಾಡಲು ನಿರ್ಜನ ಪ್ರದೇಶಕ್ಕೆ ಜೀಪ್‌ನಲ್ಲಿ ಕರೆತರುತ್ತಾರೆ, ನಂತರ ದೇವು ಸತ್ತೇ ಹೋದನೆಂದುಕೊಂಡು ಆತನ ದೇಹವನ್ನು ಸಮುದ್ರಕ್ಕೆಸೆದು ತೆರಳುತ್ತಾರೆ. ಅದೇ ಸಮಯದಲ್ಲಿ ತನ್ನ ತಂದೆಯ ಶ್ರಾದ್ಧಕರ್ಮ ನೆರವೇರಿಸಲು ಸ್ನೇಹಿತೆಯ ಜತೆ ಬಂದಿದ್ದ ಕಣ್ಮಣಿ(ಅಮೃತಾ) ತೀರದಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿದ್ದ ದೇವುನನ್ನು ಕಂಡು ಮರುಕದಿಂದ ಆಸ್ಪತ್ರೆಗೆ ಸೇರಿಸುತ್ತಾಳೆ, ಅಲ್ಲದೆ ಸ್ಕೂಟರ್ ಅಪಘಾತದಲ್ಲಿ ನಿಧನರಾದ ತನ್ನ ತಂದೆಗೆ ಹಲವುಬಾರಿ ಕಾಲ್ ಮಾಡಿದ್ದು ಈತನೇ ಎನ್ನುವುದು ತಿಳಿದ ಮೇಲಂತೂ ಈತನಿಂದ ತನ್ನ ತಂದೆಯ ಕೊಲೆಗಾರರ ಸುಳಿವನ್ನು ಪತ್ತೆ ಹಚ್ಚಬಹುದೆಂದು ಹೆಚ್ಚು ಕಾಳಜಿಯಿಂದ ನೋಡಿಕೊಳ್ಳುತ್ತಾಳೆ. ಆದರೆ ದೇವು ತಲೆಗೆ ಬಲವಾದ ಪೆಟ್ಟು ಬಿದ್ದಿರುವ ಕಾರಣ ಹಿಂದಿನದೆಲ್ಲ ಮರೆತು ಅಬ್‌ನಾರ್ಮಲ್ ಸ್ಥಿತಿಗೆ ತಲುಪಿರುತ್ತಾನೆ. ಆತ ಗುಣಮುಖ ನಾಗುವುದೂ ಕಷ್ಟಕರ ಎಂದು ವೈದ್ಯರೇ ಹೇಳಿದರೂ, ಆತ ಗುಣಮುಖ ನಾಗಬಹುದು ಎಂಬ ಆಶಾ ಭಾವನೆಯನ್ನು ಕಣ್ಮಣಿ ಇಟ್ಟುಕೊಂಡಿರುತ್ತಾಳೆ, ಆತನನ್ನೇ ಮದುವೆಯೂ ಮಾಡಿಕೊಳ್ಳುತ್ತಾಳೆ.

ಈ ಎಲ್ಲ ಘಟನೆಗಳು ನಡೆಯುವುದಕ್ಕೂ ಮೊದಲು ದೇವು ಒಬ್ಬ ಪ್ರತಿಭಾವಂತ ಬ್ಯಾಡ್ಮಿಂಟನ್ ಕೋಚ್ ಆಗಿರುತ್ತಾನೆ. ಅಕ್ಕನ ಮಗಳಾದ ಜಾಹ್ನವಿ(ಸಂಹಿತಾ ವಿನ್ಯಾ)ಯನ್ನೇ ವಿವಾಹವಾಗಬೇಕೆಂದುಕೊಂಡಿರುತ್ತಾನೆ. ಆತನ ಅಕ್ಕ ಭಾವ ಕೂಡ ಇದಕ್ಕೆ ಸಮ್ಮತಿಸಿರುತ್ತಾರೆ, ಅದೇ ಸಮಯದಲ್ಲಿ ನಡೆದ ಒಂದು ಘಟನೆ ಈ ಎಲ್ಲಾ ನಿರೀಕ್ಷೆಗಳನ್ನು ಹುಸಿಮಾಡುತ್ತದೆ. ದೇವು ಅಕ್ಕನ ಕುಟುಂಬವೇ ಸರ್ವನಾಶವಾಗುತ್ತದೆ, ಅಲ್ಲದೆ ನಾಯಕಿ ಕಣ್ಮಣಿಯ ತಂದೆಯನ್ನೂ ಸಹ ಅದೇ ದುರುಳರು ಅಪಘಾತ ಮಾಡಿ ಕೊಂದು ಹಾಕುತ್ತಾರೆ, ಇದಕ್ಕೆಲ್ಲ ಕಾರಣವೇನು ? ಆ ಮೊಬೈಲ್‌ನಲ್ಲಿ ಅಂಥ ರಹಸ್ಯವಾದರೂ ಏನಿತ್ತು ಎನ್ನುವುದೇ ಆಯುಧ ಚಿತ್ರದ ಕ್ಲೈಮ್ಯಾಕ್ಸ್, ಇಡೀಚಿತ್ರ ಆರಂಭದಿಂದ ಅಂತ್ಯದ ಸೀನ್‌ವರೆಗೂ ಕುತೂಹಲ ಕಾಯ್ದುಕೊಂಡು ಹೋಗಿದೆ, ಚಿತ್ರದಲ್ಲಿ ಸಾಕಷ್ಟು ಪಾತ್ರಗಳು ಬಂದು ಹೋದರೂ ಎಲ್ಲ ಪಾತ್ರಗಳು ಚಿತ್ರಕಥೆಗೆ ಪೂರಕವಾಗಿದ್ದು, ನೆನಪಲ್ಲುಳಿಯುತ್ತವೆ, ನಾಯಕ ದೇವು ಪಾತ್ರದಲ್ಲಿ ದೇವರಾಜ್‌ಕುಮಾರ್ ಅವರದು ಪಳಗಿದ ಅಭಿನಯ, ತಾನು ನಿರ್ದೇಶನಕ್ಕೂ ಸೈ, ಅಭಿನಯಕ್ಕೂ ಸೈ ಎಂದು ಈ ಮೂಲಕ ತೋರಿಸಿಕೊಟ್ಟಿದ್ದಾರೆ, ಚಿತ್ರದ ಕೆಲ ಸನ್ನಿವೇಶಗಳನ್ನು ನೋಡುವಾಗ ಸುದೀಪ್ ಅವರ ಹುಚ್ಚ ಸಿನಿಮಾ ನೆನಪಾಗುತ್ತದೆ, ದೇವರಾಜ್ ಚಿತ್ರದಲ್ಲಿ ಸಂಗೀತದ ಜವಾಬ್ದಾರಿಯನ್ನೂ ಸಹ ನಿಭಾಯಿಸಿದ್ದು ಬಹುಮುಖ ಪ್ರತಿಭಾವಂತಿಕೆ ಪ್ರದರ್ಶಿಸಿದ್ದಾರೆ. ನಾಯಕಿ ಸಂಹಿತಾ ವಿನ್ಯಾ ಅವರದ್ದು ದುರಂತ ಪಾತ್ರವಾದರೂ ಥೇಟರಿನಿಂದ ಹೊರಬಂದ ಮೇಲೂ ಸಹ ಕಾಡುತ್ತದೆ, ಮತ್ತೊಬ್ಬ ನಾಯಕಿ ಅಮೃತಾ ಲವಲವಿಕೆಯ ಅಭಿನಯ ನೀಡಿದ್ದಾರೆ, ಚಿತ್ರದ ಎಲ್ಲಾ ಹಾಡುಗಳು ಇಂಪಾಗಿದ್ದು ಸಂಗೀತ ಗುನುಗುವಂತಿದೆ, ಚಿತ್ರದ ಕ್ಯಾಮೆರಾ ವರ್ಕ್ ಕೂಡ ಅಚ್ಚುಕಟ್ಟಾಗಿದೆ.

ಶ್ರೀಕೃಷ್ಣ ಚಿತ್ರದ ಟೀಸರ್ ಎಲ್ಲಮ್ಮ ಹಾಡು ಬಿಡುಗಡೆ

ಈ ಹಿಂದೆ ಬ್ರಹ್ಮರಾಕ್ಷಸ ಎಂಬ ಚಿತ್ರ ಮಾಡಿದ್ದ ಶಂಕರ್ ರಾಜ ವರ್ಮಾ ಇದೀಗ ಶ್ರೀಕೃಷ್ಣ ಎಂಬ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುವುದರ ಜತೆಗೆ ಪ್ರಮುಖ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ನಾಯಕಿಯಾಗಿ ಚೈತ್ರಾ ತೋಟದ ಅವರು ಬಣ್ಣ ಹಚ್ಚಿದ್ದಾರೆ. ಗುರುವಾರ ನಡೆದ ಸಮಾರಂಭದಲ್ಲಿ 'ಶ್ರೀಕೃಷ್ಣ' ಚಿತ್ರದ ಟೀಸರ್ ಹಾಗೂ ಉಧೋ ಉಧೋ ಎಲ್ಲಮ್ಮ ಎಂಬ ಹಾಡನ್ನು ಕೂಡ ಬಿಡುಗಡೆ ಮಾಡಲಾಯಿತು.

ವೇದಿಕೆಯಲ್ಲಿ ಶ್ರೀಕೃಷ್ಣ ಚಿತ್ರದ ನಿರ್ದೇಶಕ, ನಾಯಕ ನಟ ಶಂಕರ್ ರಾಜವರ್ಮಾ ಮಾತನಾಡಿ ಚಿತ್ರರಂಗಕ್ಕೂ ಬರುವ ಮೊದಲು ನಾನೊಬ್ಬ ಪೊಲೀಸ್ ಆಗಬೇಕೆಂದುಕೊಂಡಿದ್ದೆ. ಸಿನಿಮಾ ನಿರ್ದೇಶನ ಮಾಡುತ್ತೇನೆ ಅಂದ್ಕೊಂಡಿರಲಿಲ್ಲ, ನನ್ನ ಮೊದಲ ಚಿತ್ರ ಬ್ರಹ್ಮರಾಕ್ಷಸ ಕಾರಣಾಂತರಗಳಿಂದ ರಿಲೀಸಾಗಿಲ್ಲ, ಆ ಚಿತ್ರದಲ್ಲಿ ಕೆಲಸ ಮಾಡಿದ ಬಹುತೇಕ ಕಲಾವಿದರು ಹಾಗೂ ತಂತ್ರಜ್ಞರು ಈ ಚಿತ್ರದಲ್ಲೂ ಸಹ ಕೆಲಸ ಮಾಡಿದ್ದಾರೆ. ನನಗೆ ಮತ್ತೆ ಅವಕಾಶ ಸಿಗಲು ಆ ಕೃಷ್ಣನೇ ಸಹಾಯ ಮಾಡಿದ. ನಮ್ಮ ಇಡೀ ತಂಡ ಸೇರಿ ಹಾಕಿದ ಎಫರ್ಟ್‌ನಿಂದಲೇ ಈ ಚಿತ್ರ ಇಷ್ಟು ಚೆನ್ನಾಗಿ ಮೂಡಿಬಂದಿದೆ. 'ಹುಟ್ಟು ದರಿದ್ರವಾಗಿದ್ದರೂ, ಸಾವು ಚರಿತ್ರೆಯಾಗಬೇಕು' ಎನ್ನುವುದೇ ನಮ್ಮ ಚಿತ್ರದ ಎಳೆ. ನಾಯಕನ ಜೀವನದಲ್ಲಿ ಒಂದು ಘಟನೆ ನಡೆದುಹೋಗುತ್ತೆ. ಆ ಘಟನೆಯಿಂದ ಆತ ಹೊರಬರಲಾಗದೆ ಇದ್ದಾಗ ಆ ದೇವರು ಮಗು ಧೈರ್ಯವಾಗಿ ಹೋಗು ನಾನಿದ್ದೇನೆ ಎಂದು ಅಭಯ ನೀಡುತ್ತಾನೆ. ನಾಯಕ ಸೇರಿ ಆ ಮೂವರು ಹುಡುಗರು ಒಂದು ಸಂದರ್ಭದಲ್ಲಿ ಜೈಲಿಗೂ ಹೋಗ್ತಾರೆ. ದೇವರು ಹೇಗೆ ಅವರನ್ನು ಅಲ್ಲಿಂದ ಬಚಾವ್ ಮಾಡುತ್ತಾನೆ ಎನ್ನುವುದೇ ಚಿತ್ರದ ತಿರುಳು. ಸಧ್ಯದಲ್ಲೇ ಚಿತ್ರದ ಟ್ರೈಲರನ್ನು ಸಹ ರಿಲೀಸ್ ಮಾಡುತ್ತಿದ್ದೇವೆ ಎಂದರು.

ನಾಯಕಿ ಚೈತ್ರಾ ತೋಟದ ಮಾತನಾಡುತ್ತ ನಾನು ಉತ್ತರ ಕರ್ನಾಟಕದ ಹುಬ್ಬಳ್ಳಿಯವಳು. ಇಲ್ಲಿ ಹಿಂದೆ ಮುಂದೆ ಯಾರೂ ಇಲ್ಲದ ಹುಡುಗಿಯೊಬ್ಬಳು ಸಮಾಜದಲ್ಲಿ ಯಾವರೀತಿ ಕಷ್ಟಪಡುತ್ತಾಳೆ. ನಂತರ ಆಕೆಯ ಜೀವನದಲ್ಲಿ ಎಂಟ್ರಿ ಕೊಡುವ ನಾಯಕ ಹೇಗೆ ಆಕೆಗೆ ಹೊಸಜೀವನ ರೂಪಿಸುತ್ತಾನೆಂದು ನಿರ್ದೇಶಕರು ತೋರಿಸಿದ್ದಾರೆ ಎಂದರು.

ನಿರ್ಮಾಪಕರಲ್ಲೊಬ್ಬರಾದ ಅಜಯ್ ಕುಮಾರ್ ಮಾತನಾಡಿ ನಾನು ಇಂಟೀರಿಯರ್ ಡಿಸೈನ್ ಕೆಲಸ ಮಾಡಿಕೊಂಡಿದ್ದೇನೆ, ಗೆಳೆಯರು, ಗೆಳೆಯರಿಗೋಸ್ಕರ ನಿರ್ಮಾಣ ಮಾಡಿದಂಥ ಚಿತ್ರವಿದು. ಚಿತ್ರದಲ್ಲೂ ಅದೇ ಕಂಟೆಂಟ್ ಹೇಳಿದ್ದೇವೆ. ಚಿಕ್ಕವನಿದ್ದಾಗ ಪೂಜೆಗೆ ಇಟ್ಟ ಹಣ ತಗೊಂಡು ಹೋಗಿ ಸಿನಿಮಾ ನೋಡಿದ್ದೆ ಎಂದರು. ಮತ್ತೊಬ್ಬ ನಿರ್ಮಾಪಕ ಮೋಹನ್ ನೆಲಮಂಗಲ ಮಾತನಾಡಿ, ನಾವೆಲ್ಲ ಕಷ್ಟಪಟ್ಟು ಈ ಸಿನಿಮಾ ಮಾಡಿದ್ದೇವೆ ಎಂದರು.

ನಟಿ ಸ್ನೇಹ ಮಾತನಾಡಿ ಮುಗ್ಧತೆಯಿಂದ ಕೂಡಿದ ಮುಗ್ಧ ಪಾತ್ರ ನನ್ನದು ಎಂದರೆ, ಪ್ರದೀಪ್ ಪೂಜಾರಿ ಮಾತನಾಡಿ ನಾನು ಬ್ರಹ್ಮರಾಕ್ಷಸ ಚಿತ್ರದಲ್ಲೂ ನಟಿಸಿದ್ದೆ, ಇದರಲ್ಲೂ ನಿರ್ದೇಶಕರು ಒಂದೊಳ್ಳೆ ಪಾತ್ರವನ್ನು ಕೊಟ್ಟಿದ್ದಾರೆ ಎಂದರು.

ಸಂಗೀತ ನಿರ್ದೇಶಕ ಎಂ.ಎಸ್. ತ್ಯಾಗರಾಜ್ ಮಾತನಾಡಿ ಪರಿವರ್ತನೆ ಜಗದ ನಿಯಮ ಎಂಬುದನ್ನು ಈ ಚಿತ್ರದ ಮೂಲಕ ನಿರ್ದೇಶಕರು ಹೇಳಹೊರಟಿದ್ದಾರೆ. ಇದೊಂದು ಫ್ಯಾಮಿಲಿ ಎಂಟರ್‌ಟೈನರ್ ಆಗಿದ್ದು ಒಟ್ಟು ಐದು ಹಾಡುಗಳಿವೆ ಎಂದರು. ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಮಾತನಾಡಿ ಉಧೋ ಉಧೋ ಯಲ್ಲಮ್ಮ ಹಾಡಿಗೆ ಉತ್ತರ ಕರ್ನಾಟಕದಲ್ಲಿ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಎಂದರು.

ಪೆದ್ದಿ ಟೀಸರ್‌ನಲ್ಲಿ ಶಿವರಾಜ್‌ಕುಮಾರ್ ಧ್ವನಿ

ರಾಮ್‌ಚರಣ್ ಅಭಿನಯದ ಬಹುನಿರೀಕ್ಷಿತ ಪೆದ್ದಿ ಚಿತ್ರದ ಟೀಸರ್ ಶುಕ್ರವಾರ ಬಿಡುಗಡೆಯಾಗಿದೆ, ಈ ಚಿತ್ರದಲ್ಲಿ ನಟ ಶಿವರಾಜ್‌ಕುಮಾರ್ ಅವರು ನಟಿಸಿದ್ದಾರೆ, ಶಿವಣ್ಣ ಅವರ ಪಾತ್ರದ ಪೋಸ್ಟರನ್ನು ಈ ಹಿಂದೆ ಬಿಡುಗಡೆ ಮಾಡಲಾಗಿತ್ತು. ಚಿತ್ರದಲ್ಲಿ ಅವರ ಪಾತ್ರದ ಹೆಸರು ಗೌರನಾಯ್ಡು ಎಂಬುದು ಬಹಿರಂಗವಾಗಿದೆ. ನಿನ್ನೆ ಸಿನಿಮಾದ ಹೊಸ ಟೀಸರ್ ಬಿಡುಗಡೆಯಾದ ಬಳಿಕ ಶಿವಣ್ಣನ ಪಾತ್ರದ ಬಗ್ಗೆ ಸುಳಿವು ದೊರೆತಿದೆ.

ಈ ಹಿಂದೆ ಬಿಡುಗಡೆಯಾಗಿದ್ದ ಹಾಡು, ಟೀಸರ್ ನೋಡಿ, ಪೆದ್ದಿ ಸಿನಿಮಾದಲ್ಲಿ ರಾಮ್ ಚರಣ್ ಅವರದ್ದು ಹಳ್ಳಿ ಕ್ರಿಕೆಟಿಗನೊಬ್ಬನ ಪಾತ್ರ ಎಂದುಕೊಂಡಿದ್ದರು ಅವರ ಅಭಿಮಾನಿಗಳು. ಆದರೆ ಈಗ ಬಿಡುಗಡೆಯಾಗಿರುವ ಟೀಸರ್‌ನಲ್ಲಿ ರಾಮ್ ಚರಣ್ ಕುಸ್ತಿ ಪಟುವಾಗಿ ಕಾಣಿಸಿಕೊಂಡಿದ್ದಾರೆ. ಕುಸ್ತಿ ಪಟುವಿನಂತೆ ಲಂಗೋಟಿ ಧರಿಸಿ, ಕಟ್ಟುಮಸ್ತಾದ ದೇಹ ಪ್ರದರ್ಶಿಸುತ್ತಾ ಅಖಾಡದಲ್ಲಿ ಕುಸ್ತಿ ಆಡುತ್ತಿದ್ದಾರೆ.

ಶಿವರಾಜ್‌ಕುಮಾರ್ ಅವರು ಪೆದ್ದಿ ಸಿನಿಮಾದಲ್ಲಿ, ನಾಯಕ ರಾಮ್‌ಚರಣ್ ಅವರ ಗುರುವಿನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶುಕ್ರವಾರ ಬಿಡುಗಡೆಯಾಗಿರುವ ಟೀಸರ್‌ನಲ್ಲಿ ರಾಮ್‌ಚರಣ್ ಒಬ್ಬ ಕುಸ್ತಿಪಟುವಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರಾಮ್‌ಚರಣ್‌ಗೆ ಕುಸ್ತಿ ಪಟ್ಟುಗಳನ್ನು ಹೇಳಿಕೊಡುವ ಗುರುವಾಗಿ ಶಿವರಾಜ್‌ಕುಮಾರ್ ಅವರು ಕಾಣಿಸಿಕೊಂಡಿದ್ದಾರೆ. ಪೆದ್ದಿ ಸಿನಿಮಾದ ಟೀಸರ್ ಕನ್ನಡದಲ್ಲಿಯೂ ಬಿಡುಗಡೆಯಾಗಿದ್ದು, ಕನ್ನಡದ ಟೀಸರ್‌ನಲ್ಲಿ ಖುದ್ದು ಶಿವರಾಜ್ ಕುಮಾರ್ ಅವರೇ ಧ್ವನಿ ನೀಡಿದ್ದಾರೆ. ಕುಸ್ತಿ ಅಂದರೆ ಬ್ಯಾಟಿನಿಂದ ಬಾಲ್‌ನ ಹೊಡೆಯೋ ಆಟ ಅಲ್ಲ ಎಂದು ರಾಮ್‌ಚರಣ್‌ಗೆ ಕುಸ್ತಿಯ ಮಹತ್ವ ಹೇಳುವ ಸಂಭಾಷಣೆಯನ್ನು ಈ ಟೀಸರ್‌ನಲ್ಲಿ ಶಿವಣ್ಣ ಹೇಳಿದ್ದಾರೆ.

ಪೆದ್ದಿ ಸಿನಿಮಾದ ನಿರ್ದೇಶಕ ಬುಚ್ಚಿಬಾಬು ಸನಾ ಅವರು ಗುರುವಿನ ಪಾತ್ರಕ್ಕೆ ಶಿವರಾಜ್‌ಕುಮಾರ್ ಅವರೇ ಬೇಕೆಂದು ಕಾದು ಅವರಿಂದ ನಟನೆ ಮಾಡಿಸಿಕೊಂಡಿದ್ದಾರೆ. ಸಿನಿಮಾದ ಮುಹೂರ್ತ ನಡೆಯುವ ಮುಂಚೆಯೇ ನಿರ್ದೇಶಕ ಬುಚ್ಚಿಬಾಬು ಸನಾ ಅವರು ಶಿವಣ್ಣ ಅವರನ್ನು ಭೇಟಿ ಮಾಡಿ ಚಿತ್ರದ ಕತೆಯನ್ನು ವಿವರಿಸಿದ್ದರು. ಆ ಬಳಿಕ ಶಿವಣ್ಣ ಆಪರೇಷನ್‌ಗಾಗಿ ಅಮೆರಿಕಕ್ಕೆ ತೆರಳಿದ್ದರು. ಕೆಲತಿಂಗಳ ಕಾಲ ವಿಶ್ರಾಂತಿ ತೆಗೆದುಕೊಂಡರು. ಅನಾರೋಗ್ಯದಿಂದ ದೇಹದ ತೂಕವನ್ನೂ ಕಳೆದುಕೊಂಡರು. ಅಷ್ಟೆಲ್ಲ ಆದರೂ ಸಹ ಬುಚ್ಚಿಬಾಬು ಸನಾ, ಆ ಪಾತ್ರಕ್ಕೆ ಶಿವಣ್ಣನೇ ಇರಬೇಕೆಂದು ಕಾದು, ಶಿವಣ್ಣನ ಮನೆಗೆ ಬಂದು ಲುಕ್ ಟೆಸ್ಟ್ ಸಹ ಮಾಡಿದ್ದರು. ಕೊನೆಗೆ ಶಿವರಾಜ್ ಕುಮಾರ್ ಅವರು ಗೌರನಾಯ್ಡು ಪಾತ್ರಕ್ಕೆ ಬಣ್ಣ ಹಚ್ಚಿದರು.

ಪೆದ್ದಿ ಸಿನಿಮಾದಲ್ಲಿ ರಾಮ್‌ಚರಣ್, ಶಿವರಾಜ್ ಕುಮಾರ್ ಜೊತೆಗೆ ಜಾಹ್ನವಿ ಕಪೂರ್ ನಾಯಕಿಯಾಗಿ ನಟಿಸಿದ್ದಾರೆ. ಜಗಪತಿ ಬಾಬು, ಬೊಮನ್ ಇರಾನಿ ಇನ್ನೂ ಮುಂತಾದ ಪ್ರತಿಭಾವಂತ ಕಲಾವಿದರು ಪೆದ್ದಿ ಸಿನಿಮಾದಲ್ಲಿ ಬಣ್ಣ ಹಚ್ಚಿದ್ದಾರೆ. ಈ ಚಿತ್ರಕ್ಕೆ ಎ.ಆರ್. ರೆಹಮಾನ್ ಅವರು ಸಂಗೀತ ನೀಡಿದ್ದಾರೆ. ಅಲ್ಲದೆ ಈ ಚಿತ್ರಕ್ಕೆ ಹೆಸರಾಂತ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ಬಂಡವಾಳ ಹೂಡಿದೆ.

ಸಿನಿಪತ್ರಿಕೋದ್ಯಮದ ದಿಗ್ಗಜ ಕೆ.ಜೆ.ಕುಮಾರ್

ಕಳೆದ 11ರಂದು ಇಹಲೋಕ ತ್ಯಜಿಸಿದ ಹಿರಿಯ ಸಿನಿಮಾ ಪತ್ರಕರ್ತ ಕೆಜೆ. ಕುಮಾರ್ ವಿಷ್ಣು, ಅಂಬರೀಶ್ ಸೇರಿದಂತೆ ಕನ್ನಡದ ಬಹುತೇಕ ಸ್ಟಾರ್ ನಟರ ಆಪ್ತರಾಗಿದ್ದರು, ಪತ್ರಿಕೋದ್ಯಮದ ನಂಟು ಅವರಿಗೆ ತಂದೆಯಿಂದಲೇ ಬಂದ ಬಳುವಳಿ. ಉಡುಪಿಯ ಕೊರಂಗರಪಾಳ್ಯ ಗ್ರಾಮದ ರಘುರಾಮ್‌ಶೆಟ್ಟಿ ಮತ್ತು ಶಾರದಶೆಟ್ಟಿ ದಂಪತಿಯ ಮೊದಲ ಮಗನಾಗಿ ಕೆ.ಜಗದೀಶ್‌ಕುಮಾರ್ 1952ರ ನ.6ರಂದು ಜನಿಸಿದರು. ಮನೆಯವರು ಪ್ರೀತಿಯಿಂದ ಕರೆಯುತ್ತಿದ್ದ ಕುಮಾರ್ ಎಂಬ ಹೆಸರೇ ಮುಂದೆ ಕೆಜೆ ಕುಮಾರ್ ಆಯಿತು. ಅವರ ಬಾಲ್ಯದ ದಿನಗಳು ಸುಖವಾಗೇನೂ ಇರಲಿಲ್ಲ, ಕಡುಕಷ್ಟದಲ್ಲೇ ಬೆಳೆದರು. ಅವರು ಮೈಸೂರಿಗೆ ಬಂದಿದ್ದು ಆಕಸ್ಮಿಕ. ಬದುಕು ಕಟ್ಟಿಕೊಳ್ಳಲೆಂದು ನಂಜನಗೂಡು ಮುದ್ರಣಾಲಯದಲ್ಲಿ ಕೆಲಸಕ್ಕೆ ಸೇರಿದ ರಘುರಾಮ್ ಶೆಟ್ಟರು ಕುಟುಂಬದೊಂದಿಗೆ ಅಲ್ಲೇ ನೆಲೆಸಬೇಕಾಯಿತು, ಸಿಡುಬುರೋಗದಿಂದ ಸಹೋದರಿ ಶಾಲಿನಿ ಅಗಲಿದ ನಂತರ ಬೈಕ್ ಅಪಘಾತದಲ್ಲಿ ಸಹೋದರ ಕೆ.ಸುರೇಶ್ ಕೂಡ ಮೃತನಾದ ಘಟನೆ ಕೆ.ಜೆ.ಕುಮಾರ್ ಅವರ ಮನಸನ್ನು ಘಾಸಿಗೊಳಿಸಿತ್ತು,

ಇಂದು ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ದಿ.ಕೆ.ಜೆ.ಕುಮಾರ್ ಅವರ ನುಡಿನಮನ ಕಾರ್ಯಕ್ರಮ, ತನ್ನಿಮಿತ್ತ ಈ ಲೇಖನ

ಸ್ವತಂತ್ರ ಹೋರಾಟಗಾರ ಎ.ರಾಮಣ್ಣ ಸಂಪಾದಕತ್ವದ ವಿಜಯ ದಿನಪತ್ರಿಕೆಯಲ್ಲಿ ತಂದೆಯ ಜತೆಗೆ ಕುಮಾರ್ ಮತ್ತು ಸುರೇಶ್ ಕೆಲಸ ಕಲಿತರು, 12 ವರ್ಷದ ಹುಡುಗನಾಗಿದ್ದಾಗಲೇ ಪತ್ರಿಕೆಯ ಒಡನಾಟ ಬೆಳೆಸಿಕೊಂಡ ಕೆ.ಜೆ. ಕುಮಾರ್, ಕೊನೆ ಉಸಿರಿನವರೆಗೂ ಅದರೊಂದಿಗೆ ಒಡನಾಡಿದರು.

ಸಿನಿಮಾ ಪತ್ರಕರ್ತರಾಗಿ–ಪತ್ರಿಕಾ ವಿತರಕರಾಗಿ 60 ವರ್ಷಗಳ ಕಾಲ ಕೆ.ಜೆ. ಕುಮಾರ್ ಕೆಲಸ ಮಾಡಿದ್ದಾರೆ, ಶ್ರೀಮತಿ ಭಾರತಿ ಹಾಗೂ ವಿಷ್ಣುವರ್ಧನ್ ಇಬ್ಬರಿಗೂ ಮದುವೆ ಮಾಡಿಸುವಲ್ಲಿ ಕೆಜೆ ಕುಮಾರ್ ಅವರ ಪಾತ್ರ ದೊಡ್ಡದು, ಅಂತಿಮ ದರ್ಶನಕ್ಕೆ ಬಂದಿದ್ದ ಭಾರತಿ ಅವರು ಇದನ್ನೇ ನೆನಪಿಸಿಕೊಂಡು ದುಃಖಿಸಿದರು, ನಟ ಕೋಮಲ್, ಹಿರಿಯನಟ ಜೈಜಗದೀಶ್, ಪತ್ನಿ ವಿಜಯಲಕ್ಷ್ಮಿಸಿಂಗ್‌ರೊಂದಿಗೆ ಬಂದು ಭಾವುಕರಾದರು, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಶ್ರೀಮತಿ ಜಯಮಾಲ ಮತ್ತು ಹಿರಿಯನಟಿ ಹೇಮಾಚೌಧರಿ ಶೋಕ ಸಂದೇಶ ಕಳುಹಿಸಿದ್ದರು.

1970ರಲ್ಲಿ ಸುಧಾ ವಾರಪತ್ರಿಕೆ, ನಂತರ ಮದ್ರಾಸ್‌ನಿಂದ ಪ್ರಕಟವಾಗುತ್ತಿದ್ದ ವಿಜಯಚಿತ್ರ, ರೂಪತಾರಾ ಸಿನಿಮಾಸಿಕದಲ್ಲಿ ವರದಿಗಾರರಾಗಿ ಕೆಜೆ ಕುಮಾರ್ ಕೆಲಸ ಮಾಡಿದ್ದರು, ಸಾಕಷ್ಟು ಕಲಾವಿದರು ಹಾಗೂ ತಂತ್ರಜ್ಞರನ್ನು ತಮ್ಮ ಪ್ರೋತ್ಸಾಹದಾಯಕ ಬರವಣಿಗೆಯಿಂದ ಬೆಳೆಸಿದರು. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್‌ರಂಥ ಹಿರಿಯ ಕಲಾವಿದರಲ್ಲದೆ, ಶಿವರಾಜ್ ಕುಮಾರ್, ಜಗ್ಗೇಶ್, ಶಶಿಕುಮಾರ್, ಸುದೀಪ್, ದರ್ಶನ್, ಗಣೇಶ್, ದುನಿಯಾ ವಿಜಯ್‌ರಂಥ ಸ್ಟಾರ್ ಕಲಾವಿದರ ಜತೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು.

ಇವರ ಬರಹದ ಶೈಲಿಗೆ ಸೂಪರ್‌ಸ್ಟಾರ್ ರಜನಿಕಾಂತ್ ಕೂಡ ಬೆರಗಾಗಿದ್ದರು. 1975ರಲ್ಲಿ ಮೈಸೂರಿನ ಉತ್ತನಹಳ್ಳಿಯಲ್ಲಿ ನಡೆಯುತ್ತಿದ್ದ ಕಥಾಸಂಗಮ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ತಮ್ಮ ಬಗ್ಗೆ ಬರೆದಿದ್ದನ್ನು ಮರೆತಿರಲಿಲ್ಲ, 50 ವರ್ಷಗಳ ಹಿಂದೆ ತಮ್ಮಬಗ್ಗೆ ಬರೆದ ಲೇಖನವನ್ನು ಸ್ಮರಿಸಿ ರಜನಿಕಾಂತ್ ಎಕ್ಸ್ ಖಾತೆಯಲ್ಲಿ ಕೆ.ಜೆ. ಕುಮಾರ್ ಬಗ್ಗೆ ಹೃದಯತುಂಬಿದ ಶ್ರದ್ಧಾಂಜಲಿ ಸಲ್ಲಿಸಿದ್ದರು.

ಕನ್ನಡ ಚಿತ್ರರಂಗದ ಬೆಳವಣಿಗೆಯ ಬಗ್ಗೆ ಸದಾ ಚಿಂತಿಸುತ್ತಿದ್ದ ಕೆ.ಜೆ.ಕುಮಾರ್ ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಉಳಿವಿಗಾಗಿ ಸಾಕಷ್ಟು ಹೋರಾಟ ನಡೆಸಿದ್ದರು. ಪ್ರೀಮಿಯರ್ ಸ್ಟುಡಿಯೋ ಮುಚ್ಚಿದರೆ, ಇದನ್ನೇ ನಂಬಿಕೊಂಡು ಬದುಕುತ್ತಿರುವ ಸ್ಥಳೀಯ ಸಹಕಲಾವಿದರು, ತಂತ್ರಜ್ಞರ ಬದುಕು ಸಂಕಷ್ಟಕ್ಕೆ ಸಿಲುಕುತ್ತೆ ಅಂತ ಸರ್ಕಾರಕ್ಕೆ ಮನವಿ ಮಾಡಿದ್ದರು. ಸಹಕಲಾವಿದರ ಸಂಘದ ಗೌರವ ಅಧ್ಯಕ್ಷರಾಗಿ ಅವರು ನಡೆಸಿದ ಹೋರಾಟ ನಿಷ್ಫಲವಾದಾಗ ಹತಾಶರಾಗಿದ್ದರು. ವರದಿಗಾರರು, ವಿತರಕರಾಗಿಯೂ ಬೆಳೆದಿದ್ದ ಕೆ.ಜೆ.ಕುಮಾರ್ ಹೋಟೆಲ್ ಉದ್ಯಮಕ್ಕೆ ಕೈಹಾಕಿ ಸ್ವಲ್ಪ ನಷ್ಟವನ್ನೂ ಅನುಭವಿಸಿದರು. 2012ರಲ್ಲಿ ಹೊಸದಿಗಂತ ಪತ್ರಿಕೆಯ ಸಿನಿಮಾ ವಿಭಾಗದ ಮುಖ್ಯಸ್ಥರಾಗಿ ಕೊನೆ ಉಸಿರಿರುವವರೆಗೂ ಬದ್ಧತೆಯಿಂದ ಕೆಲಸ ಮಾಡುತ್ತಿದ್ದರು.

ಪ್ರಸ್ತುತ ನಾಯಕ ನಟರ ಧೋರಣೆ ಮತ್ತು ನಿರ್ಮಾಪಕರ ಬವಣೆ, ಇವರ ಮಧ್ಯೆ ಸಣ್ಣ–ಪುಟ್ಟ ಕಲಾವಿದರು ಹಾಗೂ ಸಿನಿಮಾ ತಂತ್ರಜ್ಞರು ಕೆಲಸವಿಲ್ಲದೆ ಕಷ್ಟ ಪಡುತ್ತಿರುವುದನ್ನು ತಮ್ಮ ಬರವಣಿಗೆಯ ಮೂಲಕ ತೋರಿಸಿಕೊಟ್ಟರು. ನಾಯಕ ನಟರು ದುಬಾರಿ ಸಂಭಾವನೆ ಕೈಬಿಟ್ಟು, ಸಣ್ಣ ಬಜೆಟ್ಟಿನ ಉತ್ತಮ ಚಿತ್ರಗಳು ನಿರ್ಮಾಣವಾದರೆ ಕನ್ನಡ ಚಿತ್ರರಂಗ ಉಳಿಯುತ್ತೆ ಎಂದು ಕನ್ನಡ ಚಿತ್ರರಂಗದ ಪುನಶ್ಚೇತನದ ಬಗ್ಗೆ ಯೋಚಿಸುತ್ತಿದ್ದ ಕೆ.ಜೆ.ಕುಮಾರ್ ಅವರ ಹಲವಾರು ಕನಸುಗಳು ಹಾಗೇ ಉಳಿದಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26